# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ



ಜೂನ್ 23 ಶುಕ್ರವಾರ 2023
ಸಂಪುಟ: 44 | ಸಂಚಿಕೆ: 68 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



## ಅಮೆರಿಕಾ ಶಕ್ತಿ ಕೇಂದ್ರ ಶ್ವೇತಭವನದಲ್ಲಿ
# ಮೈಸೂರು ಶ್ರೀಗಂಧದ ಕಂಪು!

● ಆದರದ ಸ್ವಾಗತದೊಂದಿಗೆ ಔತಣಕೂಟ ನೀಡಿ ಸತ್ಕರಿಸಿದ ಅಮೆರಿಕಾ ಅಧ್ಯಕ್ಷ ಜೋ ಬೈಡನ್‌ಗೆ ಪ್ರಧಾನಿ ಮೋದಿ ಭಾರತೀಯ ಭವ್ಯ ಪರಂಪರೆ ಪ್ರತೀಕ 'ದಶ ದಾನ'
● ಮೈಸೂರಿನ ಶ್ರೀಗಂಧದ ಪೆಟ್ಟಿಗೆಯಲ್ಲಿ 10 ಪವಿತ್ರ ವಸ್ತುಗಳ ಉಡುಗೊರೆ





ಪ್ರಧಾನಿ ನರೇಂದ್ರ ಮೋದಿ ಅವರಿಂದ ಅಮೆರಿಕಾ ಅಧ್ಯಕ್ಷ ಜೋ ಬೈಡನ್ ದಂಪತಿಗೆ ಮೈಸೂರು ಶ್ರೀಗಂಧದ ಪೆಟ್ಟಿಗೆಯಲ್ಲಿ ದಶದಾನ ಉಡುಗೊರೆ

ವಾಷಿಂಗ್ಟನ್, ಜೂ.22– ಮೈಸೂರಿನ ಶ್ರೀಗಂಧದ ಕಂಪು ವಿಶ್ವದೆಲ್ಲೆಡೆ ಪಸರಿಸಿದೆ. ಇದೀಗ ಅಮೆರಿಕಾದ ಶಕ್ತಿ ಕೇಂದ್ರವಾದ ಶ್ವೇತ ಭವನಕ್ಕೂ ಹಬ್ಬಿದೆ. ಶ್ರೀಗಂಧದ ಪೆಟ್ಟಿಗೆ ಹಾಗೂ ಶ್ರೀಗಂಧದ ತುಂಡು ವೈಟ್‌ಹೌಸ್ ತಲುಪಿದೆ.

ಅಮೆರಿಕಾ ಪ್ರವಾಸದಲ್ಲಿರುವ ಭಾರತ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕಾ ಅಧ್ಯಕ್ಷ ಜೋ ಬೈಡನ್ ಮತ್ತು ಅವರ ಪತ್ನಿ ಜಿಲ್ ಬೈಡನ್ ಅವರು ಶ್ವೇತಭವನದಲ್ಲಿ ಆಯೋಜಿಸಿದ್ದ ಖಾಸಗಿ ಔತಣಕೂಟದಲ್ಲಿ ನರೇಂದ್ರ ಮೋದಿ ಯವರು ಮೈಸೂರಿನ ಶ್ರೀಗಂಧದ ಪೆಟ್ಟಿಗೆಯಲ್ಲಿ 'ದಶ ದಾನ'ವನ್ನು ಬೈಡನ್ ಅವರಿಗೆ ಉಡುಗೊರೆಯಾಗಿ ನೀಡಿದರು. ಅಲ್ಲದೇ ಜಿಲ್ ಬೈಡನ್ ಅವರಿಗೆ ಹಸಿರು ವಜ್ರವನ್ನು ನೀಡಿದರು.

**ಸಹಸ್ರ ಚಂದ್ರ ದರ್ಶನ:** 80 ವರ್ಷ ಪೂರೈಸಿದ ವ್ಯಕ್ತಿಯನ್ನು ಒಂದು ಸಾವಿರ ಹುಣ್ಣಿಮೆಗಳನ್ನು ನೋಡಿದ ಜೀವನ ಸಂಪೂರ್ಣ ಅನುಭವಕ್ಕಾಗಿ ದಶ ದಾನ ನೀಡಿ ಗೌರವಿಸಲಾಗುತ್ತದೆ. 10 ವಿವಿಧ ರೀತಿಯ ದಾನಗಳನ್ನು ನೀಡುವ ದಶ ದಾನ ಪದ್ಧತಿ ಭಾರತದಲ್ಲಿದೆ. ಹಸು ದಾನ, ಭೂ ದಾನ, ಎಳ್ಳು, ಚಿನ್ನ, ತುಪ್ಪ, ಆಹಾರ ಧಾನ್ಯಗಳು, ಬೆಲ್ಲ, ಬೆಳ್ಳಿ, ಉಪ್ಪು ಹಾಗೂ ● 9ನೇ ಪುಟಕ್ಕೆ

### ಬೆಂಗಳೂರು, ಅಹಮದಾಬಾದ್‌ನಲ್ಲಿ ಅಮೆರಿಕಾದ ಕಾನ್ಸುಲೇಟ್ ಕಚೇರಿ

**ವಾಷಿಂಗ್ಟನ್:** ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಎರಡು ಕಾನ್ಸುಲೇಟ್ ಕಚೇರಿಗಳನ್ನು ತೆರೆಯಲು ಅಮೆರಿಕಾ ಉದ್ದೇಶಿಸಿದೆ. ಅದೇ ರೀತಿ ಅಮೆರಿಕಾದ ಸಿಯಾಟಲ್‌ನಲ್ಲಿ ತನ್ನ ರಾಜತಾಂತ್ರಿಕ ಕಚೇರಿಯನ್ನು ಭಾರತ ತೆರೆಯಲಿದೆ ಎಂದು ಶ್ವೇತಭವನದ ● 9ನೇ ಪುಟಕ್ಕೆ

## ಇಂದು ಆಷಾಢ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ: ಬೆಳಗ್ಗೆ 5 ಗಂಟೆಯಿಂದ ಚಾಮುಂಡಿಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆ
# ಬನ್ನಿ... ಚಾಮುಂಡೇಶ್ವರಿ ದರ್ಶನಭಾಗ್ಯ ಪಡೆಯಿರಿ...

● ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರರ ಸ್ವಾಗತ ● ರಾತ್ರಿ 8 ಗಂಟೆವರೆಗೆ ಬೆಟ್ಟಕ್ಕೆ ಹೋಗಲು ಬಸ್ ವ್ಯವಸ್ಥೆ; ವಾಪಸ್ಸಾಗಲು ಸಮರ್ಪಕ ಬಸ್ ಸೌಕರ್ಯ ● ಮೆಟ್ಟಿಲು ಮೂಲಕ ಮುಂಜಾನೆ 3 ಗಂಟೆಯಿಂದಲೇ ಅವಕಾಶವಿದೆ ● ಎಲ್ಲಾ ಸುರಕ್ಷತಾ ಕ್ರಮಗಳ ಭರವಸೆ; ಪಾಸ್ ವ್ಯವಸ್ಥೆ ಇಲ್ಲ





ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಗುರುವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಮೊದಲ ಆಷಾಢ ಶುಕ್ರವಾರದ ಸಿದ್ಧತೆಗಳನ್ನು ಪರಿಶೀಲಿಸಿದರು.

ಮೈಸೂರು, ಜೂ.22(ಸಿಎನ್)– ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಆಷಾಢ ಶುಕ್ರವಾರಗಳು ಹಾಗೂ ವರ್ಧಂತಿಯಂದು ವಿಶೇಷ ಪೂಜೆ ಮತ್ತು ಭಕ್ತರ ದರ್ಶನ ವ್ಯವಸ್ಥೆ ಸೇರಿದಂತೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರಗಳಾದ ಜೂ.23, ಜೂ.30, ಜುಲೈ 7 ಹಾಗೂ 14 ಮತ್ತು ವರ್ಧಂತಿ (ಜೂ.10) ದಿನಗಳಲ್ಲಿ ವಿಶೇಷ ಪೂಜೆ ನೆರವೇರಲಿದೆ. ಆಷಾಢ ಮಾಸದ ಈ ಐದು ದಿನಗಳಲ್ಲಿ ಲಕ್ಷಾಂತರ ಭಕ್ತರು ಆಗಮಿಸಿ ತಾಯಿಯ ದರ್ಶನ ಪಡೆಯುತ್ತಾರೆ. ಈ ಬಾರಿ ಸ್ವಚ್ಛತೆ ಹಾಗೂ ಸುರಕ್ಷತೆಗೆ ವಿಶೇಷ ಆದ್ಯತೆ ನೀಡುವುದರೊಂದಿಗೆ ಯಾವುದೇ ತೊಂದರೆಯಾಗದಂತೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಗುರುವಾರ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಸಿದ್ಧತೆಗಳ ಬಗ್ಗೆ ವಿವರ ನೀಡಿ, ಆಷಾಢ ಮಾಸದ ● 6ನೇ ಪುಟಕ್ಕೆ

### ವಿಶೇಷ ದರ್ಶನದಲ್ಲಿ ಹಿರಿಯರಿಗೆ ಅವಕಾಶ

ಪುಣ್ಯಕ್ಷೇತ್ರಗಳಲ್ಲಿ 60 ವರ್ಷ ಮೇಲ್ಪಟ್ಟ ಹಿರಿಯರಿಗೆ ನೇರ ದರ್ಶನಕ್ಕೆ ಅವಕಾಶ ಕಲ್ಪಿಸುವಂತೆ ಸರ್ಕಾರದ ಸೂಚನೆ ಬಂದಿರುವ ಹಿನ್ನೆಲೆಯಲ್ಲಿ ಈ ಐದು ವಿಶೇಷ ದಿನಗಳಲ್ಲಿ 50 ರೂ. ವಿಶೇಷ ದರ್ಶನದ ಸರತಿಯಲ್ಲಿ ಉಚಿತವಾಗಿ ದೇವಾಲಯ ಪ್ರವೇಶಿಸಲು ಅವಕಾಶ ಮಾಡಿಕೊಡಲಾಗಿದೆ. ಹಿರಿಯರೊಂದಿಗೆ ಸಹಾಯಕ್ಕೆ ತೆರಳುವವರಿದ್ದರೆ ಅವರು ಟಿಕೆಟ್ ಪಡೆಯಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸ್ಪಷ್ಟಪಡಿಸಿದರು.

### ಮೆಟ್ಟಿಲು ಹತ್ತಿ ಬಸ್‌ನಲ್ಲಿ ವಾಪಸಾಗಿ

ಮೆಟ್ಟಿಲು ಮಾರ್ಗದಲ್ಲಿ ದ್ವಿಮುಖ ಸಂಚಾರದಿಂದ ಜನದಟ್ಟಣೆ ಉಂಟಾಗುತ್ತದೆ. ಹಾಗಾಗಿ ಬೆಟ್ಟಕ್ಕೆ ಹೋಗಿ ದರ್ಶನ ಪಡೆಯುವ ಭಕ್ತರು, ಅಲ್ಲಿಂದ ಉಚಿತವಾಗಿ ಬಸ್ ಮೂಲಕ ವಾಪಸಾಗುವಂತೆ ಮನವಿ ಮಾಡುತ್ತೇನೆ. ಮೆಟ್ಟಿಲುಗಳಲ್ಲಿ ಹತ್ತುವುದಷ್ಟೇ ಇದ್ದರೆ ಸಮಸ್ಯೆಯಾಗುವುದಿಲ್ಲ. ಮುಂಜಾಗ್ರತಾ ಕ್ರಮವಾಗಿ ಲೆಪರ್ಡ್ ಟಾಸ್ಕ್ ಫೋರ್ಸ್ ನಿಯೋಜಿಸಲಾಗಿದೆ. ಮುಂಜಾನೆ 3 ಗಂಟೆಯಿಂದಲೇ ಮೆಟ್ಟಿಲು ಮಾರ್ಗದಲ್ಲಿ ಬೆಟ್ಟಕ್ಕೆ ಹೋಗಲು ಅವಕಾಶವಿದ್ದು, ಏನಾದರೂ ಸಮಸ್ಯೆಯಾದರೆ ಅರಣ್ಯ ಇಲಾಖೆಯ 1926 ಸಹಾಯವಾಣಿಯನ್ನು ಸಂಪರ್ಕಿಸಬಹುದು.



## ಅಕ್ಕಿ ಗ್ಯಾರಂಟಿ ನೀಡದ ಕೇಂದ್ರ ಬರಿಗೈಲಿ ಬೆಂಗಳೂರಿಗೆ ಬಂದ
# ಸಿದ್ದರಾಮಯ್ಯ, ಮುನಿಯಪ್ಪ

● ಅನ್ನಭಾಗ್ಯದ ಅಕ್ಕಿ ತರುವ ಸಲುವಾಗಿಯೇ ದೆಹಲಿ ಯಾತ್ರೆ ಕೈಗೊಂಡಿದ್ದರು ● ಗೃಹ ಸಚಿವ ಅಮಿತ್ ಶಾ ಭೇಟಿಯಾದರೂ ಅವರಿಂದ ಮುಖ್ಯಮಂತ್ರಿಗಳಿಗೆ ದೊರೆಯದ ಖಾತರಿ
● ಮುನಿಯಪ್ಪ ಭೇಟಿಗೆ ಅವಕಾಶವನ್ನೇ ನೀಡದ ಕೇಂದ್ರ ಆಹಾರ ಸಚಿವ ಪಿಯೂಷ್ ಗೋಯಲ್; ಕೊನೆಗೆ ಭತ್ತ ಬೆಳೆಯುವ ರಾಜ್ಯಗಳೊಂದಿಗೆ ಸಮಾಲೋಚನೆ



ಬೆಂಗಳೂರು, ಜೂ.22(ಕೆಎಂಶಿ)– ಅನ್ನಭಾಗ್ಯ ಯೋಜನೆಗೆ ಕೇಂದ್ರದಿಂದ ಅಕ್ಕಿ ನೀಡುವ ವಿಚಾರದಲ್ಲಿ ಯಾವುದೇ ಭರವಸೆ ದೊರೆಯದೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಬರಿಗೈನಲ್ಲಿ ಬೆಂಗಳೂರಿಗೆ ಹಿಂದಿರುಗಿದ್ದಾರೆ.

ಕೇಂದ್ರ ಸರ್ಕಾರದ ಮನವೊಲಿಸಿ ಅಕ್ಕಿ ತರುವ ಉದ್ದೇಶದಿಂದ ಮುಖ್ಯಮಂತ್ರಿ ಅವರು ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿದ್ದರೂ ಉದ್ದೇಶ ಈಡೇರದೆ ರಾಜ್ಯಕ್ಕೆ ಮರಳಿದ್ದಾರೆ. ಆಹಾರ ಮತ್ತು ನಾಗರಿಕ ಸರಬರಾಜು ಉಸ್ತುವಾರಿ ಹೊಣೆ ಹೊತ್ತಿರುವ ಪಿಯೂಷ್ ಗೋಯಲ್ ತಮ್ಮ ಭೇಟಿಗೂ ಅವಕಾಶ ನೀಡದೆ, ಮುನಿಯಪ್ಪ ಅವರು ಬರಿಗೈಯ್ಯಲ್ಲಿ ಬರುವಂತಾಗಿದೆ. ಕಳೆದ ಮೂರು ದಿನಗಳ ಹಿಂದೆಯೇ ದೆಹಲಿಯಲ್ಲಿ ಬಿಡಾರ ಹೂಡಿ ಕೇಂದ್ರ ಸಚಿವರ ಭೇಟಿಗೆ ಅವಕಾಶಕ್ಕಾಗಿ ಕಾದಿದ್ದರು. ಮುನಿಯಪ್ಪ ಅವರಿಗೆ ಕೊನೆಗೂ ಸಮಯಾವಕಾಶ ನೀಡಲೇ ಇಲ್ಲ. ಪಿಯೂಷ್ ಗೋಯಲ್ ಅವರ ಭೇಟಿಗೆ ಅವಕಾಶ ನೀಡದಿರುವ ಬಗ್ಗೆ ದೆಹಲಿಯಲ್ಲೇ ಇದ್ದ ಮುಖ್ಯಮಂತ್ರಿ ಅವರಿಗೆ ಮಾಹಿತಿ ನೀಡಿ, ಭತ್ತ ಬೆಳೆಯುವ ರಾಜ್ಯಗಳ ಜೊತೆ ಸಂಪರ್ಕ ಬೆಳೆಸಿ ಸಮಾಲೋಚನೆ ನಡೆಸಿದರು. ● 9ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 23 ಜೂನ್ 2023

# ಮೈಸೂರು ಶೃಂಗೇರಿ ಶಂಕರ ಮಠದಲ್ಲಿ ಆಷಾಢ ಶುಕ್ರವಾರ ಪೂಜಾ ಮಹೋತ್ಸವ



ಮೈಸೂರು, ಜೂ. 22– ಮೈಸೂರಿನ ಫೋರ್ಟ್ ಮೊಹಲ್ಲಾದಲ್ಲಿರುವ ಅಭಿನವ ಶಂಕರಾಲಯ, ಶಂಕರಮಠದ ಆವರಣದಲ್ಲಿ ಆಷಾಢ ಶುಕ್ರವಾರಗಳ ವಿಶೇಷ ಪೂಜಾ ಮಹೋತ್ಸವವನ್ನು ಜೂ.23, 30, ಜು.7 ಮತ್ತು ಜು.14ರಂದು ಏರ್ಪಡಿಸಲಾಗಿದೆ.

ಜೂ.23ರಂದು 1ನೇ ಆಷಾಢ ಶುಕ್ರವಾರದಂದು ಶಾರದಾದೇವಿಗೆ ಮಹಾ ಸಂಕಲ್ಪ ನಂತರ ಅಭಿಷೇಕ, ಮಹಾಲಕ್ಷ್ಮಿ ಹೋಮ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.00 ಗಂಟೆಗೆ ಶಾರದಾದೇವಿಗೆ ಶ್ರೀ ಗಜಲಕ್ಷ್ಮಿ ಅಲಂಕಾರ, ನಂತರ ವಿದುಷಿ ಕುಮಾರಿ ಕೀರ್ತನ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತವನ್ನು ಏರ್ಪಡಿಸಲಾಗಿದೆ.

ಜೂ.30ರಂದು 2ನೇ ಆಷಾಢ ಶುಕ್ರವಾರದಂದು ಶಾರದಾದೇವಿಗೆ ಮಹಾ ಸಂಕಲ್ಪ ನಂತರ ಅಭಿಷೇಕ, ಸರಸ್ವತಿ ಹೋಮ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಶ್ರೀ ಸರಸ್ವತಿ ಅಲಂಕಾರ, ಶ್ರೀ ವಿದುಷಿ ಲಕ್ಷ್ಮೀ ಮತ್ತು ವೃಂದದವರಿಂದ ವೀಣಾವಾದನ.

ಜು.7ರಂದು 3ನೇ ಆಷಾಢ ಶುಕ್ರವಾರದಂದು ಶಾರದಾದೇವಿಗೆ ಮಹಾ ಸಂಕಲ್ಪ ನಂತರ ಅಭಿಷೇಕ, ದುರ್ಗಾ ಹೋಮ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಶಾರದಾ ದೇವಿಗೆ ವೈಷ್ಣವಿ ಅಲಂಕಾರ, ನಂತರ ವಿದ್ವಾನ್ ರಜತ್ ಶರ್ಮ ಅವರಿಂದ ಹಾಡುಗಾರಿಕೆ.

ಜು.14ರಂದು 4ನೇ ಆಷಾಢ ಶುಕ್ರವಾರದಂದು ಶಾರದಾದೇವಿಗೆ ಮಹಾ ಸಂಕಲ್ಪ ನಂತರ ಅಭಿಷೇಕ, ಶ್ರೀ ಚಂಡಿ ಹೋಮ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಶ್ರೀ ಶಾರದಾದೇವಿಗೆ ಶ್ರೀ ರಾಜರಾಜೇಶ್ವರಿ ಅಲಂಕಾರ, ನಂತರ ವಿದುಷಿ ರೂಪನಗುಡಿ ರತ್ನ ತೇಜ ಮತ್ತು ವಿದುಷಿ ದಿವ್ಯಶ್ರೀ ವೃಂದದವರಿಂದ ವಯೋಲಿನ್ ವಾದನವನ್ನು ಏರ್ಪಡಿಸಲಾಗಿದೆ ಎಂದು ಶ್ರೀ ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ಹೆಚ್.ರಾಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಭಕ್ತಾದಿಗಳು ಮಾಹಿತಿಗಾಗಿ ದೂ.ಸಂಖ್ಯೆ: 0821–2448213 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಮೈಸೂರಿಗೆ 4 ಹೆಚ್ಚುವರಿ ಹೆದ್ದಾರಿ ಗಸ್ತು ವಾಹನಗಳು

## ಒಟ್ಟಾರೆ ಎಂಟು ವಾಹನಗಳು ಕಾರ್ಯಾಚರಣೆ, ತುರ್ತು ಸಂದರ್ಭಗಳಲ್ಲಿ 112ಕ್ಕೆ ಕರೆ ಮಾಡಲು ಸಲಹೆ



ಮೈಸೂರು, ಜೂ.22(ಆರ್‌ಕೆ)–ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ತುರ್ತು ಸಂದರ್ಭಗಳಲ್ಲಿ ಸಂತ್ರಸ್ತರ ರಕ್ಷಣೆಗಾಗಿ ಮೈಸೂರು ನಗರಕ್ಕೆ 4 ಹೆಚ್ಚುವರಿ ಹೆದ್ದಾರಿ ಗಸ್ತು (ಹೈವೇ ಪೆಟ್ರೋಲಿಂಗ್) ವಾಹನಗಳನ್ನು ಸರ್ಕಾರ ಪೂರೈಸಿದೆ.

ಕಳೆದ ಶುಕ್ರವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಸಶಸ್ತ್ರ ಮೀಸಲು ಪಡೆ (CAR) ಮೈದಾನದಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, 4 ಹೊಸ ಹೈವೇ ಪೆಟ್ರೋಲಿಂಗ್ ವಾಹನಗಳ ಕಾರ್ಯಾಚರಣೆಗೆ ಹಸಿರು ನಿಶಾನೆ ತೋರಿದರು.

ಚಾಲಕರು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಮೂರೂ ಪಾಳಿಗೆ ಈ ವಾಹನಗಳನ್ನು ಹೆದ್ದಾರಿಗಳಲ್ಲಿ ಕಾರ್ಯಾಚರಣೆಗಿಳಿಸಲಾಗಿದೆ. ಅಪಘಾತ, ದರೋಡೆ, ಸುಲಿಗೆ, ಕೊಲೆಯಂತಹ ಪ್ರಕರಣಗಳು ಸಂಭವಿಸಿದಾಗ ಮಾಹಿತಿ ಬಂದ ಕೂಡಲೇ ಗಸ್ತಿನಲ್ಲಿರುವ ಈ ವಾಹನಗಳು ಘಟನಾ ಸ್ಥಳಕ್ಕೆ ತೆರಳಿ, ರಕ್ಷಣಾ ಕಾರ್ಯಕ್ಕಿಳಿಯಲಿವೆ.

ಯಾವುದೇ ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ತುರ್ತು ಸ್ಪಂದನಾ ಸಹಾಯ ವ್ಯವಸ್ಥೆ (ಎಮರ್ಜೆನ್ಸಿ ರೆಸ್ಪಾನ್ಸ್ ಸಪೋರ್ಟ್ ಸಿಸ್ಟಂ–ERSS) ಸಂಖ್ಯೆ 112ಕ್ಕೆ ಕರೆ ಮಾಡುವಂತೆ ಸೂಚಿಸಲಾಗಿದೆ. ಈ ಹಿಂದೆಯೇ ಮೈಸೂರು ನಗರಕ್ಕೆ 4 ಗಸ್ತು ಪಹರೆ ವಾಹನಗಳನ್ನು ಪೂರೈಸಲಾಗಿತ್ತು. ಅವುಗಳು ರಿಂಗ್ ರಸ್ತೆ, ಅದಕ್ಕೆ ಸಂಪರ್ಕ ಕಲ್ಪಿಸುವ ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಸ್ತು ನಡೆಸುತ್ತಿದ್ದವು. ಇದೀಗ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಹೈವೇಗಳಲ್ಲಿ ಅಪಘಾತಗಳು ಹೆಚ್ಚಾಗಿವೆ. ಅಪರಾಧ ಪ್ರಕರಣಗಳು ಸಂಭವಿಸಿದಾಗ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರ ಪ್ರಸ್ತಾವನೆ ಮೇರೆಗೆ ಸರ್ಕಾರ ನಾಲ್ಕು ಹೆಚ್ಚುವರಿ ವಾಹನಗಳನ್ನು ಒದಗಿಸಿದೆ.

ಈ ವಾಹನಗಳಲ್ಲಿ ಪ್ರತಿಯೊಂದರಲ್ಲಿ ಚಾಲಕ ಸೇರಿ ನಾಲ್ವರು ಸಿಬ್ಬಂದಿಗಳಿದ್ದು, ಪ್ರಥಮ ಚಿಕಿತ್ಸೆ ಸಲಕರಣೆಗಳು ಹಾಗೂ ಇನ್ನಿತರ ರಕ್ಷಣಾ ಸಾಮಗ್ರಿಗಳಿರುತ್ತವೆ. 112ಕ್ಕೆ ಕರೆ ಮಾಡಿದರೆ, ಪೊಲೀಸ್ ಕಂಟ್ರೋಲ್ ರೂಂನಿಂದ ಘಟನೆ ನಡೆದ ಸ್ಥಳಕ್ಕೆ ಸಮೀಪದಲ್ಲಿರುವ ಹೈವೇ ಪೆಟ್ರೋಲಿಂಗ್ ವಾಹನಕ್ಕೆ ಮಾಹಿತಿ ರವಾನೆಯಾಗುತ್ತದೆ. ಸಿಬ್ಬಂದಿಗಳು ಕೆಲವೇ ಕ್ಷಣದಲ್ಲಿ ಸ್ಥಳಕ್ಕೆ ಧಾವಿಸುತ್ತಾರೆ.

ಅಪಘಾತವಾಗಿದ್ದರೆ ಕೂಡಲೇ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುವರು. ಇನ್ನಿತರೆ ಅಪರಾಧ ಪ್ರಕರಣಗಳಲ್ಲಿ ಕ್ಷಿಪ್ರ ಕಾರ್ಯಾಚರಣೆಗಿಳಿಯುತ್ತವೆ. ಈಗಾಗಲೇ ಪಿಸಿಆರ್ (ಪೊಲೀಸ್ ಕಂಟ್ರೋಲ್ ರೂಂ) ವಾಹನಗಳ ಜೊತೆಗೆ ನಾಲ್ಕು ಹೈವೇ ಗಸ್ತು ವಾಹನಗಳೂ ಕಾರ್ಯ ನಿರ್ವಹಿಸುತ್ತಿದ್ದು, ಈಗ ಮತ್ತೆ ನಾಲ್ಕು ವಾಹನಗಳು ಸೇರ್ಪಡೆಯಾಗಿರುವುದರಿಂದ ಮೈಸೂರು ನಗರ ಕಮೀಷ್ನರೇಟ್ ವ್ಯಾಪ್ತಿಯ ಹೆದ್ದಾರಿಗಳಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ರಕ್ಷಣಾ ಕಾರ್ಯಾಚರಣೆಯನ್ನು ನಿರೀಕ್ಷಿಸಬಹುದಾಗಿದೆ ಎಂದು ಅವರು ತಿಳಿಸಿದರು.

# ಪ್ರತಾಪ್ ಸಿಂಹ ಹೇಳಿಕೆಗೆ ಖಂಡನೆ



ಮೈಸೂರು,ಜೂ.22(ಪಿಎಂ)–ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಎಂ.ಬಿ.ಪಾಟೀಲ್ ಕುರಿತು ಸಂಸದ ಪ್ರತಾಪ್ ಸಿಂಹ ಲಘುವಾಗಿ ಮಾತನಾಡಿದ್ದು, ಖಂಡನೀಯ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಲ ಸಂಪನ್ಮೂಲ ಖಾತೆ ಬಗ್ಗೆ ಪ್ರತಾಪ್ ಸಿಂಹ ಅವರು ನೀಡಿರುವ ಹೇಳಿಕೆ ನೋಡಿದರೆ ಅವರ ಸರ್ಕಾರದ ಅವಧಿಯಲ್ಲಿ ಈ ಇಲಾಖೆಯಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಯುತ್ತಿತ್ತು ಎಂಬ ಅನುಮಾನ ಬರುತ್ತದೆ. ಸಿಎಂ ಸಿದ್ದರಾಮಯ್ಯ ಸಂಪುಟದಲ್ಲಿ ಪ್ರಾಮಾಣಿಕ ಸಚಿವರು ಇದ್ದು, ಕಾಂಗ್ರೆಸ್ಸಿಗರ ಬಗ್ಗೆ ಲಘುವಾಗಿ ಮಾತನಾಡುವುದನ್ನು ಸಂಸದ ಪ್ರತಾಪ್ ಸಿಂಹ ನಿಲ್ಲಿಸಬೇಕೆಂದು ಒತ್ತಾಯಿಸಿದರು. ಮುಖಂಡರಾದ ಧನ್‌ಪಾಲ್ ಕುರುಬಾರಹಳ್ಳಿ, ಎಸ್.ಎ.ರಹಿಂ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಶೀಘ್ರ ಗುಣಮುಖರಾಗಲೆಂದು ಡಾ.ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ಚಾಮುಂಡಿ ಬೆಟ್ಟದ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಹೊಡೆಯಲಾಯಿತು. ಈ ವೇಳೆ ವರುಣಾ ಕ್ಷೇತ್ರದ ಅಧ್ಯಕ್ಷ ಶಿವಕುಮಾರ್, ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಕಂಸಾಳೆ ರವಿ, ಸಂಜಯ್, ಸಿದ್ದರಾಮು, ದೀಕ್ಷಿತ್, ಮುತ್ತುರಾಜು ಇದ್ದರು.

# ವಿದ್ಯುತ್ ದರ ಹೆಚ್ಚಳಕ್ಕೆ ವಿರೋಧ: ಇಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕೈಗಾರಿಕೋದ್ಯಮಿಗಳ ಸಭೆ



ಬೆಂಗಳೂರು, ಜೂ.22 (ಕೆಎಂಶಿ)–ವಿದ್ಯುತ್ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕೈಗಾರಿಕೋದ್ಯಮಿಗಳ ಸಭೆಯನ್ನು ಶುಕ್ರವಾರ ಕರೆಯಲಾಗಿದೆ ಎಂದು ಸಣ್ಣ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭೆಯಲ್ಲಿ ಕೈಗಾರಿಕೋದ್ಯಮಿಗಳು ಭಾಗಿಯಾಗಲಿದ್ದು, ಒಂದು ಪರಿಹಾರಕ್ಕೆ ಬರಲಾಗುವುದು ಎಂದು ಅವರು ತಿಳಿಸಿದರು.

ಸಣ್ಣ ಕೈಗಾರಿಕೆಗಳಿಂದ ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಪ್ರತಿಭಟನೆ ಮಾಡಲಾಗುತ್ತಿದೆ. ರಾಜ್ಯದ ಕೆಲವೆಡೆ ಸಣ್ಣ ಕೈಗಾರಿಕೆಗಳ ಸಂಘದವರು ಪ್ರತಿಭಟನೆ ಮಾಡುತ್ತಿದ್ದಾರೆ. ಕೆಇಆರ್‌ಸಿ ವಿದ್ಯುತ್ ದರ ಹೆಚ್ಚಳ ಮಾಡಿದೆ. ವಿಧಾನಸಭಾ ಚುನಾವಣೆ ವೇಳೆ ವಿದ್ಯುತ್ ದರ ಹೆಚ್ಚಳ ಮಾಡಿ ಆದೇಶ ಹೊರಡಿಸಲಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಸಚಿವರು ತಿಳಿಸಿದರು.

# ಮೋದಿ–ಬೈಡನ್ ಚರ್ಚೆ: ಆಂತರಿಕ ಭದ್ರತೆ, ಸೇನೆ ಬಲವೃದ್ಧಿಗೆ ಆದ್ಯತೆ

## ಅಮೆರಿಕದಿಂದ ಶಸ್ತ್ರಸಜ್ಜಿತ ಡ್ರೋನ್ ಖರೀದಿಸಲಿರುವ ಭಾರತ

**ವಾಷಿಂಗ್ಟನ್:** ರಾಷ್ಟ್ರೀಯ ಭದ್ರತೆ ಮತ್ತು ಕಣ್ಗಾವಲು ಕಾರ್ಯಕ್ಕೆ ಹೆಚ್ಚಿನ ಬಲ ನೀಡಲಿದೆ ಎನ್ನಲಾದ 'ಎಂಕ್ಯೂ–9 ರೀಪರ್' ಶಸ್ತ್ರಸಜ್ಜಿತ ಡ್ರೋನ್ ಅನ್ನು ಭಾರತವು ಖರೀದಿಸಲಿದೆ. ಪ್ರಧಾನಿ ಮೋದಿ, ಅಧ್ಯಕ್ಷ ಜೋ ಬೈಡನ್ ಚರ್ಚೆ ವೇಳೆ ಈ ಕುರಿತ ಒಪ್ಪಂದಕ್ಕೆ ಬರಲಾಗಿದೆ.

ಜನರಲ್ ಆಟೋಮಿಕ್ಸ್ ಸಂಸ್ಥೆಯು ಅಮೆರಿಕ ಸೇನೆಗೆ ಈ ಡ್ರೋನ್ ಅನ್ನು ತಯಾರಿಸುತ್ತಿದೆ. ಹಿಂದಿನ 'ಎಂಕ್ಯೂ–1' ಮಾದರಿಗೆ ಹೋಲಿಸಿದರೆ ಎಂಕ್ಯೂ–9 ಮಾದರಿಯು ಶೇ.500ರಷ್ಟು ಹೆಚ್ಚು ತೂಕ ಒಯ್ಯುವ ಮತ್ತು ಶೇ.9ರಷ್ಟು ಅಧಿಕ ಅಶ್ವಶಕ್ತಿ ಸಾಮರ್ಥ್ಯವನ್ನು ಒಳಗೊಂಡಿದೆ.

ಹೆಚ್ಚು ದೂರ ಸಂಚರಿಸಬಹುದಾದ, ನಿಖರ ಕಣ್ಗಾವಲು ಹಾಗೂ ದಾಳಿ ಸಾಮರ್ಥ್ಯವನ್ನು ಇದು ಒಳಗೊಂಡಿದೆ. 27 ಗಂಟೆ ಕಾಲ ಕಾರ್ಯನಿರತ ಸಾಮರ್ಥ್ಯದ ಇದರ ವೇಗ 240 ಕೆಟಿಎಎಸ್ ಆಗಿದ್ದು, 50 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸಲಿದೆ. ಸುಮಾರು 1,746 ಕೆ.ಜಿ ತೂಕದ ಸಾಮರ್ಥ್ಯ ಹೊಂದಿದೆ ಎಂದು ಜನರಲ್ ಆಟೋಮಿಕ್ಸ್ ತಿಳಿಸಿದೆ.

**'ಎಂಕೆ–2–ತೇಜಸ್' ಎಂಜಿನ್ ತಯಾರಿಕೆಗೆ ಒಪ್ಪಂದ:** ವಾಯುಪಡೆಯ ಲಘು ಯುದ್ಧ ವಿಮಾನ (ಎಲ್‌ಸಿಎ) 'ಎಂಕೆ–2–ತೇಜಸ್'ನ ಎಂಜಿನ್‌ಗಳನ್ನು ಭಾರತದಲ್ಲಿಯೇ ತಯಾರಿಸುವ ಬಗ್ಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಅಮೆರಿಕದ ಜಿಇ ಏರೋಸ್ಪೇಸ್ ಘೋಷಿಸಿದೆ. ಪ್ರಧಾನಿ ಮೋದಿ ಭೇಟಿ ವೇಳೆ ಮಹತ್ವದ ಈ ಘೋಷಣೆ ಹೊರಬಿದ್ದಿದೆ.

● ಸೆಮಿಕಂಡಕ್ಟರ್‌ಗಳ ಪೂರೈಕೆ ವ್ಯವಸ್ಥೆ ಬಲಪಡಿಸಲು ಭಾರತದೊಂದಿಗೆ ಅಮೆರಿಕ ಕಂಪನಿಗಳ ಸಹಯೋಗ. ● 60 ಸಾವಿರ ಭಾರತೀಯ ಎಂಜಿನಿಯರ್‌ಗಳಿಗೆ ತರಬೇತಿ ಕಾರ್ಯ ಆಯೋಜಿಸಲು ಲ್ಯಾಂಬ್ ರೀಸರ್ಚ್ ● ಸಂಶೋಧನೆ ಮತ್ತು ವಾಣಿಜ್ಯ ವಹಿವಾಟು ವೃದ್ಧಿಗಾಗಿ ಭಾರತದಲ್ಲಿ ಸೆಮಿಕಂಡಕ್ಟರ್ ಕೇಂದ್ರ ಸ್ಥಾಪನೆಗೆ ಅಪ್ಲೈಯಡ್ ಮೆಟಿರಿಯಲ್ಸ್ ● ಅಡ್ವಾನ್ಸಡ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ ಕುರಿತು ಔದ್ಯಮಿಕ, ಶಿಕ್ಷಣ ಕ್ಷೇತ್ರ ಮತ್ತು ಸರ್ಕಾರದ ನಡುವೆ ಸಹಭಾಗಿತ್ವ ಹೊಂದಲು ಪೂರಕ ವ್ಯವಸ್ಥೆ ಸ್ಥಾಪನೆ ● ಮುಕ್ತ ರೇಡಿಯೊ ಆ್ಯಕ್ಸೆಸ್ ನೆಟ್‌ವರ್ಕ್ (ಆರ್‌ಎಎನ್) ಸಿಸ್ಟಮ್ಸ್ ಒಳಗೊಂಡಂತೆ 5ಜಿ, 6ಜಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉಭಯ ದೇಶಗಳ ಸಹಭಾಗಿತ್ವಕ್ಕೆ ನಿರ್ಧಾರ



ಜಿಇ ಏರೋಸ್ಪೇಸ್‌ನ ಎಫ್–414 ಎಂಜಿನ್‌ಗಳನ್ನು ಭಾರತದಲ್ಲಿಯೇ ತಯಾರಿಸುವುದು ಈ ಒಪ್ಪಂದದ ಪ್ರಮುಖ ಭಾಗ. ಇದರ ರಫ್ತು ಅನುಮತಿ ಪಡೆಯಲು ಸಂಸ್ಥೆಯು ಅಮೆರಿಕ ಸರ್ಕಾರದ ಜೊತೆಗೆ ಚರ್ಚೆ ನಡೆಸಲಿದೆ ಎಂದು ಹೇಳಿಕೆ ತಿಳಿಸಿದೆ. ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರದ ಸಹಕಾರ ಬಲಪಡಿಸಲು, ಭಾರತ ಮುಖ್ಯವಾಗಿ ಎಚ್‌ಎಎಲ್ ಜೊತೆಗೆ ದೀರ್ಘಕಾಲಿಕ ಸಹಭಾಗಿತ್ವ ಹೊಂದುವಲ್ಲಿ ಒಪ್ಪಂದವಾಗಿದೆ ಎಂದು ಜಿಇ ಏರೋಸ್ಪೇಸ್‌ನ ಸಿಇಒ ಲಾರೆನ್ಸ್ ಕಲ್ಪ್ ಜೂನಿಯರ್ ತಿಳಿಸಿದರು.

# ಜೂ.27, ಚಾ.ನಗರ, ಮೈಸೂರು, ಮದ್ದೂರಲ್ಲಿ 'ಭವಿಷ್ಯ ನಿಧಿ ನಿಮ್ಮ ಹತ್ತಿರ' ಕಾರ್ಯಕ್ರಮ

## ಪಿಎಫ್ ಸದಸ್ಯರು ಅಹವಾಲು ಸಲ್ಲಿಕೆಗೆ ಅವಕಾಶ

ಮೈಸೂರು, ಜೂ.22–ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ಮೈಸೂರು ಕ್ಷೇತ್ರೀಯ ಕಚೇರಿಯ ಕ್ಷೇತ್ರೀಯ ಭವಿಷ್ಯ ನಿಧಿ ಆಯುಕ್ತರ ನೇತೃತ್ವದಲ್ಲಿ 'ಭವಿಷ್ಯ ನಿಧಿ ನಿಮ್ಮ ಹತ್ತಿರ' 2.0 ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಜೂ.27 (ಮಂಗಳವಾರ)ರ ಬೆಳಗ್ಗೆ 9 ಗಂಟೆಯಿಂದ ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯ ಕುದೇರು ಗ್ರಾಮದ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದಲ್ಲಿ, ಇದೇ ವೇಳೆ ಮೈಸೂರು ಹೆಬ್ಬಾಳು ಕೈಗಾರಿಕಾ ಪ್ರದೇಶದ ಎಚ್‌ಐಇಎಂಎ ಹಾಗೂ ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ಹಳೆ ಎಂಸಿ ರಸ್ತೆಯಲ್ಲಿನ ಟಿಎಪಿಸಿಎಂಎಸ್‌ನಲ್ಲಿ ಏರ್ಪಡಿಸಲಾಗಿದೆ. ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಈ ಕಾರ್ಯಕ್ರಮಕ್ಕೆ ಹಾಜರಾಗಿ, ಅಹವಾಲು ಸಲ್ಲಿಸಬಹುದು. ಆಸಕ್ತರು ಹೆಚ್ಚಿನ ವಿವರಗಳಿಗಾಗಿ, ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು 0821–2599200/222 ಮೂಲಕ ಸಂಪರ್ಕಿಸಬಹುದು ಇಲ್ಲವೇ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ, ಮೈಸೂರಿನ ಸಾಮಾಜಿಕ ಮಾಧ್ಯಮ ವೇದಿಕೆ (@epfomysore)ಗೆ ಭೇಟಿ ನೀಡಬಹುದು.

# ಪ್ರೊ. ಕೆ.ಎಸ್.ಭಗವಾನ್‌ಗೆ ಚಂಪಾ ಸಿರಿಗನ್ನಡ ಪ್ರಶಸ್ತಿ ಪ್ರದಾನ



ಮೈಸೂರು,ಜೂ.22–ಕರ್ನಾಟಕ ಸ್ವಾಭಿಮಾನಿ ವೇದಿಕೆ ವತಿಯಿಂದ ಜೂ.26ರಂದು ಸಂಜೆ 5.30ಕ್ಕೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್‌ನ ಅಕ್ಕಮಹಾದೇವಿ ಸಭಾಂಗಣದಲ್ಲಿ ಚಂಪಾ ಸಿರಿಗನ್ನಡ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿದ್ವಾಂಸ ಪ್ರೊ.ಕೆ.ಎಸ್.ಭಗವಾನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಹೇಮಲತಾ ಮಹಿಷಿ ಭಾಗವಹಿಸಲಿದ್ದು, ವಿದ್ವಾಂಸ ಪ್ರೊಧರಣೇಂದ್ರ ಕುರಕುರಿ ಅಧ್ಯಕ್ಷತೆ ವಹಿಸುವರು. ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡುವರು. ಕರ್ನಾಟಕ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಶಂಕರ್ ಹೂಗಾರ ಉಪಸ್ಥಿತರಿರುವರು.

# ಶಿಕ್ಷಣ ಇಲಾಖೆಯಲ್ಲಿ ಲೈಂಗಿಕ ದೌರ್ಜನ್ಯ: ಆಂತರಿಕ ಸಮಿತಿ ಪುನರ್‌ರಚನೆ

ಮೈಸೂರು,ಜೂ.22(ಎಸ್‌ಪಿಎನ್)–ಶಾಲಾ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳ ದೂರುಗಳನ್ನು ಪರಿಶೀಲಿಸಲು ಲೈಂಗಿಕ ಕಿರುಕುಳ (ತಡೆ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ–2013ರ ಪ್ರಕಾರ ಆಂತರಿಕ ದೂರು ಸಮಿತಿಯನ್ನು ಪುನರ್‌ರಚಿಸಿದ್ದು, ಈ ಸಮಿತಿ ಅಧ್ಯಕ್ಷರಾಗಿ ಇಲಾಖೆ ಜಂಟಿ ನಿರ್ದೇಶಕಿ ಡಾ.ರೂಪಶ್ರೀ ಅವರನ್ನು ನೇಮಿಸಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಡಾ.ಆರ್.ವಿಶಾಲ್ ಆದೇಶಿಸಿದ್ದಾರೆ.

ಸದಸ್ಯರಾಗಿ ಹಿರಿಯ ಸಹಾಯಕ ನಿರ್ದೇಶಕರಾದ ಅಲ್ಮಾಸ್ ಸರ್ವಿನ್ ತಾಜ್, ಪ್ರಭಾ ಅಲೆಕ್ಸಾಂಡರ್, ಶೈಲ, ಸಹಾಯಕ ನಿರ್ದೇಶಕಿ ಶಾಂತಲಾ, ಅಧೀಕ್ಷಕಿ ವೆಂಕಟರತ್ನ ಅವರನ್ನು ನೇಮಿಸಿದ್ದು, ಈ ಸಮಿತಿಯು ಶಾಲಾ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುವ ಮಹಿಳಾ ದೌರ್ಜನ್ಯ ಪ್ರಕರಣಗಳ ಅರ್ಜಿಗಳನ್ನು ಪರಿಶೀಲಿಸಿ, ಗಮನಕ್ಕೆ ತರುವಂತೆ ಆಯುಕ್ತ ಡಾ.ಆರ್.ವಿಶಾಲ್ ಸೂಚಿಸಿದ್ದಾರೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಶಿಫಾರಸಿನ ಮೇರೆಗೆ, ರಾಜ್ಯ ಸರ್ಕಾರದ ನಿರ್ದೇಶನದಂತೆ ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ ಸಿಬ್ಬಂದಿ, ಸಹೋದ್ಯೋಗಿಗಳಿಗೆ ಕಿರುಕುಳ ನೀಡುವುದು, ಅಸಭ್ಯ ವರ್ತನೆ, ಮಾನಸಿಕ ಹಿಂಸೆ, ದುರುದ್ದೇಶಪೂರ್ವಕವಾಗಿ ಕೆಲಸಕ್ಕೆ ಅಡಚಣೆ ಉಂಟುಮಾಡುವುದು ಹಾಗೂ ಲೈಂಗಿಕ ದೌರ್ಜನ್ಯ ಸೇರಿದಂತೆ ಕರ್ತವ್ಯ ನಿರತ ಸ್ಥಳದಲ್ಲಿ ಮಹಿಳಾ ಸಿಬ್ಬಂದಿ ಮೇಲಾಗುವ ದೌರ್ಜನ್ಯಗಳ ಪರಿಶೀಲನೆಗಾಗಿ ಸರ್ಕಾರದ ಆದೇಶದನ್ವಯ ಆಂತರಿಕ ದೂರು ಸಮಿತಿಯನ್ನು ತಾಲೂಕು ಮತ್ತು ಜಿಲ್ಲಾ ಹಂತದಲ್ಲಿ ರಚಿಸಲು ನಿರ್ದೇಶನ ನೀಡಿತ್ತು.

ರಾಜ್ಯ ಮಹಿಳಾ ಆಯೋಗದ ಶಿಫಾರಸಿನಲ್ಲಿ ಪ್ರತಿ 3 ವರ್ಷಗಳಿಗೊಮ್ಮೆ ಈ ಸಮಿತಿಯನ್ನು ಪುನರ್‌ರಚಿಸಲು ನಿರ್ದೇಶಿಸಿತ್ತು. ಹಾಗಾಗಿ ಸಮಿತಿಯನ್ನು ಪುನರ್‌ರಚಿಸಿ ಆದೇಶ ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ದೌರ್ಜನ್ಯ ಪ್ರಕರಣಗಳಿದ್ದಲ್ಲಿ ನಿಗದಿತ ಕಾಲಮಿತಿ ನೂತನ ಸಮಿತಿ ಪರಿಶೀಲಿಸುವಂತೆ ಸೂಚಿಸಿದ್ದಾರೆ.

> "ಕೇಂದ್ರ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯನಿರತ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯ ತಡೆಯಲು ಆಂತರಿಕ ದೂರು ಸಮಿತಿ ರಚಿಸುವಂತೆ ಮಹಿಳಾ ಆಯೋಗ ಶಿಫಾರಸ್ಸು ಮಾಡಿದೆ. ಈ ಸಮಿತಿ ಕಾಲಕಾಲಕ್ಕೆ ಪುನರ್‌ರಚನೆಗೊಂಡು ಕರ್ತವ್ಯ ನಿರ್ವಹಿಸುತ್ತದೆ. ಈ ಸಮಿತಿ ಶಿಕ್ಷಣ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿಗಳ ಮೇಲಾಗುವ ದೌರ್ಜನ್ಯಗಳಿಗೆ ಪೂರ್ಣ ವಿರಾಮ ಹಾಕಬೇಕು. **– ಮಂಜುಳಾ ಮಾನಸ, ಮಾಜಿ ಅಧ್ಯಕ್ಷೆ, ರಾಜ್ಯ ಮಹಿಳಾ ಆಯೋಗ**



# ನಿಧನ

## ರಂಗಯ್ಯ



ಮೈಸೂರು, ಜೂ.22– ಮೈಸೂರು ಮಹಾನಗರ ಪಾಲಿಕೆ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ದಟ್ಟಗಳ್ಳಿ ನಿವಾಸಿ ರಂಗಯ್ಯ(62) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ನಾಗರತ್ನ, ಪುತ್ರ ಡಾ.ಹೇಮಂತ್, ಪುತ್ರಿ ಜಾಹ್ನವಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಹುಟ್ಟೂರಾದ ಸಾಲಿಗ್ರಾಮದ ಸಮೀಪದ ಹೊನ್ನೇನಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಬಿ.ಎಂ.ಶಿವಾನಂದ



ಮೈಸೂರಿನ ದಟ್ಟಗಳ್ಳಿ ನಿವಾಸಿ ಬಿ.ಎಂ.ಶಿವಾನಂದ (75) ಬುಧವಾರ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಅಕ್ಕಮಹಾದೇವಿ, ಪುತ್ರರಾದ ಸೇಫ್ ವ್ಹೀಲ್ಸ್‌ನ ಮಾಲೀಕ ಬಿ.ಎಸ್.ಪ್ರಶಾಂತ್ ಮತ್ತು ಬಿ.ಎಸ್.ಪ್ರವೀಣ್, ಪುತ್ರಿ ಸುಗುಣ ಪ್ರಭುಸ್ವಾಮಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಶ್ರೀಮತಿ ಜ್ಯೋತಿ



ಮೈಸೂರಿನ ಹಿರಿಯ ಕಾಂಗ್ರೆಸ್ ಮುಖಂಡರು ಹಾಗೂ ತೊಣಚಿಕೊಪ್ಪಲ್ ನಿವಾಸಿ ಎಚ್.ಎಸ್.ವೆಂಕಟಸುಬ್ಬಯ್ಯ ಅವರ ಪತ್ನಿ ಶ್ರೀಮತಿ ಜ್ಯೋತಿ(70) ಅವರು ಗುರುವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಪುತ್ರ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರು ಶಿಕ್ಷಕರಾಗಿದ್ದರು. ಇವರ ಅಂತ್ಯಕ್ರಿಯೆಯನ್ನು ಗುರುವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಡಿ.ಆರ್.ಕುಮಾರ್



ಮೈಸೂರಿನ ಮೇಟಗಳ್ಳಿ ನಿವಾಸಿ ಡಿ.ಆರ್.ಕುಮಾರ್(74) ಅವರು ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ(ಜೂ.23) ಬೆಳಗ್ಗೆ 9.30ಕ್ಕೆ ಬಿಎಂಶ್ರೀನಗರದ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್తಮುತ್ತ ಇಂದು...



## ಇಂದಿನ ಪಂಚಾಂಗ

**23.6.2023 ಶುಕ್ರವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,**
**ತಿಥಿ: ಷಷ್ಠಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ಲಲಿತ ಸಹಸ್ರನಾಮ ಹೋಮ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಕೋಟೆ ತ್ರಿನೇಶ್ವರ ದೇವಸ್ಥಾನ :** ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ 7ಕ್ಕೆ ಗುರುಕಾಲ ಹೊರೆಯಲ್ಲಿ ಹರಿದ್ರಾ ಕುಂಕುಮ ಪ್ರಧಾನ, ಸ್ಥಳ: ದೇವಸ್ಥಾನ, ಕೋಟೆ ಆವರಣ.

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ಅವರ ಆಷಾಢ ಮಾಸದ ವಿವಿಧ ಅಲಂಕಾರಗಳ ಪೂಜೆ, ಹರಿದ್ರಾಲಂಕಾರ, ಸ್ಥಳ: ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಬೆಳಗ್ಗೆ 7ಕ್ಕೆ.

■ **ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ :** ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಮೈಸೂರು ವಿವಿ ಅಂತರ ಕಾಲೇಜು ಗೋಲ್ಡ್ ಕಪ್ ಫುಟ್‌ಬಾಲ್ ಪಂದ್ಯಾವಳಿ, ಉದ್ಘಾಟನೆ : ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಡಾ. ಸಿ. ಕೃಷ್ಣ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್, ಉಪಸ್ಥಿತರು : ಟ್ರಸ್ಟ್ ಕಾರ್ಯದರ್ಶಿ ಡಾ. ಬಿ. ಸದಾಶಿವಭಟ್, ಸ್ಥಳ: ಮೈಸೂರು ವಿವಿ ಫುಟ್‌ಬಾಲ್ ಮೈದಾನ, ಬೆಳಗ್ಗೆ 8.30ಕ್ಕೆ

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶ್ರೀ ರಾಜರಾಜೇಶ್ವರಿ ದೇವತಾ ಆಷಾಢ ಮಾಸ ಪೂಜಾ ಮಹೋತ್ಸವ, ಬೆಳಗ್ಗೆ 7.30 ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿ ಮತ್ತು ಬಡಾವಣೆಯ ಮಹಿಳೆಯರಿಂದ ಲಲಿತ ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಶ್ರೀಮತಿ ಲತಾ ರಾಮರಾವ್ ಅವರಿಂದ ವೀಣಾ ವಾದನ, ಸಂಜೆ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಜರಾಜೇಶ್ವರಿನಗರ.

■ **ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ :** ರಾಜ್ಯ ಮಟ್ಟದ ಕ್ರೀಡೋತ್ಸವ–2023, ಉದ್ಘಾಟನೆ : ಚಲನಚಿತ್ರ ನಟ ಡಾ. ಶಿವರಾಜ್‌ಕುಮಾರ್ ಮತ್ತು ಶ್ರೀಮತಿ ಗೀತಾ ಶಿವರಾಜ್‌ಕುಮಾರ್, ಅಧ್ಯಕ್ಷತೆ : ಸಂಘದ ರಾಜ್ಯಾಧ್ಯಕ್ಷ ಸಿ. ರಮೇಶ್, ದೀಪ ಬೆಳಗುವಿಕೆ : ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ಎಟಿಎಂಇ ತಾಂತ್ರಿಕ ಮಹಾವಿದ್ಯಾಲಯ ಅಧ್ಯಕ್ಷ ಅರುಣ್‌ಕುಮಾರ್, ಸ್ಥಳ: ಮಹಾರಾಜ ಕಾಲೇಜು ಕ್ರೀಡಾಂಗಣ, ಬೆಳಗ್ಗೆ 9ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ವಿದ್ವತ್–2023, ರಾಜ್ಯ ಮಟ್ಟದ ಅಂತರ ಕಾಲೇಜು ಬಿಸ್‌ಟೆಕ್, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮುಖ್ಯ ಅತಿಥಿಗಳು: ಅಕ್ಷರ ಕುಮಾರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಮರೀಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿದ್ಯಾರ್ಥಿ ವೇದಿಕೆ :** ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಹಾಗೂ ವಿಚಾರ ಸಂಕಿರಣ, ಉದ್ಘಾಟನೆ : ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಗತಿಪರ ಚಿಂತಕ ಪ್ರೊ. ಪುರುಷೋತ್ತಮ ಬಿಳಿಮಲೆ, ಲೇಖಕಿ ದು. ಸರಸ್ವತಿ, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್. ಶೈಲಜಾ, ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಮಕ್ಕಳ ಶಿಕ್ಷಣ ಮತ್ತು ಸಾಂಕ್ರಾಮಿಕ ನಂತರದ ಚೇತರಿಕೆಯ ಕಲಿಕೆ ಕುರಿತು ಕಾರ್ಯಾಗಾರದ ಸಮಾರೋಪ ಸಮಾರಂಭ, ಉಪಸ್ಥಿತರು : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಪ್ರೊಫೆಸರ್ ಸೇನ್, ಪ್ರೊ. ಎಂ.ಎಸ್. ಸಪ್ನಾ, ಸ್ಥಳ: ವಿಜ್ಞಾನ ಭವನ, ಸಂಜೆ 4ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜು, ಮೈಸೂರು, 6.40 ಪದ ಸಂಸ್ಕೃತಿ– ಪ್ರೊ. ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆಗಳು–ಶ್ರೀನಿವಾಸ ಉಡುಪ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ನರ್ಮದಾ–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ಡಾ.ಸುಷ್ಮಾ ಆನಂದ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ದೀಪಾ ಸತ್ಯನಾರಾಯಣ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಸಪ್ತವೀಣಾವಾದನ, ನಿರ್ದೇಶನ– ಮೈಸೂರು ಎಸ್. ರಾಜಲಕ್ಷ್ಮಿ, 4.00 ಮಹಿಳಾರಂಗ–ಸಾಹಿತ್ಯ ಸಂಚಿಕೆ, ಶೀಲಾ ಹರವೆ ಮಠ ಅವರಿಂದ ಸಣ್ಣಕಥೆ, ಡಾ. ಚಾಂದ್ ಸುಲ್ತಾನ್ ಅವರ ಪರಿಚಯ ಹಾಗೂ ಅವರಿಂದ ಕವನವಾಚನ, ಪ್ರಸ್ತುತಿ– ಅಬ್ದುಲ್ ರಶೀದ್, 4.30 ವೃತ್ತಿ ಮಾಗ ದರ್ಶನ–ಇಂಜಿನಿಯರಿಂಗ್ ಡಿಪ್ಲೊಮಾ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಕೆ.ಎಸ್. ಭಕ್ತವತ್ಸಲ ಅವರೊಂದಿಗೆ ಮಾತುಕತೆ, 6.55 ಕೃಷಿರಂಗ–ಕಿಸಾನ್‌ವಾಣಿ, ಮಂಡ್ಯ ಜಿಲ್ಲೆಯ ಕೃಷಿಕರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ವಿ.ಎಸ್. ಅಶೋಕ್, 8.00 ಸಂಧ್ಯಾರಾಗ–ಗಾಂಧೀವಾದಿ 91ರ ಹರೆಯದ ತಗಡೂರಿನ ಟಿ.ಎನ್. ಸತ್ಯನಾರಾಯಣ ಹಾಗೂ ಶಶಿರೇಖಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುವವರು ಅಬ್ದುಲ್ ರಶೀದ್, 9.30 ಗಾನ ಲಹರಿ, ಪ್ರಸ್ತುತಿ–ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.30 ವಾದ್ಯವೃಂದ–ನಿಲಯದ ಕಲಾವಿದರಿಂದ, 10.30 ಸವಿನೆನಪು

# ಪ್ರತಿ ತಾಲೂಕಿನಲ್ಲಿ ಕೆಂಪೇಗೌಡ ಜಯಂತಿ ಆಚರಣೆಗೆ ನಿರ್ಧಾರ



ಬೆಂಗಳೂರು, ಜೂ.22(ಕೆಎಂಶಿ)– ಸರ್ಕಾರದ ವತಿಯಿಂದ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸುತ್ತಿದ್ದು, ಎಲ್ಲಾ ಸಂಘ ಸಂಸ್ಥೆಗಳು ಭಾಗವಹಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಕೆಂಪೇಗೌಡ ಜಯಂತಿ ಆಚರಣೆ ಪೂರ್ವಭಾವಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಂಪೇಗೌಡ ಜಯಂತಿ ಆಚರಣೆ ವಿಚಾರವಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಜತೆಗೂಡಿ ಸಭೆ ಮಾಡಿದ್ದು, ಸಭೆಯಲ್ಲಿ ಅನೇಕ ಸಂಘ ಸಂಸ್ಥೆಗಳು ಭಾಗವಹಿಸಿದ್ದವು ಎಂದರು.

ಕೆಂಪೇಗೌಡ ಜಯಂತಿ ಕೇವಲ ಒಂದು ಸಮುದಾಯ, ಜಾತಿ ಅಥವಾ ಧರ್ಮಕ್ಕೆ ಸೀಮಿತವಾದುದಲ್ಲ. ಎಲ್ಲಾ ಜಾತಿ ಹಾಗೂ ಧರ್ಮಕ್ಕೆ ಸಲ್ಲುವ ರಾಜ್ಯಮಟ್ಟದ ಕಾರ್ಯಕ್ರಮ. ನಮ್ಮ ಸರ್ಕಾರದ ಅವಧಿಯಲ್ಲಿ ಜೂ.27ರಂದು ಪ್ರತಿ ತಾಲೂಕಿನಲ್ಲಿ ಕೆಂಪೇಗೌಡ ಜಯಂತಿ ಆಚರಣೆ ಮಾಡಬೇಕು ಎಂದು ಆದೇಶ ಮಾಡಿದ್ದೆವು. ಬಿಬಿಎಂಪಿ ಎಲ್ಲಾ ವಾರ್ಡ್‌ಗಳಲ್ಲೂ ಕಾರ್ಯಕ್ರಮ ನಡೆಯುತ್ತಿತ್ತು. ಬಿಬಿಎಂಪಿ ಚುನಾವಣೆ ನಡೆಯದ ಹಾಗೂ ವಾರ್ಡ್ ರಚನೆ ಕುರಿತ ಗೊಂದಲದ ಹಿನ್ನೆಲೆಯಲ್ಲಿ ಬಿಬಿಎಂಪಿ ವತಿಯಿಂದ ಜೂ.28ರಿಂದ ಜುಲೈ 8ನೇ ತಾರೀಖಿನವರೆಗೆ 28 ವಿಧಾನಸಭಾ ಕ್ಷೇತ್ರಗಳ ಮಟ್ಟದಲ್ಲಿ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.



ಬೆಂಗಳೂರಿನಲ್ಲಿ ಜೂ.27ರ ಬೆಳಗ್ಗೆ 9 ಗಂಟೆಗೆ ಕೆಂಪೇಗೌಡರ 4 ಗೋಪುರಗಳಿಂದ ಹಾಗೂ ಮಾಗಡಿಯಿಂದ ಮೂರ್ನಾಲ್ಕು ಶಾಸಕರ ಸಮ್ಮುಖದಲ್ಲಿ ಜ್ಯೋತಿ ಉದ್ಘಾಟಿಸಲಾಗುವುದು.

ಈ ಕಾರ್ಯಕ್ರಮಕ್ಕೆ ಐವರು ಸಚಿವರು ತೆರಳಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯಮಟ್ಟದ ಕಾರ್ಯಕ್ರಮ ನಡೆಯಲಿದೆ. ಇದೇ ವೇಳೆ ಪ್ರಶಸ್ತಿ ಪ್ರದಾನವೂ ನಡೆಯಲಿದ್ದು, ಮಾಜಿ ಸಭಾಪತಿ ಬಿ.ಎಲ್.ಶಂಕರ್ ಅವರ ನೇತೃತ್ವದ ಸಮಿತಿ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಲಿದೆ. 27ರಂದು ನಡೆಯಲಿರುವ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೆಂಪೇಗೌಡ ಪ್ರಾಧಿಕಾರದ ವತಿಯಿಂದ ನಡೆಸಲಾಗುವುದು.

ಇನ್ನು ಪಾಲಿಕೆ ವತಿಯಿಂದ ಜುಲೈ 9ರಂದು 198 ವಾರ್ಡ್‌ಗಳಲ್ಲಿ ಬೆಂಗಳೂರಿಗೆ ಸೇವೆ ಸಲ್ಲಿಸಿದವರನ್ನು ಗುರುತಿಸಿ ಅವರಿಗೆ ಕೆಂಪೇಗೌಡ ಬೆಂಗಳೂರು ನಗರ ಪ್ರಶಸ್ತಿ ನೀಡಲಾಗುವುದು ಎಂದರು.

# ಮಹಿಳೆಯರ ಮಹಾ ಶಕ್ತಿ ಪ್ರದರ್ಶನ: 11 ದಿನದಲ್ಲಿ 5 ಕೋಟಿ ಮಂದಿ ಪ್ರಯಾಣ; 126 ಕೋಟಿ ವೆಚ್ಚ

## ರಾಜ್ಯದಲ್ಲಿ ತಿಂಗಳಾಂತ್ಯಕ್ಕೆ ಟಿಕೆಟ್ ಮೌಲ್ಯ 200 ಕೋಟಿ ರೂ. ಗಡಿ ದಾಟುವ ನಿರೀಕ್ಷೆ

ಮೈಸೂರು, ಜೂ.22(ಜಿಎ)– "ಶಕ್ತಿ" ಉಚಿತ ಬಸ್ ಪ್ರಯಾಣ ಯೋಜನೆಯಿಂದ ನಾರಿಯರ "ಶಕ್ತಿ" ಏನೆಂದು ಕೇವಲ 11 ದಿನದಲ್ಲೇ ಗೊತ್ತಾಗಿದೆ. ಈ ಯೋಜನೆ ಲಾಭ ಪಡೆದು, ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಪ್ರವಾಸಿ ಮತ್ತು ಧಾರ್ಮಿಕ ಸ್ಥಳಗಳಿಗೆ ಮಹಿಳಾ ಮಣಿಯರು ಲಗ್ಗೆ ಇಟ್ಟಿದ್ದು, ಈವರೆಗೂ ರಾಜ್ಯಾದ್ಯಂತ ಬರೋಬ್ಬರಿ 5 ಕೋಟಿಗೂ ಅಧಿಕ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇವುಗಳ ಟಿಕೆಟ್ ಮೌಲ್ಯ 126 ಕೋಟಿ ರೂ. ಆಗಿದೆ.



ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ನೀಡಿರುವ ಪರಿಣಾಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (ಕರಾರಸಾನಿ), ಬೆಂಗಳೂರು ಮಹಾ ಸಾರಿಗೆ (ಬೆಂಮಸಾ), ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ (ವಾಕರಸಾ) ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ (ಕಕರಸಾ) ನಿಗಮದ ಬಸ್‌ಗಳಲ್ಲಿ ರಾಜ್ಯಾದ್ಯಂತ ಮಹಿಳೆಯರು ಪ್ರಯಾಣ ಮಾಡುತ್ತಿದ್ದು, ಜೂ.11ರಿಂದ ಯೋಜನೆ ಆರಂಭಗೊಂಡಿತ್ತು. ಜೂ.22ರವರೆಗೂ 5,40,07,124 ಮಹಿಳೆಯರು ಉಚಿತವಾಗಿ ಬಸ್‌ಗಳಲ್ಲಿ ಪ್ರಯಾಣಿಸಿದ್ದಾರೆ.

**ಶಕ್ತಿಯ ಮೊದಲ ದಿನ:** ರಾಜ್ಯದ ವಿವಿಧ ಸಾರಿಗೆ ಸಂಸ್ಥೆಗಳಿಂದ; ಕರಾರಸಾ–1,93,831, ಬೆಂಮಸಾ–2,01,215, ವಾಕರಸಾ–1,22,354 ಮತ್ತು ಕಕರಸಾ–53,623 ಸೇರಿದಂತೆ 5,71,023 ಮಹಿಳೆಯರು ಪ್ರಯಾಣಿಸಿದ್ದು, ಮೊದಲ ದಿನದ ಟಿಕೆಟ್ ಮೌಲ್ಯವೇ 1,40,22,878 ರೂ. ತಲುಪಿತ್ತು.

**126 ಕೋಟಿ ರೂ. ದಾಟಿದೆ:** ಈಗ ಯೋಜನೆ ಜಾರಿಯಾಗಿ 11 ದಿನಗಳಾಗಿದ್ದು, ರಾಜ್ಯದಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ಉತ್ಸಾಹ ಕಡಿಮೆಯಾಗಿಲ್ಲ. ಇದರ ಪರಿಣಾಮ ಜೂ.21ರಂದು ಕರಾರಸಾ–16,93,602, ಬೆಂಮಸಾ–18,85,703, ವಾಕರಸಾ–13,96,328 ಮತ್ತು ಕಕರಸಾ–7,82,928 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ.

ಈವರೆಗೂ ಒಟ್ಟು 5,40,07,124 ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದು, ಬರೋಬ್ಬರಿ ಇದಕ್ಕೆ 126,72,99,929 ಕೋಟಿ ರೂ. ಮೌಲ್ಯ ತಗುಲಿದ್ದು, ಇದು ಹೀಗೆ ಮುಂದುವರೆದರೇ ಈ ತಿಂಗಳಾಂತ್ಯಕ್ಕೆ 200 ಕೋಟಿ ರೂ. ತಲುಪುವ ಸಾಧ್ಯತೆ ಇದೆ.

> **ಸಾಮಾನ್ಯವಾಗಿ ಸಾಲು ಸಾಲು ಸರ್ಕಾರಿ, ಬೇಸಿಗೆ ಮತ್ತು ದಸರಾ ರಜೆಯ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಪ್ರವಾಸಿ ಮತ್ತು ಧಾರ್ಮಿಕ ಸ್ಥಳಗಳಿಗೆ ಮಹಿಳೆಯರು ತಮ್ಮ ಕುಟುಂಬ ಸಮೇತರಾಗಿ ಬರುವುದು ವಾಡಿಕೆಯಾಗಿತ್ತು ಆದರೆ, ಮಹಿಳೆಯರಿಗೆ ಉಚಿತ ಬಸ್ ಯೋಜನೆ ಜಾರಿಯಾದ ದಿನದಿಂದ ರಾಜ್ಯದ ಎಲ್ಲಾ ಸ್ಥಳಗಳಲ್ಲಿ ಮಹಿಳೆಯರ ದಂಡು ಹರಿದುಬರುತ್ತಿದೆ.**

**ವಿದ್ಯಾರ್ಥಿಗಳ ಪರದಾಟ:** ಉಚಿತ ಯೋಜನೆಯಿಂದ ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಪರಿಣಾಮ ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದ್ದು, ವಿದ್ಯಾರ್ಥಿಗಳು ಬಸ್ ಹತ್ತಲು ಹರಸಾಹಸಪಡುತ್ತಿದ್ದಾರೆ.

**ವೈರಲ್ ವಿಡಿಯೋಗಳು:** ಉಚಿತ ಬಸ್ ಯೋಜನೆ ಆರಂಭವಾದ ದಿನದಿಂದಲೇ ಉಚಿತವಾಗಿ ಮಹಿಳೆಯರು ಪ್ರಯಾಣಿಸಲು ಪೈಪೋಟಿಯಲ್ಲಿ ಬಸ್ ಹತ್ತಿ ಸೀಟ್ ಹಿಡಿದುಕೊಳ್ಳುತ್ತಿದ್ದು, ಕೆಲವು ಮಹಿಳೆಯರು ಬಸ್‌ನ ಕಿಟಕಿ ಮತ್ತು ಡ್ರೈವರ್ ಸೀಟ್ ಮೂಲಕ ಹತ್ತಿದ್ದು, ಹಾಗೇ ಕೆಲವು ಸ್ಥಳಗಳಲ್ಲಿ ಬಸ್ ಹತ್ತುವ ಭರದಲ್ಲಿ ಬಸ್ ಬಾಗಿಲು ಮುರಿದು ಬಿದ್ದ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದವು.

ಬಸ್‌ನಲ್ಲಿ ಸೀಟಿಗಾಗಿ ಮಹಿಳೆಯರ ನಡುವೆ ಮಾತಿನ ಚಕಮಕಿ, ಬಡಿದಾಟ, ಅರಚಾಟ, ಪುರುಷ ಪ್ರಯಾಣಿಕರ ಜತೆ ವಾಗ್ವಾದ, ಅವರ ಮೇಲೆ ಹಲ್ಲೆ ನಡೆಸಿದ ಪ್ರಕರಣಗಳು, ಮಾತ್ರವಲ್ಲ ಹೆಂಡತಿಯರಿಗೆ ಸೀಟು ಕೊಡಿಸಲು ಪತಿಯರ ಕಾದಾಟ ಸೇರಿದಂತೆ ಹಲವಾರು ರಂಪಾಟ ನಡೆದಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

# ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲೇ ಮೈಸೂರಲ್ಲಿ ಚಿತ್ರನಗರಿ 'ಸಾಕಾರ'ಗೊಳ್ಳಲಿದೆ

## ಖ್ಯಾತ ಹಿರಿಯ ಚಿತ್ರ ನಿರ್ಮಾಪಕರೂ ಆದ ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್ ವಿಶ್ವಾಸ



ಸಂದೇಶ್ ನಾಗರಾಜ್

ಮೈಸೂರು, ಜೂ.22(ಎಸ್‌ಬಿಡಿ)–ಮೈಸೂರಿನಲ್ಲಿ ಚಿತ್ರ ನಗರಿ (ಫಿಲಂ ಸಿಟಿ) ಆದಷ್ಟು ಬೇಗ ನಿರ್ಮಾಣವಾಗುವ ವಿಶ್ವಾಸವಿದೆ ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ಚಿತ್ರ ನಿರ್ಮಾಪಕರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ತಿಳಿಸಿದ್ದಾರೆ.

ಚಿತ್ರನಗರಿ ನಿರ್ಮಾಣದ ಚರ್ಚೆ ಮತ್ತೆ ಗರಿಗೆದರಿರುವ ಹಿನ್ನೆಲೆಯಲ್ಲಿ ಮೈಸೂರಿನವರೇ ಆದ ಸಂದೇಶ್ ನಾಗರಾಜ್, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲೇ ಈ ಯೋಜನೆ ಸಾಕಾರವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಈ ಯೋಜನೆ ಮೈಸೂರಿನ ಅಭಿವೃದ್ಧಿಗೂ ಪೂರಕ ಎಂದು ಅಭಿಪ್ರಾಯಿಸಿದ್ದಾರೆ.

ರಾಮಕೃಷ್ಣಹೆಗ್ಡೆ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ರಾಜ್ಯದಲ್ಲಿ ಚಿತ್ರನಗರಿ ನಿರ್ಮಾಣ ಪ್ರಸ್ತಾಪವಾಗಿತ್ತು. ಬೆಂಗಳೂರಿನಲ್ಲಿ ನಿರ್ಮಿಸಲು 500 ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿತ್ತು. ಆದರೆ ನಂತರದಲ್ಲಿ ಯೋಜನೆ ತೆರೆಮರೆಗೆ ಸರಿದು ಆ ಭೂಮಿಯೂ ಇಲ್ಲವಾಯಿತು. ಬಳಿಕ ಚಿತ್ರನಗರಿ ಬೆಂಗಳೂರಲ್ಲೋ, ಮೈಸೂರಲ್ಲೋ ಎಂಬ ಜಿಜ್ಞಾಸೆ ಹಲವು ವರ್ಷಗಳ ಕಾಲ ಮುಂದುವರೆಯಿತು. ಆದರೆ ಅಂಬರೀಷ್ ಸಚಿವರಾಗಿದ್ದಾಗ ಮೈಸೂರಿನಲ್ಲಿ ನಿರ್ಮಿಸುವುದೇ ಸೂಕ್ತ ಎಂದು ನಿರ್ಧರಿಸಲಾಯಿತು ಎಂದು ತಿಳಿಸಿದ್ದಾರೆ.

ಅಂತಿಮವಾಗಿ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ 110 ಎಕರೆ ಜಾಗವನ್ನು ಚಿತ್ರನಗರಿ ನಿರ್ಮಾಣಕ್ಕೆ ಕಾಯ್ದಿರಿಸಲಾಯಿತಾದರೂ ಈವರೆಗೆ ಯಾವುದೇ ಪ್ರಕ್ರಿಯೆ ನಡೆದಿರಲಿಲ್ಲ. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಸಿನಿಮಾರಂಗದ ಪ್ರಮುಖರು ಭೇಟಿ ಮಾಡಿ ಮನವಿ ಮಾಡಿದ್ದು, ಕ್ಯಾಬಿನೆಟ್‌ನಲ್ಲಿ ಪ್ರಸ್ತಾಪಿಸಿ, ನಂತರ ಈ ಬಗ್ಗೆ ಕೂಲಂಕಶವಾಗಿ ಚರ್ಚೆ ಮಾಡಿ ಸೂಕ್ತ ತೀರ್ಮಾನ ತೆಗೆದುಕೊಳ್ಳೋಣ ಎಂದು ಭರವಸೆ ನೀಡಿದ್ದಾರೆ ಎಂದಿದ್ದಾರೆ.

ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣದಿಂದ ಸಿನಿಮಾ ರಂಗಕ್ಕೆ ಅನುಕೂಲವಾಗುವುದರ ಜೊತೆಗೆ ಇಲ್ಲಿನ ಅಭಿವೃದ್ಧಿಗೂ ಸಹಕಾರಿಯಾಗಲಿದೆ. ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡುವಾಗ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಶಿಫ್ಟ್ ಆಗಲು ಅರ್ಧ ದಿನ ಬೇಕಾಗುತ್ತದೆ. ಬೆಳಗ್ಗೆ 6 ಗಂಟೆಗೆ ಮನೆಯಿಂದ ಹೊರಟರೂ ಚಿತ್ರೀಕರಣ ಆರಂಭಿಸುವಷ್ಟರಲ್ಲಿ 11 ಗಂಟೆಯಾಗುತ್ತದೆ. ಮೈಸೂರಿನಲ್ಲಿ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಕೇವಲ 10–15 ನಿಮಿಷದಲ್ಲಿ ಹೋಗಬಹುದು. ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಕೆಆರ್‌ಎಸ್ ಸೇರಿದಂತೆ ಅನೇಕ ರಮಣೀಯ ಸ್ಥಳಗಳಿವೆ. ನಗರ, ಹಳ್ಳಿಯ ಲೊಕೇಶನ್‌ಗಳಿಗೆ ತೊಂದರೆಯಿಲ್ಲ. ನಂಜನಗೂಡು, ಮೇಲುಕೋಟೆ, ಬೇಲೂರು, ಹಳೆಬೀಡು, ಸೋಮನಾಥಪುರ, ತಲಕಾಡು ಹೀಗೆ ಹತ್ತಿರದಲ್ಲೇ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳಿವೆ. ಕಲಾವಿದರು ಸೇರಿದಂತೆ ಅಗತ್ಯ ಸಿಬ್ಬಂದಿ ಕೊರತೆಯಾಗುವುದಿಲ್ಲ ಎಂದು ಅಭಿಪ್ರಾಯಿಸಿದರು.

ಮೈಸೂರಿನಲ್ಲೇ ಚಿತ್ರನಗರಿ ನಿರ್ಮಿಸಬೇಕೆಂದು ಒಮ್ಮತದಿಂದ ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕ್ಷೇತ್ರದಲ್ಲಿ ಈ ಯೋಜನೆ ಆಗುವುದರಿಂದ ಅವರ ಕೀರ್ತಿಯೂ ಹೆಚ್ಚುತ್ತದೆ. ಕ್ಯಾಬಿನೆಟ್ ಬಳಿಕ ಚಿತ್ರರಂಗದ ಗಣ್ಯರೊಡನೆ ನಾನೂ ಮುಖ್ಯಮಂತ್ರಿಗಳ ಭೇಟಿ ಮಾಡಿ, ಮನವಿ ಮಾಡುತ್ತೇನೆ. ತಾಯಿ ಚಾಮುಂಡೇಶ್ವರಿ ಕೃಪೆಯಿಂದ ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲೇ ಚಿತ್ರ ನಗರಿ ಕನಸು ಸಾಕಾರವಾಗುತ್ತದೆ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

> ಈಗಲೂ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಇನ್ನಿತರೆ ರಾಜ್ಯಗಳಿಂದ ಸಿನಿಮಾ ಚಿತ್ರೀಕರಣಕ್ಕಾಗಿ ಮೈಸೂರಿಗೆ ಬರುತ್ತಾರೆ. ಈಗಲೂ ಮಲೆಯಾಳಂ, ತೆಲುಗು ಹಾಗೂ ಹಿಂದಿ ಸಿನಿಮಾ ಚಿತ್ರೀಕರಣ ನಡೆಯುತ್ತಿವೆ. ಕರ್ನಾಟಕದಿಂದ ಹೈದರಾಬಾದ್‌ನ ರಾಮೋಜಿರಾವ್ ಸ್ಟುಡಿಯೋಗೆ ಹೋಗುತ್ತೇವೆ. ಮೈಸೂರಿನಲ್ಲಿ ಚಿತ್ರನಗರಿಯಾದರೆ ಬೇರೆ ರಾಜ್ಯಗಳಿಂದ ಇಲ್ಲಿಗೆ ಬರುತ್ತಾರೆ. 20 ಸಾವಿರಕ್ಕೂ ಹೆಚ್ಚು ಸ್ಥಳೀಯರಿಗೆ ಉದ್ಯೋಗ ದೊರಕುತ್ತದೆ. ವ್ಯಾಪಾರ ವಹಿವಾಟು ಜಾಸ್ತಿಯಾಗುತ್ತದೆ, ಚಿತ್ರ ನಗರಿಯೂ ಪ್ರೇಕ್ಷಣೀಯ ಸ್ಥಳವಾಗುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ.
>
> **–ಸಂದೇಶ್ ನಾಗರಾಜ್, ಚಿತ್ರ ನಿರ್ಮಾಪಕ**

# ಇಂದು ಮೈಸೂರಿಗೆ ಸಚಿವ ಸತೀಶ್ ಜಾರಕಿಹೊಳಿ ಭೇಟಿ



ಮೈಸೂರು, ಜೂ.22– ಲೋಕೋಪಯೋಗಿ ಸಚಿವರಾಗಿ ಇದೇ ಮೊದಲ ಬಾರಿಗೆ ಮೈಸೂರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಮ್ಮ ಖಾಸಗಿ ಕಾರ್ಯಕ್ರಮಗಳ ನಿಮಿತ್ತ ಇಂದು (ಜೂ.23) ಮೈಸೂರಿಗೆ ಆಗಮಿಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ನಗರದ ಏಟ್ರಿಯಂ ಹೋಟೆಲ್ ಬಳಿ ಸಚಿವರನ್ನು ಆತ್ಮೀಯವಾಗಿ ಸ್ವಾಗತಿಸಲು ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಲಾಗಿದೆ.

**ಸಚಿವರ ಕಾರ್ಯಕ್ರಮದ ವಿವರ:** ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಲಿರುವ ಸಚಿವರು, ಬೆಳಗ್ಗೆ 11 ಗಂಟೆಗೆ ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಅವರ ಆಶೀರ್ವಾದ ಪಡೆಯಲಿದ್ದಾರೆ. ಬಳಿಕ 11.30ಕ್ಕೆ ಹಿರಿಯ ಸಾಹಿತಿ ದೇವನೂರು ಮಹದೇವಪ್ಪ ಅವರನ್ನು ಭೇಟಿ ಮಾಡಿ ಸೌಜನ್ಯದ ಮಾತುಕತೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿದ್ಯಾರ್ಥಿ ವೇದಿಕೆಯಿಂದ ಮೈವಿವಿ ಮಾನಸಗಂಗೋತ್ರಿಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಆಯೋಜಿಸಿರುವ ಬಾಬಾ ಸಾಹೇಬ್ 136ನೇ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆ ಬಳಿಕ ನಜರಬಾದ್ ತಾಲೂಕು ಕಚೇರಿ ಅತಿಥಿಗೃಹದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಹಾಗೂ ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಿ ಕುಂದು ಕೊರತೆ ವಿಚಾರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಜೂ.26, ವಿದ್ಯುತ್ ಜನಸಂಪರ್ಕ ಸಭೆ

ಮೈಸೂರು,ಜೂ.22–ನರಸಿಂಹರಾಜ ಮೊಹಲ್ಲಾ ವಿಭಾಗದ ಕೇಂದ್ರ, ಚಾಮುಂಡಿಪುರಂ, ನ.ರಾ. ಮೊಹಲ್ಲಾ, ಜ್ಯೋತಿನಗರ ಹಾಗೂ ವರುಣ ಉಪವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಜೂ.26ರಂದು ಬೆಳಗ್ಗೆ 11 ಗಂಟೆಗೆ ಕೇಂದ್ರ ಉಪವಿಭಾಗದ ಕಚೇರಿಯಲ್ಲಿ, ಮಧ್ಯಾಹ್ನ 3 ಗಂಟೆಗೆ ಚಾಮುಂಡಿಪುರಂ ಉಪವಿಭಾಗ ಕಚೇರಿಯಲ್ಲಿ ಸಭೆ ನಡೆಸಲಾಗುವುದು. ಜೂ.28ರಂದು ಬೆಳಗ್ಗೆ 11 ಗಂಟೆಗೆ ನ.ರಾ. ಮೊಹಲ್ಲಾ ಉಪವಿಭಾಗ ಕಚೇರಿಯಲ್ಲಿ ಹಾಗೂ ಮಧ್ಯಾಹ್ನ 3 ಗಂಟೆಗೆ ಜ್ಯೋತಿನಗರ ಉಪವಿಭಾಗ ಕಚೇರಿಯಲ್ಲಿ ಸಭೆ ನಡೆಸಲಾಗುವುದು. ಜೂ.30ರಂದು ಬೆಳಗ್ಗೆ 11 ಗಂಟೆಗೆ ವರುಣ ಉಪವಿಭಾಗ ಕಚೇರಿಯಲ್ಲಿ ಸಭೆ ನಡೆಯಲಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳು ಏನಾದರೂ ಇದ್ದಲ್ಲಿ ಜನ ಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

# ಮಾತೆಯರಿಗೆ ಗ್ಯಾರಂಟಿ ಕೊಟ್ಟಿದ್ದೀರಿ... ಗೋಮಾತೆಗೆ ಯಾವ ಗ್ಯಾರಂಟಿ ನೀಡಿದ್ದೀರಿ...!

## ● ಉತ್ತರಪ್ರದೇಶದ ಗೋ ಸಂರಕ್ಷಕ ಫೈಜ್ ಖಾನ್ ಪ್ರಶ್ನೆ ● ಆರೇಳು ತಿಂಗಳಷ್ಟೇ ಫ್ರೀ ಇರುತ್ತವೆ ● 2024ರ ಲೋಕಸಭಾ ಚುನಾವಣೆಗೆ ಇಲ್ಲಿಂದಲೇ ಹಣ ಹೋಗಬೇಕಲ್ವೆ...




ಮೈಸೂರು, ಜೂ.22(ಎಂಕೆ)– ಫ್ರೀ ಬಸ್, ಫ್ರೀ ಕರೆಂಟ್, ಖಾತೆಗೆ 2 ಸಾವಿರ ಹಾಕುತ್ತೇವೆಂದು ಮಾತೆಯರಿಗೆ (ಮಹಿಳೆಯರಿಗೆ) ಗ್ಯಾರಂಟಿ ಕೊಟ್ಟಿದ್ದೀರಿ. ಆದರೆ ಗೋಮಾತೆಗೆ ಯಾವ ಗ್ಯಾರಂಟಿ ಕೊಟ್ಟಿದ್ದೀರಿ. ಅದು ವೋಟ್ ಹಾಕುವುದಿಲ್ಲವೆಂದೋ ಅಥವಾ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲವೆಂದೋ ಎಂದು ಉತ್ತರ ಪ್ರದೇಶದ ಗೋ ಸಂರಕ್ಷಕ ಫೈಜ್ ಖಾನ್ ಪ್ರಶ್ನಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಯುವ ಬ್ರಿಗೇಡ್ ವತಿಯಿಂದ ಆಯೋಜಿಸಿದ್ದ 'ನನ್ನ ಬದುಕಿಗೂ ಗ್ಯಾರಂಟಿ ಕೊಡಿ..! ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ತಾಯಿಯ ಗರ್ಭದಿಂದ ಜನನವಾಗುವಾಗಲೇ ಭಾರತ ಮಾತಾಕೀ ಜೈ ಎನ್ನುವುದನ್ನು ಕಲಿತು ಬಂದಿದ್ದೇವೆ. ಹಾಗೆಯೇ ಜನ್ಮ ತಾಳಿದ ಮನುಷ್ಯ ತನ್ನ ತಾಯಿಯನ್ನು ಅಮ್ಮ ಎಂದು ಕರೆಯುವಂತೆ ಗೋವನ್ನು ಮಾ ಎಂದು ಕರೆಯುತ್ತೇವೆ. ತಾಯಿಯ ಸ್ವರೂಪವೇ ಗೋಮಾತೆ ಎಂದರು.

ಮಾತೆಯರು ಬಸ್‌ನಲ್ಲಿ ಎಲ್ಲಿ ಬೇಕಾದರೂ ಹೋಗಬಹುದು. 1 ರೂಪಾಯಿಗೆ ಅಕ್ಕಿ ಎನ್ನುವುದು. ಈಗ ಫ್ರೀಯಾಗಿದೆ. ಮನೆ ಯಜಮಾನಿಗೆ 2 ಸಾವಿರ ರೂ., ಪದವೀಧರರಿಗೆ 3 ಮತ್ತು ಡಿಪ್ಲೊಮಾ ಮಾಡಿದವರಿಗೆ 1500 ರೂ. ಕೊಡುವ ಮೂಲಕ ರೇಟ್ ಫಿಕ್ಸ್ ಮಾಡಲಾಗಿದೆ. ಈಗ ವಿದ್ಯುತ್ ಉಚಿತವಾಗಿ ಕೊಡುತ್ತಿದ್ದಾರೆ ತೆಗೆದುಕೊಳ್ಳಿ. ಹೆಚ್ಚೆಂದರೆ 6–7 ತಿಂಗಳು ಕೊಡುತ್ತಾರೆ. ಆದರೆ ನಾಳೆ ಕೊಟ್ಟಿದ್ದೆಲ್ಲವನ್ನೂ ಮತ್ತೆ ನಿಮ್ಮಿಂದಲೇ ವಸೂಲಿ ಮಾಡುತ್ತಾರೆ. 2024ರ ಲೋಕಸಭಾ ಚುನಾವಣೆಗೆ ಇಲ್ಲಿಂದಲೇ ಹಣ ಹೋಗಬೇಕಲ್ಲವೇ ಎಂದು ಫೈಜ್ ಖಾನ್ ವ್ಯಂಗ್ಯವಾಡಿದರು.

**ಹೆಸರು ಬದಲಿಸಿಕೋ:** ಗೋವನ್ನು ಪ್ರೀತಿಸುವ ಗೋವಿಂದನ ಹೆಸರಿನ ವೆಂಕಟೇಶ್ ಅನ್ನೋ ಸಚಿವರು ನಾವು ಕುರಿ ಕಡಿತೀವಿ, ಕೋಣ ಕಡಿತೀವಿ, ದನ ಯಾಕ್ ಕಡಿಬಾರ್ದು ಅಂತ ಹೇಳ್ತಾರೆ. ಗೋವನ್ನು ಇಷ್ಟ ಪಡುವ ಗೋವಿಂದ(ಗೋವಿನಿಂದ)ನ ಹೆಸರಾದ ವೆಂಕಟೇಶ ಎಂಬ ಹೆಸರಿಟ್ಟುಕೊಂಡು ಈ ರೀತಿ ಮಾತನಾಡುತಾರಲ್ಲ. ಅವರ ಅಪ್ಪ ಅಮ್ಮ ಏನು ಹೇಳುವುದಿಲ್ಲವೆ. ಒಂದೋ ಹೆಸರು ಬದಲಾಯಿಸಿಕೊಳ್ಳಿ, ಇಲ್ಲ ಕಾಯ್ದೆ ಉಳಿಸಿಕೊಳ್ಳಿ, ಕುಟುಕ ಅಥವಾ ಕಟುಕೇಶ ಎಂದು ಹೆಸರಿಟ್ಟುಕೊಂಡರೇ ಚೆನ್ನಾಗಿರುತ್ತೆ. ಒಂದು ಪಕ್ಷ ತನ್ನ ಬಾವುಟದಲ್ಲಿ ದನ ಮತ್ತು ಕರುವಿನ ಚಿತ್ರ ಹಾಕಿಕೊಂಡಿತ್ತು. ಆ ಚಿತ್ರ ಇರುವ ತನಕ ಆ ಪಾರ್ಟಿ ಗೆದ್ದಿತ್ತು. ಯಾವತ್ತು ಬಾವುಟ ಬದಲಾಯಿಸಿದ್ರೋ ಅವತ್ತು ಅವರಿಗೆ ಸೋಲು ಆರಂಭವಾಯಿತು ಎಂದು ಎಚ್ಚರಿಸಿದರು. ಕಾರ್ಯಕ್ರಮದಲ್ಲಿ ಪಿಂಜಾರ ಪೋಲ್‌ನ ಭಾರತ್ ಸಾಧು ಸಮಾಜ್ 1008 ಮಹಾಂತ ಶ್ರೀ ಚೇತನ್ ಗಿರಿ ಮಹಾರಾಜ್ ಉಪಸ್ಥಿತರಿದ್ದರು.

> **ಕೈಯ್ಯಲ್ಲಿನ ವಜ್ರ ಕಳೆದುಕೊಂಡರೆ ನಮಗೆ ಕ್ಷಮೆಯಿಲ್ಲ....!**
>
> ಇಂಗ್ಲೆಂಡ್‌ನ ರಾಣಿ ದನ ಕಡಿಯುವುದನ್ನು ನಿಲ್ಲಿಸಬಾರದು ಎಂದು ಹೇಳಿದ್ದರು. ಅದನ್ನು ಬ್ರಿಟೀಷರು ಪಾಲಿಸಿದರೋ, ಇಲ್ಲವೋ ಆದರೆ ಆನಂತರ ಆಡಳಿತ ನಡೆಸಿದ ಸರ್ಕಾರ ಅದನ್ನು ಉತ್ತಮವಾಗಿ ಪಾಲಿಸಿದೆ. ಹಿಂದೂಗಳ ಮೇಲೆ ಪ್ರಭುತ್ವ ಸಾಧಿಸಬೇಕು ಎಂದು ಮುಸ್ಲಿಂರಿಗೆ, ಕ್ರೈಸ್ತರಿಗೆ, ಕಾಂಗ್ರೆಸ್‌ನವರಿಗೆ ಅನ್ನಿಸುತ್ತದೋ ಆಗೆಲ್ಲಾ ಗೋಹತ್ಯೆಯನ್ನು ತಂದು ನಿಲ್ಲಿಸುತ್ತಾರೆ. ಇದು ಅವಮಾನದ ಸಂಕೇತ. ರಾಜ್ಯ ಚುನಾವಣೆಯಲ್ಲಿ ಆಂಜನೇಯನಿಗೂ ಅವಮಾನವಾಗಿದೆ. 2024ಕ್ಕೆ ಆಂಜನೇಯ ಮತ್ತೆ ಮೆರೆಯಬೇಕು. ಕೈಯ್ಯಲ್ಲಿನ ವಜ್ರ ಕಳೆದುಕೊಂಡರೆ ನಮಗೆ ಕ್ಷಮೆಯಿಲ್ಲ. **–ಚಕ್ರವರ್ತಿ ಸೂಲಿಬೆಲೆ, ವಾಗ್ಮಿ**

## ಹಿಂದೂಗಳ ಮೇಲೆ ಪ್ರಭುತ್ವ ಸಾಧಿಸುವ ಯತ್ನ ನಡೆದಿದೆ

ನಮ್ಮ ಸಂಪ್ರದಾಯ, ಭಾವನೆಗಳ ಪ್ರತೀಕವಾಗಿರುವ ಗೋವುಗಳನ್ನು ಕಾಪಾಡಲು ವೈಜ್ಞಾನಿಕ ಕಾರಣ ಕೊಡುವುದು ಬೇಕಿಲ್ಲ. ಹಿಂದೂಗಳ ಮೇಲೆ ಪ್ರಭುತ್ವ ಸಾಧಿಸುವುದಕ್ಕಾಗಿಯೇ ಗೋ ಹತ್ಯೆ ನಿಷೇಧ ಕಾಯಿದೆ ಹಿಂಪಡೆಯಲಾಗುತ್ತಿದೆ. ಇದೊಂದು ಝಲಕ್ ಅಷ್ಟೇ. ಸುತ್ತಲಿನ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿ, ಲೋಕಸಭೆಯಲ್ಲಿ ಉತ್ತರ ನೀಡಿ ಎಂದು ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಕರೆ ನೀಡಿದರು.

ಹಿಂದೂ ಪರಂಪರೆಯಲ್ಲಿಯೇ ಗೋವುಗಳು ಹಾಸುಹೊಕ್ಕಾಗಿವೆ. ನಮ್ಮ ಮನೆಗಳಲ್ಲಿ ಗೋವಿನೊಂದಿಗೆ ಅತ್ಯಂತ ಆತ್ಮೀಯ ಸಂಬಂಧವನ್ನು ಹೊಂದಿದ್ದೇವೆ. ಹೊಸ ಮನೆ ಕಟ್ಟಿದಾಗಲೂ ಗೋವಿನದ್ದೇ ಮೊದಲ ಪ್ರವೇಶವಾಗಬೇಕು ಎಂದು ಬಯಸುತ್ತೇವೆ. ಅದೂ ನಮ್ಮ ಆಚರಣೆಯೂ ಆಗಿದೆ. ಅದರಂತೆ ಗೋವುಗಳು ಕೂಡ ಮನುಷ್ಯನ ಭಾವನೆಗಳಿಗೆ ಸ್ಪಂದಿಸುತ್ತವೆ. ಆದರೆ ಹಿಂದೂಗಳನ್ನು ಅವಮಾನಿಸುವ ಕೆಲಸವನ್ನು ಕಾಂಗ್ರೆಸ್ ಸರಕಾರ ಸೇರಿದಂತೆ ಕೆಲವರು ಆರಂಭಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಗೋವು ನಮ್ಮ ಧರ್ಮದ ಪ್ರತೀಕ, ಗೋ ಹತ್ಯೆಗೆ ಅವಕಾಶ ನೀಡಿದರೆ, ಗೋವುಗಳನ್ನು ನಾಶಪಡಿಸಿದರೆ ನಮ್ಮಲ್ಲಿನ ಕಾಮಧೇನು ಕಲ್ಪನೆ ಸೇರಿದಂತೆ ಇಡೀ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನೇ ಬದಲಿಸಿಕೊಳ್ಳಬೇಕಾಗುತ್ತದೆ. ಗೋವುಗಳಿರುವ ದೇವರ ಪೂಜೆ ಮಾಡಲು ಸಾಧ್ಯವಾಗದಂತಾಗಲಿದೆ ಎಂದರು.

**ತಕ್ಕ ಉತ್ತರ ಕೊಡಬೇಕು:** ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಯೊಬ್ಬರು ಎಮ್ಮೆ ಕಡಿಯಬಹುದಾದರೆ ಗೋವನ್ನೇಕೆ ಕಡಿಯಬಾರದು ಎಂದು ಹೇಳುತ್ತಾರೆ. ಅಂತಹವರಿಗೆ ತಕ್ಕ ಉತ್ತರ ಕೊಡಬೇಕಾಗಿದೆ. ಇದು ನಮ್ಮ ಪರಂಪರೆ ಅದನ್ನು ಕೇಳಲು ನೀವ್ಯಾರು ಎನ್ನಬೇಕು. ಇಂದು ಗೋಹತ್ಯೆ ನಿಷೇಧದ ಕುರಿತು ಹಿಂದೂಗಳು ರಕ್ಷಣಾತ್ಮಕ ಮಾತುಗಳನ್ನಾಡಬೇಕಿದೆ. ಇದರ ಅಗತ್ಯವೇನು. ಪರಂಪರೆಯಿಂದ ಗೋವು ನನ್ನ ಮಾತೆ, ದೇವರು. ಇದು ನನ್ನ ನಂಬಿಕೆಯಾಗಿದ್ದು, ಉಳಿದವರು ಬಾಯಿ ಮುಚ್ಚಿಕೊಂಡು ಗೌರವಿಸಬೇಕು ಅಷ್ಟೇ. ಜನ್ಮ ಪಡೆದ ಮಕ್ಕಳು ಒಂದು ವರ್ಷವಷ್ಟೇ ತಾಯಿಯ ಎದೆ ಹಾಲನ್ನು ಕುಡಿಯುವುದು. ನಂತರದ ಇಡೀ ಜೀವನ ಗೋವಿನ ಹಾಲನ್ನು ಬಳಸುತ್ತಾನೆ. ನಮ್ಮ ಜೀವನ ಪೂರ್ತಿ ಹಾಲೆಂಬ ಅಮೃತ ನೀಡುವ ಗೋವು ಮಾತೃ ಸಮಾನವಾಗಿದೆ ಎಂದು ಹೇಳಿದರು.

**ಒಂಟೆ ಮೂತ್ರಕ್ಕೆ ಬೆಲೆ:** ಹಸುವಿನ ಸಗಣಿ, ಮೂತ್ರದಲ್ಲೇನಿದೆ ಎಂದು ಪ್ರಶ್ನೆ ಮಾಡುತ್ತಾರೆ. ಆದರೆ ಅರಬ್ ರಾಷ್ಟ್ರಗಳಲ್ಲಿ ಒಂಟೆಯ ಮೂತ್ರವನ್ನು ಕುಡಿಯುತ್ತಾರೆ. ಆದರೆ ನಮ್ಮ ದೇಶದಲ್ಲಿ ಗೋ ಮೂತ್ರವನ್ನು ಕುಡಿಯಲು ಮುಂದಾದರೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಗೋವುಗಳು ನಮ್ಮ ಕೈಯ್ಯನ್ನು ನೆಕ್ಕಿದರೆ ಲಕ್ಷ್ಮಿಯೇ ಬಂದಂತೆ ಎಂದು ಹಿರಿಯರು ತಿಳಿಸಿದ್ದಾರೆ. ನನ್ನ ಸಂಪ್ರದಾಯದಲ್ಲಿ ಗೋವನ್ನು ಪೂಜೆ ಮಾಡುತ್ತೇನೆ. ಮಾಡಲೇಬೇಕು ಇದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ ಎಂದು ಚಕ್ರವರ್ತಿ ಸೂಲಿಬೆಲೆ ಹೇಳಿದರು.

# ರಾಜ್ಯದ ವಿದ್ಯುತ್ ನೀತಿ ಗ್ರಾಹಕರು, ಕೈಗಾರಿಕೆಗಳಿಗೆ ಮಾರಕ



ಬೆಂಗಳೂರು, ಜೂ.22 (ಕೆಎಂಶಿ)–ರಾಜ್ಯ ಸರ್ಕಾರದ ವಿದ್ಯುತ್ ನೀತಿ ಖಂಡಿಸಿ ಮೊದಲ ಬಾರಿಗೆ ಕೈಗಾರಿಕೋದ್ಯಮಿಗಳು ಮುಷ್ಕರ ನಡೆಸಿರುವುದು ರಾಜ್ಯದ ವಿದ್ಯುಚ್ಛಕ್ತಿ ಹಳಿ ತಪ್ಪಿರುವುದಕ್ಕೆ ಇದೇ ಸಾಕ್ಷಿ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಕರ್ನಾಟಕ ಕೈಗಾರಿಕೆಯಲ್ಲಿ ಅತ್ಯಂತ ಮುಂದುವರೆದ ರಾಜ್ಯ, ಇಲ್ಲಿ ಸಣ್ಣ ಉದ್ಯಮಗಳಿಂದ ಹಿಡಿದು ಬೃಹತ್ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ವಿದ್ಯುತ್ ನೀತಿ, ಗ್ರಾಹಕರು, ಕೈಗಾರಿಕೋದ್ಯಮಿಗಳಿಗೆ ಮಾರಕವಾಗಿರುವುದು ದುರ್ದೈವ, ಖಂಡನೀಯ. ಮುಂದಿನ ದಿನಗಳಲ್ಲಿ ಸಾಮಾನ್ಯ ಜನರಿಂದ ಹಿಡಿದು ಕೈಗಾರಿಕೆಗಳಿಗೂ ವಿದ್ಯುತ್ ಕ್ಷಾಮ ತಲೆದೋರುವ ಸಾಧ್ಯತೆ ಇದೆ. ಸರ್ಕಾರ ಕೂಡಲೇ ಬೇಕಾಗಿರುವ ಹಣಕಾಸನ್ನು ಬಿಡುಗಡೆ ಮಾಡಬೇಕು, ವಿದ್ಯುತ್ ಬಳಕೆದಾರರ ಮೇಲಿನ ಹೊರೆ ಕಡಿಮೆ ಮಾಡಬೇಕು. ಪೂರ್ವ ತಯಾರಿ ಇಲ್ಲದೆ ಗ್ಯಾರಂಟಿ ಜಾರಿ ಮಾಡಿದರೆ ಅದರ ಎಲ್ಲ ಭಾರವೂ ಜನಸಾಮಾನ್ಯರ ಮೇಲೆ ಬೀಳುತ್ತದೆ ಎಂದರು.

# ಅಂತು ಶಾಲಾ ಮಕ್ಕಳ ಬ್ಯಾಗ್ ತೂಕ ಇಳಿಸಿದ ಶಿಕ್ಷಣ ಇಲಾಖೆ



**ಬೆಂಗಳೂರು, ಜೂ.22–** ಶಾಲಾ ಮಕ್ಕಳ ಬ್ಯಾಗ್ ಹೊರೆ ಇಳಿಸುವ ಬಗ್ಗೆ ಶಿಕ್ಷಣ ಇಲಾಖೆ ಮಹತ್ವದ ಆದೇಶ ಹೊರಡಿಸಿದೆ. 1 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಬ್ಯಾಗ್ ತೂಕವನ್ನು ಶಿಕ್ಷಣ ಇಲಾಖೆ ನಿಗದಿ ಮಾಡಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಈ ಸಂಬಂಧ ಮಹತ್ವದ ಆದೇಶವನ್ನು ಹೊರಡಿಸಿದ್ದಾರೆ.

ಈ ನಿಯಮ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳಿಗೂ ಅನ್ವಯಿಸುತ್ತದೆ. ಕಡ್ಡಾಯವಾಗಿ ಎಲ್ಲಾ ಶಾಲೆಗಳು ಈ ನಿಯಮವನ್ನು ಪಾಲನೆ ಮಾಡಬೇಕೆಂದು ಶಿಕ್ಷಣ ಇಲಾಖೆ ಆದೇಶಿಸಿದೆ.

ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶದಂತೆ 1ರಿಂದ 2ನೇ ತರಗತಿಯ ಮಕ್ಕಳಿಗೆ 1.5ರಿಂದ 2 ಕೆ.ಜಿ, 3ರಿಂದ 5ನೇ ತರಗತಿ 2ರಿಂದ 3 ಕೆ.ಜಿ, 6ರಿಂದ 8 ತರಗತಿ 3ರಿಂದ 4 ಕೆ.ಜಿ ಹಾಗೂ 9ರಿಂದ 10ನೇ ತರಗತಿಯ ಮಕ್ಕಳಿಗೆ 4ರಿಂದ 5 ಕೆ.ಜಿ.ವರೆಗೆ ಶಾಲಾ ಬ್ಯಾಗ್ ತೂಕ ನಿಗದಿ ಮಾಡಲಾಗಿದೆ.

ಇದೇ ವೇಳೆ, 1 ಮತ್ತು 2ನೇ ತರಗತಿ ಶಿಕ್ಷಣವು ಬೋಧನೆಯ ಬುನಾದಿ ಹಂತವಾಗಿದ್ದು, ವಿದ್ಯಾರ್ಥಿಗಳು ಸಕ್ರಿಯವಾಗಿ ಶಾಲೆಗಳಲ್ಲಿಯೇ ಚಟುವಟಿಕೆ ಮೂಲಕ ಕಲಿಯಲು ಆದ್ಯತೆ ನೀಡಬೇಕು. ಈ ವಿದ್ಯಾರ್ಥಿಗಳಿಗೆ ಹೋಮ್ ವರ್ಕ್ ನೀಡಬಾರದು ಎಂದು ಇಲಾಖೆ ಸೂಚಿಸಿದೆ.

ಅದೇ ರೀತಿ 1ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ಭಾಷೆ, ಗಣಿತ, ಪರಿಸರ ವಿಜ್ಞಾನ ವಿಷಯ ಹೊರತುಪಡಿಸಿ ಮತ್ಯಾವುದೇ ಪಠ್ಯಕ್ರಮವನ್ನು ನಿಗದಿಪಡಿಸದಂತೆ ಕ್ರಮ ವಹಿಸಬೇಕು. 3ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕಲಿಕಾ ಬಲವರ್ಧನೆ ಚಟುವಟಿಕೆಗಳನ್ನು ಶಾಲೆಗಳಲ್ಲಿಯೇ ನಿರ್ವಹಿಸಬೇಕು. ಅತ್ಯಂತ ಅಗತ್ಯವಿರುವ ಹಾಗೂ ಪೂರಕವಾಗಿರುವಂತಹ ಚಟುವಟಿಕೆಗಳಿಗೆ ಸೀಮಿತ ಪ್ರಮಾಣದಲ್ಲಿ ಹೋಮ್ ವರ್ಕ್ ನೀಡಬೇಕು.

ವಿದ್ಯಾರ್ಥಿಗಳಿಗೆ ಅತೀ ಹೆಚ್ಚಿನ ಪುಸ್ತಕಗಳನ್ನು ತರುವುದನ್ನು ತಪ್ಪಿಸಲು ವೇಳಾಪಟ್ಟಿ ರೂಪಿಸಿ ಆ ಪ್ರಕಾರವೇ ತರಗತಿಗಳನ್ನು ನಡೆಸಬೇಕು. ಸಾಧ್ಯವಾದಷ್ಟು ಅಭ್ಯಾಸ ಹಾಳೆಗಳನ್ನು ಶಾಲೆಗಳಲ್ಲಿಯೇ ಸಂಗ್ರಹಿಸಿಡಲು ಸೂಚಿಸಬೇಕು. ಶಾಲಾ ಗ್ರಂಥಾಲಯಗಳಲ್ಲಿ ಶಬ್ದಕೋಶ, ಸಮಾನಾರ್ಥಕ ಪದಕೋಶ, ಅಟ್ಲಾಸ್, ಜ್ಞಾನ ವಿಜ್ಞಾನ ಕೋಶಗಳಂತಹ ಪರಾಮರ್ಶ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗುವಂತೆ ಹಾಗೂ ಮಕ್ಕಳು ಇವುಗಳನ್ನು ಅವಶ್ಯಕತೆ ಇದ್ದಾಗ ಬಳಸಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಇಲಾಖೆ ಸೂಚಿಸಿದೆ.

ಇನ್ನು 100ರಿಂದ 200 ಪುಟ ಮೀರದ ನೋಟ್ ಪುಸ್ತಕಗಳನ್ನು ಬಳಸುವಂತೆ ಕ್ರಮ ವಹಿಸಬೇಕು. ಕಡಿಮೆ ಖರ್ಚಿನ ಹಗುರವಾದ ಹಾಗೂ ದೀರ್ಘ ಕಾಲ ಬಾಳಿಕೆ ಬರುವಂತಹ ಶಾಲಾ ಬ್ಯಾಗ್ ಹಾಗೂ ಇತರೆ ಸಾಮಗ್ರಿಗಳನ್ನು ಬಳಸಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು. ಮಕ್ಕಳು ಶಾಲೆಗೆ ಕುಡಿಯುವ ನೀರು ಕೊಂಡೊಯ್ಯುವುದನ್ನು ತಪ್ಪಿಸಲು ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಲೆಯಲ್ಲೇ ಕಲ್ಪಿಸಬೇಕು. ಶಾಲಾ ಬ್ಯಾಗ್ ಹೊರೆಯಿಂದ ಆಗುವ ದುಷ್ಪರಿಣಾಮಗಳನ್ನು ಪೋಷಕರಿಗೆ ಮನವರಿಕೆ ಮಾಡಿಕೊಡಬೇಕು. ನಿಯಮ ಉಲ್ಲಂಘಿಸುವ ಶಿಕ್ಷಕರು, ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದೆ.

# ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು, ಜೂ. 22– ಜೆಎಸ್‌ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಜೂ.25ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಮುಖಾಮುಖಿ ಸಮಾವೇಶ ಏರ್ಪಡಿಸಲಾಗಿದೆ. ಸಮಾವೇಶದ ದಿನದಂದು ಕೂಡ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ.9611070674 ಸಂಪರ್ಕಿಸಿ.

# ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ದೇವಿ ವರ್ಧಂತಿ



ಮೈಸೂರು,ಜೂ.22–ಮೈಸೂರಿನ ಗಾಂಧಿನಗರದ ಶಿವಯೋಗಿಸ್ವಾಮಿ 3ನೇ ಮುಖ್ಯರಸ್ತೆಯಲ್ಲಿರುವ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಆಷಾಢ ಮಾಸದ ವಿಶೇಷ ಪೂಜೆ ಹಾಗೂ ದೇವಿಯ ವರ್ಧಂತಿ ಮಹೋತ್ಸವ ಜರುಗಲಿದೆ.

ಪ್ರತಿ ಆಷಾಢ ಶುಕ್ರವಾರಗಳಂದು ದುರ್ಗಾದೇವಿಗೆ ವಿಶೇಷ ಪಂಚಾಮೃತ ಅಭಿಷೇಕ ನೆರವೇರಿಸಿ, ಅಲಂಕಾರ ಮಾಡಿ ವಿಶೇಷ ಪೂಜೆ ನೆರವೇರಿಸಲಾಗುವುದು. ಜುಲೈ 10 ರಂದು ಅಮ್ಮನವರ ವರ್ಧಂತಿ ಪ್ರಯುಕ್ತ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ದುರ್ಗಾದೇವಿ ಸೇವಾ ಸಮಿತಿಯ ಅಧ್ಯಕ್ಷ ಎಂ.ಪಿ.ನಾಗರಾಜು, ಉಪಾಧ್ಯಕ್ಷ ಆರ್.ಅಶೋಕಕುಮಾರ್, ಪುರೋಹಿತರಾದ ಎಂ.ರಂಗರಾಜು (ಖಾನಿ) ಹಾಗೂ ಎಲ್.ದಿಲೀಪ್‌ಕುಮಾರ್ ತಿಳಿಸಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಏನ್ರೀ ಕಲ್ ಇದ್ದ ಹಾಗೇ ಇದ್ದೀರ?
ಗಂಡ : ಹೂ ಕಣೇ, ಅಕ್ಕೀಲಿ ಕಲ್ಲನ್ನು ಸೋಸಿ ಹಾಕು ಅಂದ್ರೆ ಹಾಗೇ ಬೇಯ್ಸಿ ಹಾಕ್ತಿಯಲ್ಲ, ಅದನ್ನು ತಿಂದು ಕಲ್ಲಿದ್ದಂಗೆ ಇದ್ದೀನಿ.

ಮೈಸೂರು ಮಿತ್ರ

ಶುಕ್ರವಾರ, 23 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ.........

ಯಶಸ್ಸಿನ ಮೂಲಭೂತ ತತ್ವವೇನೆಂದರೆ ಹಿಡಿದ ಕೆಲಸವನ್ನು ಬಿಡದೇ ಮಾಡುವುದು. –ವಾಲ್ಟೇರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುರ್ಯೋಧನನಿದ್ದಲ್ಲಿ ಕೌರವನ ಬಳಗಕ್ಕೆ ಕೊರತೆಯೇ?

## ನಿಮ್ಮ ಪತ್ರಗಳು

### ಮೈಶುಗರ್ ಕಾರ್ಖಾನೆಗೆ 50 ಕೋಟಿ ರೂ. ಬಿಡುಗಡೆ ಶ್ಲಾಘನೀಯ

ಮಾನ್ಯರೆ,

ನಮ್ಮ ರಾಜ್ಯದಲ್ಲಿ ಇರುವ ಏಕೈಕ ಸರ್ಕಾರಿ ಸ್ವಾಮ್ಯದ ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನ ಹಾಗೂ ದುಡಿಯುವ ಬಂಡವಾಳಕ್ಕಾಗಿ 50 ಕೋಟಿ ರೂ. ಧನಸಹಾಯಬೇಕು ಎಂದು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ಹಣ ಬಿಡುಗಡೆಗೆ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆದು, ಹಣ ಬಿಡುಗಡೆ ಮಾಡಿಸುವ ನಿಟ್ಟಿನಲ್ಲಿ ಯಶಸ್ವಿಯಾದ ಮಂಡ್ಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರ ಕಾರ್ಯ ತುಂಬಾ ಶ್ಲಾಘನೀಯ.

2023–24 ನೇ ಸಾಲಿನಲ್ಲಿ ಕಬ್ಬು ಅರೆಯಲು 50 ಕೋಟಿ ಹಣ ಬಿಡುಗಡೆಗೆ ಕಾರಣರಾದ ಕೃಷಿ ಸಚಿವ ಚಲುವರಾಯಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನಾರ್ಹರು. ಬಿಡುಗಡೆಗೊಳಿಸಿರುವ ಹಣವನ್ನು ಯಾವುದೇ ಕಾರಣಕ್ಕೂ ಪೋಲಾಗದಂತೆ, ಕಾರ್ಖಾನೆಯ ಪುನಶ್ಚೇತನ ಕಾಮಗಾರಿಗೆ ಹಾಗೂ ದುಡಿಯುವ ಬಂಡವಾಳಕ್ಕೆ ಸರಿಯಾಗಿ ಸದ್ವಿನಿಯೋಗವಾದರೆ ಮಾತ್ರ ಈ ಭಾಗದ ರೈತರಿಗೆ ವರದಾನವಾಗಿ ಪರಿಣಮಿಸುತ್ತದೆ. ಹಾಗೂ ಸರಿಯಾದ ಸಮಯಕ್ಕೆ ಅರೆದ ಕಬ್ಬಿಗೆ ರೈತರಿಗೆ ಹಣ ಬಿಡುಗಡೆ ಮಾಡಿಸುವುದು ತುಂಬಾ ಜವಾಬ್ದಾರಿಯ ಕೆಲಸ. ಆದ್ದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು ಇತ್ತ ಕಡೆ ಗಮನ ಹರಿಸಿ ರೈತರ ಬದುಕು ಹಸನಾಗಲು ನೆರವಾಗುವುದು ಸೂಕ್ತ.

**–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.**

### ಗ್ಯಾರಂಟಿ ಹೆಸರಲ್ಲಿ ಜನರಿಗೆ ಬರೆ

ಮಾನ್ಯರೆ,

ಗ್ಯಾರಂಟಿ ಯೋಜನೆಗಳಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಮೊದಲ ಸಚಿವ ಸಂಪುಟದಲ್ಲೇ ಎಲ್ಲಾ ಐದು ಗ್ಯಾರಂಟಿ ಯೋಜನೆ ತರುತ್ತೇವೆ ಎಂದು ಹೇಳಿ ತಿಂಗಳು ಕಳೆದರೂ ಐದು ಗ್ಯಾರಂಟಿ ಯೋಜನೆ ಜಾರಿ ಮಾಡಿಲ್ಲ ಹಾಗೂ ಒಂದೊಂದೇ ಷರತ್ತು ವಿಧಿಸುತ್ತಿದೆ. ವಿದ್ಯುತ್ ದರ ಯದ್ವಾತದ್ವ ಏರಿಕೆ ಆಗಿದೆ. ಸೋಲಾರ್ ಸಬ್ಸಿಡಿ ಕಟ್ ಆಗಿದೆ. ಸಾಲದೆಂಬಂತೆ ಆಸ್ತಿ ನೋಂದಣಿ ಶುಲ್ಕ ಜಾಸ್ತಿ ಮಾಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಮದ್ಯದ ರೇಟ್ ಹೆಚ್ಚಾಗಿದೆ. ಅಕ್ಕಿಗಾಗಿ ಕೇಂದ್ರದತ್ತ ಬೊಟ್ಟು ಮಾಡುತ್ತಿದ್ದಾರೆ. ಒಂದು ಕಡೆ ಕೊಟ್ಟು ಇನ್ನೊಂದು ಕಡೆ ಜನರ ಜೇಬಿಗೆ ಕತ್ತರಿ ಇಡುತ್ತಿದ್ದಾರೆ. ಇದೇನಾ ಗ್ಯಾರಂಟಿ. ದಯವಿಟ್ಟು ಜನರನ್ನು ಮೂರ್ಖರನ್ನಾಗಿಸಬೇಡಿ.

**– ಸಂತೋಷ, ಮೈಸೂರು**

### ಶಾಸಕರ ನಡೆ ಅನುಕರಣೀಯ...

ಮಾನ್ಯರೇ,

ಮೈಸೂರಿನ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರಾದ ಟಿ.ಎಸ್.ಶ್ರೀವತ್ಸ ತಮ್ಮ ಕ್ಷೇತ್ರದ ಪೂರ್ವ ನಿಯೋಜಿತ ಕಾಮಗಾರಿ ವೇಳೆ ಗುತ್ತಿಗೆದಾರರಿಗೆ ಹಾರ ತುರಾಯಿ ಬದಲು ನೋಟ್ ಪುಸ್ತಕಗಳನ್ನು ನೀಡುವಂತೆ ಸೂಚಿಸಿ ಅದನ್ನು ತಮ್ಮ ಕ್ಷೇತ್ರದ ಸರ್ಕಾರಿ ಶಾಲೆ, ಕಾಲೇಜಿನ ಮಕ್ಕಳಿಗೆ ತಲುಪಿಸುವ ನಿರ್ಧಾರ ಶ್ಲಾಘನೀಯ ಹಾಗೂ ಅನುಕರಣೀಯ.

ಇದು ಸಾಮಾನ್ಯ ನಿಷ್ಠಾವಂತ ಕಾರ್ಯಕರ್ತನಾಗಿ ಗುರುತಿಸಿ, ಶಾಸಕರಾಗಿ ಆಯ್ಕೆಯಾಗಿ ಸಾಮಾನ್ಯರ ಕಷ್ಟ ಸುಖಗಳನ್ನು ಅರಿತು ಸ್ಪಂದಿಸುವ ಅವರ ಮನೋಭಾವನೆಗೆ ಒಂದು ದೊಡ್ಡ ಸಲಾಂ. ಇಂತಹ ನಡೆಯನ್ನು ರಾಜ್ಯದ ಎಲ್ಲಾ ಶಾಸಕ, ಸಂಸದರು ಅನುಸರಿಸಿದರೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ಆದಷ್ಟು ಸಹಕಾರಿಯಾಗಬಹುದಲ್ಲವೇ?

ಇದರಿಂದ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಓದ ಬಯಸುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯೂ ಕಾಣಬಹುದು ಅನಿಸುತ್ತೆ.

**–ಎಂ. ಎನ್. ತುಕಾರಾಮ್ ರಾವ್, ಪ್ರಜ್ಞಾವಂತ ನಾಗರಿಕರ ಬಳಗ, ವಿ.ವಿ. ಮೊಹಲ್ಲಾ, ಮೈಸೂರು.**

### ಮೈಸೂರಿನ ದಕ್ಷ ಅಧಿಕಾರಿಗಳು

ಮಾನ್ಯರೆ,

1970 ರ ದಶಕದಲ್ಲಿ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಐ.ಎ.ಎಸ್ ಅಧಿಕಾರಿಗಳನ್ನು ನೆನೆಸಿಕೊಂಡು ಎಂದಿಗೂ ಇಂಥ ಅಧಿಕಾರಿಗಳ ಋಣವನ್ನು ಮೈಸೂರು, ತೀರಿಸಲಾಗದೆಂಬ ವಿಚಾರವನ್ನು ನೆನಪಿಸಿಕೊಟ್ಟಿದ್ದಕ್ಕಾಗಿ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರಿಗೆ ಧನ್ಯವಾದಗಳು.

ನನ್ನ ಕಣ್ಣ ಮುಂದೆ ಸಯೀಂ ಅವರು .ಡಿ.ಆರ್.ಕೃಷ್ಣಮೂರ್ತಿಯವರ ಸ್ಕೂಟರ್‌ನಲ್ಲಿ ಹೋಗುತ್ತಿರುವ 'ಸ್ಟಾರ್ ಆಫ್ ಮೈಸೂರು' ಪ್ರಕಟಿಸಿದ್ದ ಚಿತ್ರವೇ ಬರುತ್ತದೆ!

ಮೈಸೂರಿನಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸಿದ ಅಧಿಕಾರಿಗಳು ಏಕೋ ಸರಕಾರದ ಕೃಪಾಕಟಾಕ್ಷಕ್ಕೆ ನಂತರದ ದಿನಗಳಲ್ಲಿ ಬೀಳಲೇ ಇಲ್ಲ.

ಕನಿಷ್ಠ ಹತ್ತು ಮಂದಿಯಾದರೂ ಮೈಸೂರು ನಗರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ ರಾಜ್ಯವ್ಯಾಪಿ ಹೆಸರಾದ ಅಧಿಕಾರಿಗಳು ನಮಗೆ ಸಿಕ್ಕುತ್ತಾರೆ. ಇವರೆಲ್ಲರ ಬಗ್ಗೆ 'ಮೈಸೂರು ಮಿತ್ರ' ಒಂದು ಲೇಖನದ ಸರಣಿಯನ್ನೇ ಮಾಡಬಹುದು. ನೆನಪು ಕಹಿಯಲ್ಲ!

**–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.**

### ಇದು ಅಪಾಯಕಾರಿಯಲ್ಲವೆ?

ಮಾನ್ಯರೆ,

ಇತ್ತೀಚೆಗೆ ನಾನು ಮಧ್ಯಾಹ್ನ 4 ಗಂಟೆಯ ವೇಳೆಯಲ್ಲಿ ಇಲವಾಲದಿಂದ ಮೈಸೂರು ನಗರ ಸಾರಿಗೆ ಬಸ್‌ನಲ್ಲಿ ಮೈಸೂರು ನಗರ ಬಸ್ ನಿಲ್ದಾಣಕ್ಕೆ ಸಂಚರಿಸುವಾಗ ಬಸ್ ಕಿಕ್ಕಿರಿದು ಜನಸಂದಣಿಯಿಂದ ತುಂಬಿತ್ತು. ಆಕಾಶವಾಣಿ ವೃತ್ತದ ಬಳಿ ಅನೇಕ ವಿದ್ಯಾರ್ಥಿನಿಯರು ಬಸ್ ಹತ್ತಲು ಹರಸಾಹಸ ಪಡುತ್ತಿದ್ದರು. ಅನೇಕ ವಿದ್ಯಾರ್ಥಿನಿಯರು ರಸ್ತೆಯ ಮಧ್ಯದಲ್ಲೇ ನಿಂತು ಬಿಟ್ಟಿದ್ದರು. ಮೊದಲೇ ಕಿಕ್ಕಿರಿದ ಬಸ್‌ಗಳು ಬ್ರೇಕ್ ವೈಫಲ್ಯ ಆಗುವ ಸಾಧ್ಯತೆಗಳಿವೆ. ಪಾಪ ಅಮಾಯಕ ವಿದ್ಯಾರ್ಥಿನಿಯರ ಮೇಲೆ ಹರಿದಿದ್ದರೆ ಪ್ರಾಣಹಾನಿ ಆಗುವ ಸಾಧ್ಯತೆಯೂ ಇದೆ. ಸಂಜೆಯ ವೇಳೆ ಸ್ವಲ್ಪ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿ ವಿದ್ಯಾರ್ಥಿನಿಯರ ಹಿತ ಕಾಪಾಡಬೇಕೆಂದು ಮನವಿ.

**–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.**

## ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

# ಭೈರಪ್ಪನವರ ಕಾದಂಬರಿಗಳ ಅನುವಾದ ಅದ್ಭುತ

**ಭೈರಪ್ಪನವರ ಭಾಷೆ ಅರ್ಥಗ್ರಹಣಕ್ಕೆ ಸುಲಭ. ಆದರೆ ಅನುವಾದಕ್ಕೆ ಕಷ್ಟ. ಅವರ ಭಾಷೆಯ ಸೊಗಡನ್ನು ಬೇರೆ ಭಾಷೆಯಲ್ಲಿ ತರುವುದು ಕಷ್ಟ ಸಾಧ್ಯ. ಒಂದೊಂದು ಭಾಷೆಯ ಅನುವಾದಕರಿಗೆ ಒಂದೊಂದು ಸಮಸ್ಯೆ ಎದುರಾಗುತ್ತದೆ. ಭೈರಪ್ಪನವರ ಕೃತಿಗಳು ಸಂಸ್ಕೃತ, ಮಲೆಯಾಳ, ತಮಿಳು, ಸಂಕೇತಿ, ತೆಲುಗು, ಹವ್ಯಕ (ಹವಿಗನ್ನಡ), ಹಿಂದಿ, ಮರಾಠಿ, ಕೊಂಕಣಿ, ಒರಿಯಾ, ಬಂಗಾಳಿ, ಪಂಜಾಬಿ, ಗುಜರಾತಿ, ಅಸ್ಸಾಮಿ, ಉರ್ದು, ಇಂಗ್ಲಿಷ್, ಚೈನೀಸ್, ರಷ್ಯನ್ ಭಾಷೆಗಳಿಗೆ ಅನುವಾದಗೊಂಡಿವೆ**

ಕನ್ನಡದಲ್ಲಿ ಬರೆದು ಕನ್ನಡನಾಡಿನಲ್ಲಿ ಪ್ರಸಿದ್ಧರಾಗುವುದು ಸಹಜ. ಕನ್ನಡದಲ್ಲೇ ಬರೆದರೂ ಭಾರತ ದೇಶದ ಎಲ್ಲಾ ಪ್ರಾಂತ್ಯಗಳಲ್ಲೂ ಪ್ರಸಿದ್ಧರೂ, ಜನಪ್ರಿಯರೂ ಆಗುವುದು ನಿಶ್ಚಿತವಾಗಿ ವಿಶೇಷ. ಡಾ. ಎಸ್.ಎಲ್.ಭೈರಪ್ಪನವರು ಕನ್ನಡಿಗರಿಗೆ ಹೇಗೆ ಅಚ್ಚುಮೆಚ್ಚೋ ಹಾಗೆ, ಅಥವಾ ಅದಕ್ಕಿಂತ ಹೆಚ್ಚು ಮಹಾರಾಷ್ಟ್ರ ಮತ್ತಿತರ ಪ್ರದೇಶಗಳಲ್ಲಿ ಜನರಿಗೆ ಆತ್ಮೀಯರಾಗಿರುವುದು ಅಚ್ಚರಿಯನ್ನು ಉಂಟು ಮಾಡುವ ಸತ್ಯ. ಭೈರಪ್ಪ ಕನ್ನಡದಲ್ಲಿ ಬರೆಯುವ ಮರಾಠಿ ಲೇಖಕ ಎಂದು ಹೆಮ್ಮೆಯಿಂದ ಹೇಳುವ ಮರಾಠಿಗರಿದ್ದಾರೆ. ಹೀಗೆ ಅಖಿಲ ಭಾರತ ವ್ಯಾಪ್ತಿಯನ್ನು ಹೊಂದಿರುವ ಸಾಹಿತಿಗಳಾಗುವುದಕ್ಕೆ ಅವರ ಕಾದಂಬರಿಗಳ ಮೂಲಸತ್ತ್ವ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ನಾನಾ ಭಾಷೆಗಳಲ್ಲಿ ಅವರಿಗೆ ಸಿಕ್ಕಿರುವ ಅನುವಾದಕರು ಎಂಬುದೂ ಸತ್ಯವೇ. ಅವರು ಕನ್ನಡದ ಕಂಪನ್ನು ದೇಶದ ಮೂಲೆ ಮೂಲೆಗಳಿಗೆ ತಲುಪಿಸಿದ್ದಾರೆ. ಅವರು ಅನುವಾದವನ್ನು ಮಾಡುವಾಗ ವಿಶಿಷ್ಟ ಅನುಭವವನ್ನೂ ಪಡೆದಿದ್ದಾರೆ. ಹೂವಿನಿಂದ ನಾರೂ ದೇವರ ಮುಡಿಗೆ ಏರುವಂತೆ ಡಾ. ಭೈರಪ್ಪನವರ ಜೊತೆಗೆ ಅನುವಾದಕರೂ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಅಂತಹ ಹಲವಾರು ಅನುವಾದಕರು ಭೈರಪ್ಪನವರ ಬಗೆಗೆ ಬರೆದಿರುವ ಲೇಖನಗಳನ್ನೂ ರೂಪಾಂತರಕಾರರ ಬರಹಗಳನ್ನು ಸಂಬಂಧಿಸಿದ ಇತರ ನುಡಿಗಡಣವನ್ನೂ ಒಟ್ಟಿಗೆ ನಾವು ಕಾಣುವುದು **ವಿಶ್ವ ಸಾಹಿತಿ ಭೈರಪ್ಪ** ಅವರ ಗ್ರಂಥದಲ್ಲಿ. ಇದು ಕೇವಲ ಗ್ರಂಥವಲ್ಲ, ಗ್ರಂಥರತ್ನ. ಇದನ್ನು ವಿಶೇಷ ಜತನದಿಂದ ಸಿದ್ಧಪಡಿಸಿ ಕನ್ನಡದ ಜನತೆಗೆ ಅರ್ಪಿಸಿರುವವರು **ಡಾ. ವಿಜಯಾ ಹರನ್**. ಸಾಮಾನ್ಯರಿಗೂ ಮಾನ್ಯರಿಗೂ ವಿಜಯಾಹರನ್ ಅವರು ಕೊಟ್ಟಿರುವ ಅಸಾಮಾನ್ಯ ಕೊಡುಗೆ 'ವಿಶ್ವ ಸಾಹಿತಿ ಭೈರಪ್ಪ' ಕನ್ನಡದ ಬೇರೆ ಯಾವ ಸಾಹಿತಿಯ ಬಗೆಗೂ ಇಷ್ಟು ಅಮೂಲ್ಯವಾದ, ಇಷ್ಟು ಅನರ್ಘ್ಯವಾದ ಕೃತಿ ಬೆಳಕಿಗೆ ಬಂದಿಲ್ಲವೆಂದು ನನ್ನ ಅನಿಸಿಕೆ. ವಿಜಯಾಹರನ್ ಅವರು ಹಿಂದೆ 'ನಮ್ಮ ಭೈರಪ್ಪನವರು', 'ಬಲ್ಲವರು ಬಲ್ಲಂತೆ ಭೈರಪ್ಪ' ಎಂಬ ಕೃತಿಗಳನ್ನು ಲೋಕಕ್ಕೆ ಕೊಟ್ಟಿದ್ದಾರೆ. ಭೈರಪ್ಪನವರ ವಿಶ್ವರೂಪ ಸಮಾನ ವ್ಯಕ್ತಿತ್ವಕ್ಕೆ ಅವು ಕಂದೀಲನ್ನು ಹಿಡಿದು ಬೆಳಗಿಸಿವೆ. ಅವೆರಡನ್ನೂ ಮೀರಿಸುವಂತೆ 'ವಿಶ್ವ ಸಾಹಿತಿ ಭೈರಪ್ಪ' ಈಗ ಮೈತಳೆದಿದೆ.

**ಅನುವಾದಕರ ಅನುಭವಗಳು**

ಗ್ರಂಥವನ್ನು ಓದಿ ರಸಾಸ್ವಾದ ಮಾಡಿ ಆನಂದಿಸುವುದು ಸುಲಭ. ಆದರೆ ಅದರ ಒಂದೊಂದು ಪದವನ್ನೂ ಅರ್ಥ ಮಾಡಿಕೊಂಡು ಇನ್ನೊಂದು ಭಾಷೆಯಲ್ಲಿ ಅನುವಾದ ಮಾಡುವುದು ಕಷ್ಟ. ಮೂಲದಲ್ಲಿರುವ ಯಾವ ಅಂಶವೂ ಬಿಟ್ಟು ಹೋಗಬಾರದು, ಅಲ್ಲಿಲ್ಲದ ಯಾವುದೋ ವಿಷಯ ಅನುವಾದದಲ್ಲಿ ಸೇರಿಕೊಳ್ಳಬಾರದು, ಮೂಲ ಪದಗಳ ಅರ್ಥವಲ್ಲದೆ ಭಾವವೂ ಅದರಲ್ಲಿ ಹಾಗೇ ತುಂಬಿಕೊಂಡಿರಬೇಕೆಂದು ಪ್ರತಿಯೊಬ್ಬ ಅನುವಾದಕನೂ ಬಯಸುತ್ತಾನೆ.

ಇದರಿಂದ ಅನುವಾದಕನ ಕೆಲಸ ಕಠಿಣವಾಗಿರುತ್ತದೆ. ಸ್ವಲ್ಪ ತಪ್ಪಾದರೂ ಟೀಕೆ–ಟಿಪ್ಪಣಿಗಳ ಸುರಿಮಳೆಯಾಗುತ್ತದೆ. Translators are the traitors of writers ಎಂಬ ನಿಂದೆಗೆ ಈಡಾಗಬೇಕಾಗುತ್ತದೆ. ರೂಪಾಂತರಕಾರರಿಗೆ ಈ ಭಯವಿಲ್ಲ. ಅವರಿಗೆ ಸ್ವಾತಂತ್ರ್ಯ ಹೆಚ್ಚು, ಅನುವಾದ ಅನ್ಯೂನಾತಿರಿಕ್ತವಾಗಿರಬೇಕು.

ಭೈರಪ್ಪನವರ ಭಾಷೆ ಅರ್ಥಗ್ರಹಣಕ್ಕೆ ಸುಲಭ. ಆದರೆ ಅನುವಾದಕ್ಕೆ ಕಷ್ಟ. ಅವರ ಭಾಷೆಯ ಸೊಗಡನ್ನು ಬೇರೆ ಭಾಷೆಯಲ್ಲಿ ತರುವುದು ಕಷ್ಟ ಸಾಧ್ಯ. ಒಂದೊಂದು ಭಾಷೆಯ ಅನುವಾದಕರಿಗೆ ಒಂದೊಂದು ಸಮಸ್ಯೆ ಎದುರಾಗುತ್ತದೆ. ಭೈರಪ್ಪನವರ ಕೃತಿಗಳು ಸಂಸ್ಕೃತ, ಮಲೆಯಾಳ, ತಮಿಳು, ಸಂಕೇತಿ, ತೆಲುಗು, ಹವ್ಯಕ (ಹವಿಗನ್ನಡ), ಹಿಂದಿ, ಮರಾಠಿ, ಕೊಂಕಣಿ, ಒರಿಯಾ, ಬಂಗಾಳಿ, ಪಂಜಾಬಿ, ಗುಜರಾತಿ, ಅಸ್ಸಾಮಿ, ಉರ್ದು, ಇಂಗ್ಲಿಷ್, ಚೈನೀಸ್, ರಷ್ಯನ್ ಭಾಷೆಗಳಿಗೆ ಅನುವಾದಗೊಂಡಿವೆ. ಎಷ್ಟು ಭಾಷೆ, ಎಷ್ಟು ಅನುವಾದಕರು! ಇವರ ಅನುಭವಗಳು ಹೇಗಿದ್ದುವು?

ಇದನ್ನೆಲ್ಲಾ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ತರುವುದೆಂದರೆ ಅದು ಅಶ್ವಮೇಧ ಯಾಗವನ್ನು ಮಾಡಿದಷ್ಟೇ ಕ್ಲಿಷ್ಟಕಾರ್ಯ. ಈ ಸಂಕೀರ್ಣ ಕಾರ್ಯವನ್ನು ಡಾ. ವಿಜಯಾಹರನ್ ಹೇಗೆ ಸಾಧಿಸಿದರೆನ್ನುವುದು ಒಂದು ಸಾಹಸಗಾಥೆಯ ವಿಷಯ. ಅದನ್ನು ಅವರೇ ಮೂವತ್ತಾರು ಪುಟಗಳ ದೀರ್ಘಲೇಖನದಲ್ಲಿ ಬರೆದಿದ್ದಾರೆ. ಈ ಪುಸ್ತಕವನ್ನು ಹೊರತರಲು ಸ್ಫೂರ್ತಿ ಹೇಗೆ ದೊರಕಿತು ಎಂಬುದನ್ನೂ ಹೇಳಿದ್ದಾರೆ. ಅವರ ಲೇಖನವನ್ನು ಓದುತ್ತಿದ್ದರೆ ರೋಮಾಂಚನವಾಗುತ್ತದೆ. ಅವರು ಬರೆದಿದ್ದಾರೆ–

"ಭಾಷಾಂತರವಿರಲಿ, ರೂಪಾಂತರವಿರಲಿ, ಅಳವಡಿಕೆಯಿರಲಿ, ಭೈರಪ್ಪನವರ ಸಾಹಿತ್ಯವು ವಿಶ್ವವ್ಯಾಪಿಯಾಗಲು ನೆರವಾಗಿವೆ. ಆ ಸಾಹಿತ್ಯದ ಕಲಾತ್ಮಕವೂ ತಾತ್ತ್ವಿಕವೂ ಆದ ಅಂತಸ್ಸತ್ತ್ವವನ್ನು ಎಲ್ಲ ಸ್ತರದ ಜನರೂ ಸವಿಯಲು ನೆರವಾಗಿವೆ. ಹಾಗಾಗಿ ಭೈರಪ್ಪನವರ ಅನುವಾದ ಪ್ರಪಂಚದ ಸಮಗ್ರ ಪರಿಚಯವನ್ನು ಕ್ರೋಢೀಕರಿಸಬೇಕು ಎಂದು ಹೊರಟ ಕೃತಿ ಇದು" (ಪು. xxxii)

ಇಂತಹ ಉನ್ನತ ಧ್ಯೇಯವನ್ನಿಟ್ಟುಕೊಂಡ ಗ್ರಂಥದ ಗುಣಗಳೂ ಅಷ್ಟೇ ಉನ್ನತವಾಗಿರುವುದರಲ್ಲಿ ಆಶ್ಚರ್ಯವಿಲ್ಲ. ವಿಜಯಾಹರನ್ ಅವರ ಕರೆಗೆ ಓಗೊಟ್ಟು ಅನುವಾದಕರು ಲೇಖನಗಳನ್ನು ಬರೆದು ತಮ್ಮ ಮನದಾಳದ ಮಾತುಗಳನ್ನಾಡಿದ್ದಾರೆ. ಹಲವರು ಇಂಗ್ಲೀಷಿನಲ್ಲೇ ಲೇಖನಗಳನ್ನು ಬರೆದು ಕಳುಹಿಸಿದುದರಿಂದ ಅವನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯದ ಭಾರವೂ ವಿಜಯಾಹರನ್ ಅವರ ಹೆಗಲಿನ ಮೇಲೆ ಬಿದ್ದಿದೆ. ಅವರೂ ಅವರ ಆತ್ಮೀಯರೂ ಆ ಕೆಲಸವನ್ನು ಸಮರ್ಪಕವಾಗಿ ಮಾಡಿದ್ದಾರೆ. ಇದಕ್ಕಾಗಿ ಕನ್ನಡ ಸರಸ್ವತಿ ಅವರನ್ನು ಪೂರ್ಣ ಹೃದಯದಿಂದ ಅನುಗ್ರಹಿಸುತ್ತಾಳೆ ಎಂದು ನನ್ನ ನಂಬಿಕೆ.

ಅನುವಾದಕರ ಲೇಖನಗಳನ್ನು ಓದುವುದು ಮುಂದೆ ಅನುವಾದಕರಾಗಲು ಬಯಸುವ ಎಲ್ಲರಿಗೂ ಲಾಭದಾಯಕ. ಪರ್ವವನ್ನು ಬಂಗಾಳಿಗೆ ಅನುವಾದಿಸಿರುವ ಡಾ. ಪುಷ್ಪಾಮಿತ್ರ ಅವರು ಬರೆದಿರುವ ಈ ಮಾತುಗಳನ್ನು ನೋಡೋಣ:

"ಯಾವುದೇ ಸಾಹಿತ್ಯ ಕೃತಿಯನ್ನು ಒಂದು ಭಾಷೆಯಿಂದ ಇನ್ನೊಂದಕ್ಕೆ ಅನುವಾದಿಸುವುದು ಸುಲಭದ ಕೆಲಸವಲ್ಲ. ಸಮಸ್ಯೆಗಳು ಆರಂಭದಲ್ಲೇ ತೋರಿದವು. ಅನುವಾದಿತ ಕೃತಿಯಲ್ಲಿ ಅನುವಾದದ ಛಾಯೆಯು ಕಾಣಿಸಬಾರದು ಎಂಬುದು ನನ್ನ ಮತ. ಆ ಕೃತಿಯು ರಚಿತವಾದದ್ದೇ ಆ ಭಾಷೆಯಲ್ಲಿ ಎಂದು ಓದುಗನಿಗೆನಿಸಬೇಕು. ಆ ನಿಟ್ಟಿನಲ್ಲಿ ಹಲವಾರು ಮೇಲ್ಪಂಕ್ತಿಗಳನ್ನು ಹಾಕಿಕೊಳ್ಳಬೇಕಿತ್ತು"

(ಪು. 229–230)

ಸ್ವಯಂ ಗುಜರಾತಿಯ ಶ್ರೇಷ್ಠ ಕವಿಗಳಾಗಿರುವ ಡಾ. ಜಯಾ ಮೆಹತಾ ಅವರು ಭೈರಪ್ಪನವರ ಕಾದಂಬರಿಯೊಂದನ್ನು ನನ್ನ ಮಾತೃಭಾಷೆ ಗುಜರಾತಿಗೆ ಅನುವಾದಿಸುವ ಅವಕಾಶ ಒದಗಿದ್ದು ನನ್ನ ಅದೃಷ್ಟವೆಂದೇ ಭಾವಿಸಿದ್ದೇನೆ ಎಂದಿದ್ದಾರೆ.

ಭೈರಪ್ಪನವರ ಹಲವು ಕಾದಂಬರಿಗಳನ್ನು ಇಂಗ್ಲೀಷಿಗೆ ಅನುವಾದ ಮಾಡಿರುವ ಡಾ. ಎಸ್. ರಾಮಸ್ವಾಮಿ ಅವರು ಹೇಳುತ್ತಾರೆ–

"ಭೈರಪ್ಪನವರ ಕಾದಂಬರಿಗಳು ಎಷ್ಟು ಪೂರ್ಣವಾಗಿ ಭಾರತೀಯ ಸಂಸ್ಕೃತಿಯಲ್ಲಿ ನೆಟ್ಟುಕೊಂಡಿವೆ ಎಂದರೆ ಅದನ್ನು ಪಾಶ್ಚಾತ್ಯ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡುವುದು ಬೇರುಗಳ ಸಹಿತ ಒಂದು ಹೆಮ್ಮರವನ್ನು ಕಿತ್ತುಹಾಕಿದ ಅನುಭವ. ಅದೇ ಬೇರೆ ಭಾರತೀಯ ಭಾಷೆಗಳಿಗೆ ಭಾಷಾಂತರಿಸುವುದಕ್ಕೆ ಅದು ಒಗ್ಗುತ್ತದೆ. ಇಂಗ್ಲೀಷಿನಲ್ಲಿ Glossary ಕೊಡಲು ಹೋದರೆ ಅದಕ್ಕೆ ಕೊನೆ ಮೊದಲಿಲ್ಲ. ಆದ್ದರಿಂದ ಆಂಗ್ಲ ಭಾಷೆಯ ಸರಹದ್ದಿನಲ್ಲೇ, ಚೌಕಟ್ಟಿನಲ್ಲೇ ಈ ಪಾರಿಭಾಷಿಕ ಶಬ್ದಕೋಶವನ್ನು ಅಳವಡಿಸಬೇಕಾಗುತ್ತದೆ. (ಪು. 257).

**ಭೈರಪ್ಪನವರ ಕೃತಿಗಳ ರೂಪಾಂತರಕಾರರ ಅನುಭವಗಳು** ಎಂಬ ಭಾಗದಲ್ಲಿ 'ಭೈರಪ್ಪನವರ ಧ್ವನಿಪುಸ್ತಕಗಳು' ಎಂಬ ಲೇಖನವನ್ನು ರಾಕೇಶ್ ವಾಗ್ಮೋರೆ ಬರೆದಿದ್ದಾರೆ. ದೃಷ್ಟಿ ವಿಕಲಚೇತನರೂ ಭೈರಪ್ಪನವರ ಸಾಹಿತ್ಯವನ್ನು ಓದಲು ಮತ್ತು ಆನಂದಿಸಲು ಈ ರೂಪಾಂತರದಿಂದ ಶಕ್ಯವಾಗಿದೆ. ವಿಕಲಚೇತನ, ಸಂಗೀತ ಕಲಾವಿದೆ ಕುಮಾರಿ ಕವಿತಾ ಅವರ ಅನುಭವ ಅವರದೇ ಮಾತುಗಳಲ್ಲಿ ಹೀಗೆ ದಾಖಲಾಗಿದೆ.

"ಮಂದ್ರ ಕಾದಂಬರಿ ಓದುವ ನನ್ನ ಬಯಕೆ 2018ರಲ್ಲಿ ಫಲ ಕೊಟ್ಟಿತು. 596 ಪುಟಗಳ ಉತ್ಕೃಷ್ಟ ಕಾದಂಬರಿಯ ಓದು ನನಗೆ ಹೊಸ ರಸಾನುಭವವನ್ನು ಉಂಟು ಮಾಡಿತು. ನಾನು ಕೂಡ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಉನ್ನತ ಮಟ್ಟದ ಅಭ್ಯಾಸದಲ್ಲಿ ತೊಡಗಿರುವ ಕಾರಣದಿಂದ 'ಮಂದ್ರ' ಕಾದಂಬರಿ ನನಗೆ ಒಂದು ತರಹದ ಜ್ಞಾನಬೋಧಕ ಮತ್ತು ವಾಸ್ತವ ಸಂಗೀತ ಕಲಾವಾಧ್ಯಮದ ಕೈಗನ್ನಡಿಯಂತೆ ಪರಿಣಮಿಸಿತು". (ಪು. 356).

'ಭೈರಪ್ಪನವರು ನಗಲಿಲ್ಲ' ಎಂಬ ಅತ್ಯಂತ ಮೌಖಿಕ ಲೇಖನವನ್ನು ಖ್ಯಾತ ನಿರ್ದೇಶಕ ಪಿ. ಶೇಷಾದ್ರಿಯವರು ಬರೆದಿದ್ದಾರೆ. ಇದರ ಒಂದೊಂದು ಸಾಲೂ ಪಠನಾರ್ಹ. ಆ ಲೇಖನದ ಕೊನೆಯ ಮಾತುಗಳು ಹೀಗಿವೆ:

"ಲಿಯನಾರ್ಡೋ ಡವಿಂಚಿಯ 'ಮೊನಾಲಿಸಾ' ಚಿತ್ರಪಟ ಹುಟ್ಟಿ ಎಷ್ಟು ವರ್ಷವಾಯಿತು! ಅದಕ್ಕೆ ಮುಂದೊಂದು ದಿನ ಸಾವಿರಬಹುದು ಎಂದು ಹೇಗೆ ಊಹಿಸಬಹುದು? ಪ್ರಳಯವಾಗಿ ಎಲ್ಲವೂ ನಾಶವಾದರೆ ಆಗ ಬೇರೆ ಮಾತು. ಹೀಗೆಯೇ ಎಷ್ಟೋ ಕಲಾಕೃತಿಗಳು, ಗ್ರಂಥಗಳು, ಕಥೆಗಳು, ಚಲನಚಿತ್ರಗಳು ಸಹೃದಯನ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸುತ್ತವೆ. ಒಂದಲ್ಲ ಒಂದು ಕಾರಣಕ್ಕೆ ಆಗಾಗ ನಾವಿದ್ದೇವೆ ಎಂದು ಸದ್ದು ಮಾಡುತ್ತಿರುತ್ತವೆ. ಹೀಗೇ ಭೈರಪ್ಪನವರ ಕೃತಿಗಳೂ ಕೂಡ ಚಾಲ್ತಿಯಲ್ಲಿರುತ್ತವೆ ಎಂದೇ ನನ್ನ ನಂಬಿಕೆ" (ಪು. 422).

ಇದು ಅವರೊಬ್ಬರ ನಂಬಿಕೆಯಲ್ಲ, ಎಲ್ಲ ಸಾಹಿತ್ಯಾಭಿಮಾನಿಗಳ ನಂಬಿಕೆ.

ಡಾ. ಸುಪ್ರಿಯಾ ಸಹಸ್ರಬುದ್ಧೆಯವರು ಭೈರಪ್ಪನವರನ್ನು 'ದೈತ್ಯಪ್ರತಿಭೆ' ಎಂದು ಕರೆದು ಹೀಗೆಂದಿದ್ದಾರೆ–

"ನನ್ನ ತಿಳಿವಿನ ಮಟ್ಟಿಗೆ, ಭೈರಪ್ಪನವರ ಹಾಗೆ ಅದ್ಭುತವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿ ಉನ್ನತವಾದ ಸ್ಥಾನವನ್ನು ದಶಕಗಳ ಕಾಲ ಉಳಿಸಿಕೊಂಡಿರುವ ಭಾರತೀಯ ಲೇಖಕರು ವಿರಳ. ಅವರ ಬರಹಗಳ ಹರವು, ಪ್ರಮಾಣ ನಿಸ್ಸಂದೇಹವಾಗಿ ಅವರನ್ನು ಪ್ರಪಂಚದ ಶ್ರೇಷ್ಠ ಬರಹಗಾರರೊಂದಿಗೆ ನಿಲ್ಲಿಸುತ್ತದೆ. ನೊಬೆಲ್ ಪ್ರಶಸ್ತಿ ಪಡೆಯುವ ಅರ್ಹತೆ ಅವರಿಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಭೈರಪ್ಪನವರ ಎಲ್ಲಾ ಕಾದಂಬರಿಗಳು ಒಳ್ಳೆಯ ಅನುವಾದಕರಿಂದ ಇಂಗ್ಲಿಷ್ ಭಾಷೆಗೆ ಅನುವಾದಗೊಳ್ಳುವಂತಾದರೆ, ಅವರಿಗೆ ತಕ್ಕದಾದ ಜಾಗತಿಕ ಓದುಗ ವೃಂದವೇ ಪ್ರಾಪ್ತಿಯಾಗುತ್ತದೆ." (ಪು. 447).

ಒಟ್ಟಿನಲ್ಲಿ ಹೇಳಬೇಕೆಂದರೆ ಡಾ. ವಿಜಯಾ ಹರನ್ ಸಾರ್ಥಕವೂ, ಸ್ತುತ್ಯವೂ ಆದ ಕಾರ್ಯವನ್ನು ಮಾಡಿದ್ದಾರೆ. ಹೇಗೆ ಭೈರಪ್ಪನವರ ಕೃತಿಗಳನ್ನು ಬೇರೆ ಯಾರೂ ಬರೆಯಲು ಸಾಧ್ಯವಿಲ್ಲವೋ ಹಾಗೆ ಡಾ. ವಿಜಯಾಹರನ್ ಮಾಡಿರುವ ಸಂಪಾದನ ಕಾರ್ಯವನ್ನು ಬೇರೆ ಯಾರೂ ಮಾಡಲು ಅಶಕ್ಯ ಎಂದು ಹೇಳಬಹುದು. ಭೈರಪ್ಪನವರ ಎಲ್ಲಾ ಓದುಗರು, ಎಲ್ಲಾ ಅಭಿಮಾನಿಗಳು ಓದಬೇಕಾದ ಪುಸ್ತಕ 'ವಿಶ್ವ ಸಾಹಿತಿ ಭೈರಪ್ಪ'. ಇದು ನಮ್ಮ ಶ್ರೇಷ್ಠ ಸಾಹಿತಿಯ ಬಗೆಗೆ ಸಮಗ್ರ ಮಾಹಿತಿಯನ್ನು ಅನೇಕ ಒಳನೋಟಗಳನ್ನೂ ಅಪೂರ್ವ ಅಭಿಪ್ರಾಯಗಳನ್ನೂ ತೆರೆದಿಡುವ ಗ್ರಂಥ. ಡಾ. ವಿಜಯಾಹರನ್ ಅವರಿಗೆ ನನ್ನ ಪ್ರಾಮಾಣಿಕ ಅಭಿನಂದನೆ.

# ಕುಡಿಯುವ ನೀರು, ಜಾನುವಾರು ಮೇವು ಪೂರೈಕೆಗೆ ಡಿಸಿ ಸೂಚನೆ

ಮೈಸೂರು,ಜೂ.22– ಮುಂಗಾರು ಮಳೆ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರು ಪೂರೈಕೆ, ಜಾನುವಾರುಗಳ ಮೇವು, ಸ್ಮಶಾನ ಹಾಗೂ ಇನ್ನಿತರ ಉದ್ದೇಶಕ್ಕೆ ಜಮೀನಿನ ಲಭ್ಯತೆ ಕುರಿತು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ತಿಳಿಸಿದರು.

ತಮ್ಮ ಕಚೇರಿಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರು ಪೂರೈಕೆ ಹಾಗೂ ಮೇವು ಪೂರೈಕೆ ಸಂಬಂಧ ತಾಲೂಕು ಮಟ್ಟದಲ್ಲಿ ಪ್ರತಿ ಶನಿವಾರ ಟಾಸ್ಕ್‌ಫೋರ್ಸ್ ಸಮಿತಿ ಸಭೆಯನ್ನು ನಡೆಸಬೇಕು. ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳ ಕುರಿತು ತಹಸೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡಿರಬೇಕು. ಮಳೆಯಿಂದ ಮನೆಗಳ ಹಾನಿ ಕುರಿತು ಪರಿಹಾರ ಪಾವತಿ ಸಂಬಂಧ ಗ್ರಾಮ ಆಡಳಿತಾಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇಂಜಿನಿಯರ್ ಜಂಟಿಯಾಗಿ ಪರಿಶೀಲಿಸಿ ಛಾಯಾಚಿತ್ರದೊಂದಿಗೆ ವರದಿ ನೀಡಬೇಕು ಎಂದು ಸೂಚಿಸಿದರು.

ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಬೋರ್ವೆಲ್‌ಗಳ ದುರಸ್ತಿ, ರೀ–ಡ್ರಿಲ್ಲಿಂಗ್, ಕಲುಷಿತ ನೀರು ಪೂರೈಕೆಯಾಗದಂತೆ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಕಟ್ಟೆ ನಿರ್ಮಾಣ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿದರು. ಬದಲಿ ಮೋಟಾರ್ ವ್ಯವಸ್ಥೆ, ಹೊಸ ಬೋರ್ವೆಲ್ ವಿಫಲವಾದಲ್ಲಿ ಭೂವಿಜ್ಞಾನಿಗಳಿಂದ ತಪಾಸಣೆ ನಡೆಸಿ ಹೊಸ



ಬೋರ್ವೆಲ್ ಕೊರೆಯಲು ಕ್ರಮವಹಿಸಬೇಕು. ಶಾಲೆ, ಅಂಗನವಾಡಿ, ಹಾಸ್ಟೆಲ್‌ಗಳಲ್ಲಿ ಸಮರ್ಪಕ ಕುಡಿಯುವ ನೀರು ಲಭ್ಯತೆ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಖಾಸಗಿ ಬೋರ್ವೆಲ್‌ಗಳನ್ನು ಬಾಡಿಗೆಗೆ ಪಡೆಯುವ ಸಂಬಂಧ ಅವುಗಳ ಲಭ್ಯತೆ ಬಗ್ಗೆ ಕಾರ್ಯನಿರ್ವಹಣಾಧಿಕಾರಿ ಹಾಗೂ ಪಿಡಿಓಗಳು ಸಂಪೂರ್ಣ ಮಾಹಿತಿಯನ್ನು ಪಡೆಯಬೇಕು ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ನಿರಂತರವಾಗಿ ಪರಿಶೀಲಿಸಬೇಕು ಹಾಗೂ ನೀರಿನ ಮೂಲಗಳ ಬಗ್ಗೆ ಅವರಲ್ಲಿ ಮಾಹಿತಿ ಇರಬೇಕು. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿದ್ದಲ್ಲಿ ಅದರ ಬಗ್ಗೆ ಪ್ರತಿದಿನ ಡಿಸಿ ಕಚೇರಿಗೆ ಮಾಹಿತಿ ನೀಡಬೇಕು. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆ ಸಂಬಂಧ ಮುಂದಿನ ಒಂದು ತಿಂಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಸಲ್ಲಿಸುವಂತೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ತಿಳಿಸಿದರು.

ಜಾನುವಾರುಗಳಿಗೆ ಮೇವು ಲಭ್ಯತೆ ಬಗ್ಗೆ ಪಶುಸಂಗೋಪನಾ ಇಲಾಖೆ ಉಪನಿರ್ದೇಶಕರಿಂದ ಮಾಹಿತಿ ಪಡೆದು ಜಾನುವಾರುಗಳಿಗೆ ಮೇವಿನ ಸಮಸ್ಯೆಯಾಗದಂತೆ ಕ್ರಮ ವಹಿಸಲು ಸೂಚಿಸಿದರು.

ಸ್ಮಶಾನ ಹಾಗೂ ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಕಾಯ್ದಿರಿಸಿ ಹಸ್ತಾಂತರಿಸುವ ಕುರಿತು ಗ್ರಾಮ ಆಡಳಿತಾಧಿಕಾರಿಗಳು, ಪಿಡಿಓಗಳು ಕಂದಾಯ ಗ್ರಾಮಗಳಲ್ಲಿನ ಸ್ಮಶಾನಗಳಿಗೆ ಜಂಟಿಯಾಗಿ ತೆರಳಿ ಸ್ಮಶಾನದ ಜಮೀನಿನ ಛಾಯಾಚಿತ್ರ ತೆಗೆದು ಸದರಿ ಛಾಯಾಚಿತ್ರವನ್ನು ತಹಸೀಲ್ದಾರ್ ಹಾಗೂ ಇಓಗೆ ಕಳುಹಿಸಬೇಕು. ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಗಳು ಸದರಿ ಛಾಯಾಚಿತ್ರಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ವರದಿ ಸಲ್ಲಿಸಬೇಕು ಎಂದರು.

ಸ್ಮಶಾನ ಹಸ್ತಾಂತರಿಸಲು ಬಾಕಿ ಇರುವ ಪ್ರಕರಣಗಳಲ್ಲಿ ನಕ್ಷೆ, ಮಂಜೂರಾತಿ ಆದೇಶದ ಪ್ರತಿಯೊಂದಿಗೆ ಪಿಡಿಓಗಳಿಗೆ ಹಸ್ತಾಂತರಿಸಲು ಕ್ರಮವಹಿಸಬೇಕು. ಕೆಲವು ಪ್ರಕರಣಗಳಲ್ಲಿ ತಾಂತ್ರಿಕ ಕಾರಣಗಳಿಗಾಗಿ ಪಹಣಿಯಲ್ಲಿ ಸ್ಮಶಾನಕ್ಕೆ ಕಾಯ್ದಿರಿಸಿರುವ ಬಗ್ಗೆ ದಾಖಲಾಗಿಲ್ಲದಿದ್ದರೂ ನಕ್ಷೆ, ಮಂಜೂರಾತಿ ಆದೇಶದ ಮೇರೆಗೆ ಹಸ್ತಾಂತರಿಸಲು ಕ್ರಮ ವಹಿಸಬೇಕು ಎಂದು ಮಾಹಿತಿ ನೀಡಿದರು. ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಸಾರ್ವಜನಿಕ ಗ್ರಂಥಾಲಯ ನಿರ್ಮಾಣಕ್ಕೆ ಜಮೀನು ಗುರುತಿಸಿಕೊಡುವ ಸಂಬಂಧ ಸೂಕ್ತ ಸರ್ಕಾರಿ ಜಮೀನು ಗುರುತಿಸಲು ಹಾಗೂ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡಲು ಅಗತ್ಯವಿರುವ ಗ್ರಾಮಗಳಿಗೆ ಸೂಕ್ತ ಸರ್ಕಾರಿ ಜಮೀನು ಗುರುತಿಸಲು ರಾಜಸ್ವ ನಿರೀಕ್ಷಕರಿಗೆ ಸೂಚಿಸಿದರು. ಸಭೆಯಲ್ಲಿ ಎಡಿಸಿ ಕವಿತಾ ರಾಜರಾಮ್, ಹುಣಸೂರು ಉಪವಿಭಾಗಾಧಿಕಾರಿ ರುಚಿ ಜಿಂದಾಲ್, ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ
ಶುಕ್ರವಾರ 23 ಜೂನ್ 2023

## ವಿಶೇಷ ಒಲಿಂಪಿಕ್ಸ್‌ನಲ್ಲಿ ಭಾರತ ಅತ್ಯುತ್ತಮ ಪ್ರದರ್ಶನ

**ಬರ್ಲಿನ್:** ಸ್ಪೆಷಲ್ ಒಲಿಂಪಿಕ್ಸ್ ವರ್ಲ್ಡ್ ಸಮ್ಮರ್ ಗೇಮ್ಸ್‌ನಲ್ಲಿ ಭಾರತೀಯ ಪಡೆ ತನ್ನ ಪದಕದ ಭರಾಟೆಯನ್ನು ಮುಂದುವರೆಸಿದ್ದು, ಬರ್ಲಿನ್‌ನಲ್ಲಿ 50 ಪದಕಗಳ ಗಡಿ ದಾಟಿತು.

ಟೂರ್ನಿಯ ಕೊನೆ ದಿನ ಸ್ಪೆಷಲ್ ಒಲಿಂಪಿಕ್ಸ್‌ನಲ್ಲಿ ಭಾರತ 15 ಚಿನ್ನ, 27 ಬೆಳ್ಳಿ, 13 ಕಂಚು ಸೇರಿದಂತೆ ಅಥ್ಲೆಟಿಕ್ಸ್, ಸೈಕ್ಲಿಂಗ್, ಪವರ್‌ಲಿಫ್ಟಿಂಗ್, ರೋಲರ್ ಸ್ಕೇಟಿಂಗ್ ಮತ್ತು ಈಜು. ಐದು ವಿವಿಧ ಕ್ರೀಡೆಗಳಲ್ಲಿ 55 ಪದಕಗಳನ್ನು ಗಳಿಸಿದೆ. ಈಜಿನಲ್ಲಿ ಐದು ಪದಕಗಳ (3 ಚಿನ್ನ, 1 ಬೆಳ್ಳಿ ಮತ್ತು 1 ಕಂಚು) ಮತ್ತು ಸೈಕ್ಲಿಂಗ್ ಕೋರ್ಸ್‌ನಲ್ಲಿ ಆರು ಪದಕ (3 ಚಿನ್ನ, 2 ಬೆಳ್ಳಿ, ಒಂದು ಕಂಚು) ದಾಖಲಿಸಿದೆ.

ಸೈಕ್ಲಿಂಗ್ ತಂಡದ ಪ್ರತಿಯೊಬ್ಬ ಸದಸ್ಯರೂ 5 ಕಿಮೀ ರೋಡ್ ರೇಸ್‌ನಲ್ಲಿ ಕಂಚಿನ ಪದಕದೊಂದಿಗೆ ನೀಲ್ ಯಾದವ್ ಮೊದಲಿಗರಾಗಿ ಪದಕ ಗೆದ್ದರು. ನಂತರ ಯಾದವ್, ಶಿವಾನಿ ಮತ್ತು ಇಂದು ಪ್ರಕಾಶ್ 1 ಕಿಮೀ ಟೈಮ್ ಟ್ರಯಲ್‌ನಲ್ಲಿ ಚಿನ್ನ ಗೆದ್ದರೆ, ಕಲ್ಪನಾ ಜೆನಾ ಮತ್ತು ಜಯಶೀಲ ಅಬ್ರ್ಯುತರಾಜ್ ಬೆಳ್ಳಿ ಪಡೆದರು.

**ಈಜು:** ಫ್ರೀಸ್ಟೈಲ್ ಈಜುಪಟುಗಳಾದ ದೀಕ್ಷಾ ಜಿತೇಂದ್ರ ಶಿರಗಾಂವ್ಕರ್, ಪೂಜಾ ಗಿರಿಧರರಾವ್ ಗಾಯಕವಾಡ ಮತ್ತು ಪ್ರಸಿದ್ಧಿ ಕಾಂಬಳೆ ಅವರು ಚಿನ್ನ ಗೆದ್ದುಕೊಂಡಿದ್ದರಿಂದ ಭಾರತದ ಪದಕಗಳು ದ್ವಿಗುಣಗೊಂಡವು. ಮಾಧವ್ ಮದನ್ ಚಿನ್ನದ ಪದಕ ಗಳಿಸುವ ಮೂಲಕ ತಮ್ಮ ಖಾತೆಗೆ ಮತ್ತೊಂದು ಪದಕವನ್ನು ಸೇರಿಸಿದರು. ಮುರಳಿ ಮತ್ತು ಸಿದ್ಧಾಂಥ್. ಕುಮಾರ್ 25 ಮೀಟರ್ ಫ್ರೀಸ್ಟೈಲ್‌ನಲ್ಲಿ ಕಂಚು ಗೆದ್ದರು.

ಇನ್ನುಳಿದಂತೆ ಸೋನೆಪತ್‌ನ ಸಾಕೇತ್ ಕುಂದು ಮಿನಿ ಜಾವೆಲಿನ್ ಬಿ ಲೆವೆಲ್‌ನಲ್ಲಿ ಬೆಳ್ಳಿ ಗೆದ್ದರು. ಲಿಟಲ್ ಏಂಜಲ್ಸ್ ಶಾಲೆಯ ವಿದ್ಯಾರ್ಥಿಯು ಬಹು-ಕ್ರೀಡಾ ಅಥ್ಲೀಟ್ ಆಗಿದ್ದು, ಅವರು ಟೇಬಲ್ ಟೆನ್ನಿಸ್, ಫಿಗರ್ ಸ್ಕೇಟಿಂಗ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸಿದ್ದಾರೆ.

# ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಚಾರ ರಥಕ್ಕೆ ಚಾಲನೆ

ಮೈಸೂರು, ಜೂ.22(ಎಂಟಿವೈ)- ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಪ್ರಚಾರ ರಥಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರಚಾರ ವಾಹನದಲ್ಲಿದ್ದ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕೆಂಪೇಗೌಡರು ನಾಡಿಗೆ ನೀಡಿದ ಕೊಡುಗೆ ಅಪಾರ. ಜೂ.27ರಂದು ಆಚರಿಸುವ ಕೆಂಪೇಗೌಡರ ಜನ್ಮ ದಿನದ ಕಾರ್ಯಕ್ರಮಕ್ಕೆ ಹೆಚ್ಚಿನ ಜನರನ್ನು ಆಹ್ವಾನಿಸುವ ನಿಟ್ಟಿನಲ್ಲಿ ಈ ರಥಯಾತ್ರೆ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಿ, ಕಾರ್ಯಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ,



ನಾಡು ಕಟ್ಟುವಲ್ಲಿ ಕೆಂಪೇಗೌಡರ ಪಾತ್ರ ಹೆಚ್ಚಾಗಿದೆ ರಾಜ್ಯದ ರಾಜಧಾನಿ ಬೆಂಗಳೂರು ನಿರ್ಮಾತೃ ಆಗಿರುವ ಕೆಂಪೇಗೌಡರು ತಮ್ಮ ಆಡಳಿತಾವಧಿಯಲ್ಲಿ ಸರ್ವ ಜನಾಂಗದ ಹಿತ ಕಾಯುವ ಕೆಲಸ ಮಾಡಿದ್ದಾರೆ. ಸುಸಜ್ಜಿತ ನಗರ ನಿರ್ಮಾಣ ಮಾಡಿ, ಕೃಷಿಗೂ ಹೆಚ್ಚಿನ ಆದ್ಯತೆ ನೀಡಿದ್ದಾರೆ. ನೂರಾರು ಕೆರೆ ನಿರ್ಮಿಸಿ ಜನ-ಜಾನುವಾರುಗಳಿಗೂ ನೆರವಾಗಿದ್ದಾರೆ. ಇಂತಹ ಮಹಾನ್ ನಾಯಕರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಜೂ.27ರಂದು ನಡೆಯುವ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರಬೇಕು. ಕೆಂಪೇಗೌಡರ ಸಾಧನೆ, ಕೊಡುಗೆ ಬಗ್ಗೆ ಯುವ ಪೀಳಿಗೆಗೆ ತಿಳಿಸುವ ಕೆಲಸ ಆಗಬೇಕು ಎಂದರು.

**ರಥ ಸಂಚಾರ:** ಕೋಟೆ ಆಂಜನೇಯ ಸ್ವಾಮಿ ದೇವಾಲಯದಿಂದ ಹೊರಟ ಪ್ರಚಾರ ರಥ ಮೈಸೂರಿನ ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ, ಸಾಹುಕಾರ್ ಹುಂಡಿ, ಮರಟಿಕ್ಯಾತನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಪ್ರಯಾಣಿಸಿ ಕೆಂಪೇಗೌಡರ ದಿನಾಚರಣೆಯ ಸಂದೇಶ ಸಾರಿತು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸಿ.ಜಿ. ಗಂಗಾಧರ್‌ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಮೋದಾಮಣಿ, ಕವೀಶ್‌ಗೌಡ, ಮೈಸೂರು-ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಮುಖಂಡರಾದ ಎಂ.ಮೋಹನ್‌ಕುಮಾರ್‌ಗೌಡ, ಬೋರೇಗೌಡ, ಭಾಸ್ಕರ್, ಒಂಟಿಕೊಪ್ಪಲು ಗುರುರಾಜ್, ಲೋಕೇಶ್‌ಗೌಡ, ಸುಶೀಲಾ ನಂಜಪ್ಪ, ಲಕ್ಷ್ಮಿದೇವಿ, ನೇಹ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸಾಕುನಾಯಿ ಕೊಂದ ಚಿರತೆಗೆ ವಿಷ ಪ್ರಾಶನ: ಕಾವಲುಗಾರ ಬಂಧನ



ವಿಷ ಪ್ರಾಶನದಿಂದ ಮೃತಪಟ್ಟಿರುವ ಚಿರತೆ



ವಿಷ ಹಾಕಿ ಚಿರತೆ ಕೊಂದಿರುವ ಆರೋಪಿಯೊಂದಿಗೆ ಅರಣ್ಯಾಧಿಕಾರಿಗಳ ತಂಡ

ಗುಂಡ್ಲುಪೇಟೆ,ಜೂ.22(ಎಂಟಿವೈ)- ನಾಯಿ ಕಳೇಬರಕ್ಕೆ ವಿಷ ಪ್ರಾಶನ ಮಾಡಿ ಚಿರತೆಯೊಂದನ್ನು ಕೊಂದಿದ್ದ ವ್ಯಕ್ತಿಯೊಬ್ಬನನ್ನು ಅರಣ್ಯ ಸಿಬ್ಬಂದಿಗಳ ತಂಡ ಬಂಧಿಸಿದೆ.

ಚಾಮರಾಜನಗರದ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಫರ್‌ಜೋನ್ ವ್ಯಾಪ್ತಿಗೆ ಸೇರುವ ಕೂತನೂರು ಎಲ್ಲೆ ಗ್ರಾಮದ ಜಿ.ಆರ್.ಗೋವಿಂದರಾಜು ಎಂಬುವರ ಜಮೀನಿನಲ್ಲಿ ಚಿರತೆಯೊಂದರ ಮೃತದೇಹ ಪತ್ತೆಯಾಗಿತ್ತು. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಪರಿಶೀಲಿಸಿದ ಅರಣ್ಯಾಧಿಕಾರಿಗಳಿಗೆ ವಿಷ ಪ್ರಾಶನದಿಂದಲೇ ಚಿರತೆ ಸಾವನ್ನಪ್ಪಿರುವುದು ಮೇಲ್ನೋಟಕ್ಕೆ ಧೃಡಪಟ್ಟಿತ್ತು. ಇದರಿಂದ ಸುತ್ತಮುತ್ತಲಿನ ಜಮೀನಿನಲ್ಲಿ ಕೆಲಸ ಮಾಡುವ ಹಾಗೂ ಕಾವಲುಗಾರರನ್ನು ವಿಚಾರಣೆಗೊಳಪಡಿಸಿ ವಿಷ ಪ್ರಾಶನ ಮಾಡಿರುವ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

**ಪಕ್ಕದ ಹೊಲದ ಕಾವಲುಗಾರನ ಕೈಚಳಕ:** ವಿಷ ಪ್ರಾಶನದಿಂದ ಮೃತಪಟ್ಟ ಚಿರತೆ ನಾಲ್ಕು ವರ್ಷದ್ದಾಗಿದ್ದು, ಹೆಣ್ಣು ಚಿರತೆಯಾಗಿದೆ. ಚಿರತೆ ಮೃತ ದೇಹ ಪತ್ತೆಯಾದ ಹೊಲದ ಪಕ್ಕದ ಹೊಲದಲ್ಲಿ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದ ಮಲ್ಲಯ್ಯನಪುರ ಗ್ರಾಮದ ರಮೇಶ್ ಎಂಬಾತನೇ ನಾಯಿ ಮೃತದೇಹಕ್ಕೆ ವಿಷ ಹಾಕಿರುವುದು ಬಹಿರಂಗವಾಗಿದೆ. ಸೋಮಶೇಖರ್ ಎಂಬುವರಿಗೆ ಸೇರಿದ ಜಮೀನಿನ ಕಾವಲುಗಾರನಾಗಿದ್ದ ರಮೇಶ್ ಸಾಕಿದ್ದ ನಾಯಿಯೊಂದನ್ನು ಮೂರು ದಿನದ ಹಿಂದೆ ಚಿರತೆ ಬಲಿ ಪಡೆದಿತ್ತು ಹೊಲದ ಸಮೀಪದಲ್ಲೇ ಅರೆಬರೆ ತಿಂದು ಬಿಟ್ಟಿದ್ದ ನಾಯಿ ಕಳೇಬರಕ್ಕೆ ರಮೇಶ್ ವಿಷ ಸಿಂಪಡಿಸಿದ್ದಾನೆ. ಕಳೆದ ರಾತ್ರಿ ನಾಯಿ ಕಳೇಬರ ತಿಂದ ಚಿರತೆ ಪಕ್ಕದ ಹೊಲದಲ್ಲಿ ಒದ್ದಾಡಿ ಪ್ರಾಣ ಬಿಟ್ಟಿದೆ.

'ನಾನು ಸಾಕಿದ್ದ ನಾಯಿಯನ್ನು ಚಿರತೆ ಕೊಂದು ಅರ್ಧ ತಿಂದಿತ್ತು. ಮತ್ತೆ ಆ ಚಿರತೆ ನಾಯಿ ಮಾಂಸ ತಿನ್ನಲು ಬರುತ್ತದೆ ಎಂದು ತಿಳಿದು ವಿಷ ಹಾಕಿದ್ದೆ' ಎಂದು ಆರೋಪಿ ರಮೇಶ್ ತಪ್ಪೊಪ್ಪಿಕೊಂಡಿರುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪಶುವೈದ್ಯ ಡಾ.ಮಿರ್ಜಾ ವಾಸಿಂ ಚಿರತೆ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಅದನ್ನು ಸುಡಲಾಯಿತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಸಿಎಫ್ ಜಿ.ರವೀಂದ್ರ, ಆರ್‌ಎಫ್‌ಓ ಎನ್.ಪಿ.ನವೀನ್‌ಕುಮಾರ್, ಸರ್ಕಾರೇತರ ಸಂಸ್ಥೆ ಸದಸ್ಯ ರಘುರಾಂ, ಡಿಆರ್‌ಎಫ್‌ಓಗಳಾದ ಸಿ.ಎನ್ ಮುದ್ದುರಾಜು, ಜಿ.ಪಿ.ಭರತ್, ಕಿರಣ್‌ಕುಮಾರ್ ಬಿ.ಎಸ್, ಕಾರ್ತಿಕ್ ಸುರಪುರ, ಶ್ರೀಪಾಲ್, ಗಸ್ತು ವನಪಾಲಕರಾದ ಪರಸಪ್ಪ ಹೆಚ್. ಮಾದರ್, ಆರ್. ಸಿದ್ದರಾಜು, ಅರಣ್ಯ ವೀಕ್ಷಕರಾದ ಸಂತೋಷ್‌ಕುಮಾರ್, ವಾಹನ ಚಾಲಕರಾದ ಅಬ್ದುಲ್ ಹನೀಫ್, ಆರ್.ರಾಘವೇಂದ್ರ, ಮಹೇಂದ್ರ ಪಾಲ್ಗೊಂಡಿದ್ದರು.

### ಮತ್ತೊಂದು ಚಿರತೆ ಸಾವು

ಬಂಡೀಪುರ ಅರಣ್ಯ ವ್ಯಾಪ್ತಿಯ ಹಂಗಳ ಸಮೀಪದ ಕಲ್ಲಿಗೌಡನಹಳ್ಳಿ ಜಮೀನಿನ ಬಳಿ ಚಿರತೆ ಮೃತದೇಹ ಪತ್ತೆಯಾಗಿದೆ. ಜಮೀನಿನಲ್ಲಿ ಕೆಲಸ ಮಾಡುತ್ತಿರುವವರು ಇಲಾಖೆಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ ಅಧಿಕಾರಿಗಳು, ಎರಡೂವರೆ ವರ್ಷದ ಹೆಣ್ಣು ಚಿರತೆ ಮೃತಪಟ್ಟಿದೆ ಎಂದು ಖಚಿತಪಡಿಸಿದ್ದಾರೆ.

ಬಲಿಷ್ಠ ಪ್ರಾಣಿಯೊಂದಿಗೆ ಕಾದಾಟ ನಡೆಸಿದ ಪರಿಣಾಮ ಇಂಟರ್‌ನಲ್ ಇನ್ಫೆಕ್ಷನ್‌ನಿಂದ ಮೃತಪಟ್ಟಿರಬಹುದು ಎಂದು ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ. ಚಿರತೆಯ ಅಂಗಾಂಗಳ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಬಂದ ನಂತರ ನಿಖರ ಮಾಹಿತಿ ದೊರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹುಲಿ ಯೋಜನೆ ಕ್ಷೇತ್ರ ನಿರ್ದೇಶಕರು, ಅರಣ್ಯ ಸಂರಕ್ಷಣಾಧಿಕಾರಿ ಡಾ. ರಮೇಶ್ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಎಂ.ಎನ್. ಪಶು ವೈದ್ಯಾಧಿಕಾರಿ ಡಾ. ಮಿರ್ಜಾ ವಾಸಿಂ, ವಲಯ ಅರಣ್ಯಾಧಿಕಾರಿ ಮಂಜುನಾಥ ಹೆಚ್.ಎಂ, ಉಪ ವಲಯ ಅರಣ್ಯಾಧಿಕಾರಿ ಜ್ಞಾನಶೇಖರ್, ಅರಣ್ಯ ರಕ್ಷಣ ಭರಕತ್ ಅಲಿ ಹಾಗೂ ಇತರೆ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಇದ್ದರು.

ಹಾಸನ ಜಿಲ್ಲೆಯ ವಿವಿಧೆಡೆ ಸಾಮೂಹಿಕ ದಾಳಿ

# 27 ವಿದ್ಯುತ್ ಕಳವು ಪ್ರಕರಣ ಪತ್ತೆ

## ಹಾಸನ ಸೆಸ್ಕ್ ಜಾಗೃತ ದಳ ಠಾಣೆಯಲ್ಲಿ ಪ್ರಕರಣ ದಾಖಲು



ಮೈಸೂರು, ಜೂ.22(ಆರ್‌ಕೆ)-ಪೊಲೀಸರ ಸಹಕಾರದೊಂದಿಗೆ ಸೆಸ್ಕ್ ವಿಚಕ್ಷಕ ದಳದ ತಂಡಗಳು ಸಾಮೂಹಿಕ ದಾಳಿ ನಡೆಸಿ ಹಾಸನ, ಹೊಳೇನರಸೀಪುರ ಮತ್ತು ಅರಕಲಗೂಡು ತಾಲೂಕುಗಳಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ವಂಚಿಸುತ್ತಿದ್ದ 27 ಪ್ರಕರಣಗಳನ್ನು ಪತ್ತೆ ಮಾಡಿದ್ದಾರೆ.

ಮೀಟರ್ ಅಳವಡಿಸದೇ ವಿದ್ಯುತ್ ಕಂಬದಿಂದ ನೇರವಾಗಿ ಸಂಪರ್ಕ ಪಡೆದು ಅನಧಿಕೃತವಾಗಿ ವಿದ್ಯುತ್ ಬಳಸುತ್ತಿದ್ದುದು ದಾಳಿ ವೇಳೆ ಪತ್ತೆಯಾಯಿತು. ಕಳೆದ ಹಲವು ವರ್ಷಗಳಿಂದ ಗೃಹ ಬಳಕೆ, ಉದ್ದಿಮೆ, ಸಣ್ಣ ಕಾರ್ಖಾನೆ, ವಾಣಿಜ್ಯ ಉದ್ದೇಶಕ್ಕೂ ವಿದ್ಯುತ್ ಕಳವು ಮಾಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಕೋಟ್ಯಾಂತರ ರೂ. ವಂಚನೆ ಮಡುತ್ತಿದ್ದ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ.

ನಿರಂತರವಾಗಿ ವಿದ್ಯುತ್ ಕಳವು ಮಾಡುತ್ತಿದ್ದ 27 ಪ್ರಕರಣಗಳನ್ನು ದಾಖಲಿಸಿರುವ ಸೆಸ್ಕ್ ವಿಚಕ್ಷಕ ದಳದ ಪೊಲೀಸರು ಸೆಸ್ಕ್ ಅಧಿಕಾರಿಗಳ ನೆರವಿನಿಂದ ತನಿಖೆ ನಡೆಸುತ್ತಿದ್ದಾರೆ.

ಮೈಸೂರು ವಿಭಾಗದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ ಮತ್ತು ಸೆಸ್ಕ್ ವಿಚಕ್ಷಕ ದಳದ ಎಸ್ಪಿ ರಶ್ಮಿ ಪರಟಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಧರ್ಮೇಂದ್ರ ಕುಮಾರ್, ಸೆಸ್ಕ್ ಎಕ್ಸಿಕ್ಯೂಟಿವ್ ಇಂಜಿನಿಯರ್ ತಬಸಂ ಬಾನು ನೇತೃತ್ವದಲ್ಲಿ ನಡೆದ ಸಾಮೂಹಿಕ ದಾಳಿಯಲ್ಲಿ ಮೈಸೂರಿನ ಇನ್ಸ್‌ಪೆಕ್ಟರ್ ಶಿವಮಾದಯ್ಯ, ಜೂನಿಯರ್ ಇಂಜಿನಿಯರ್ ಕೌಸರ್, ಚಾಮರಾಜನಗರದ ಇನ್ಸ್‌ಪೆಕ್ಟರ್ ಅಜರುದ್ದೀನ್, ಸಿಬ್ಬಂದಿಗಳಾದ ಯೋಗೇಶ್, ಹೇಮಂತ್, ಎಇಇ ರಹೀಂ, ಲೈನ್‌ಮೆನ್ ಪ್ರಕಾಶ್, ಮಡಿಕೇರಿಯ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ಎಇಇ ತಿಲಕ್, ಮಂಡ್ಯದ ಸಬ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ, ಜೂನಿಯರ್ ಇಂಜಿನಿಯರ್ ಲತಾ ಸೇರಿದಂತೆ ಹಲವರು ದಾಳಿಯಲ್ಲಿ ಪಾಲ್ಗೊಂಡಿದ್ದರು.

ಸೋಮನಹಳ್ಳಿ, ಬಿದರಕ್ಕೆ ಕೊಪ್ಪಲು ಸೇರಿದಂತೆ ಹಾಸನ, ಹೊಳೇನರಸೀಪುರ ಮತ್ತು ಅರಕಲಗೂಡು ತಾಲೂಕುಗಳ 8 ಕಡೆಗಳಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಏಕ ಕಾಲದಲ್ಲಿ ದಾಳಿ ನಡೆಸಿ 27 ವಿದ್ಯುತ್ ಕಳವು ಪ್ರಕರಣವನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

## 3,500 ಪೊಲೀಸರ ನೇಮಕಕ್ಕೆ ಇನ್ನೊಂದು ವಾರದಲ್ಲಿ ಆದೇಶ: ಗೃಹ ಸಚಿವ ಪರಮೇಶ್ವರ್

**ತುಮಕೂರು:** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಒಟ್ಟು 15 ಸಾವಿರ ಪೊಲೀಸರ ಹುದ್ದೆ ಖಾಲಿ ಇದ್ದು, ಇನ್ನೊಂದು ವಾರದಲ್ಲಿ 3,500 ಪೊಲೀಸರ ನೇಮಕಕ್ಕೆ ಆದೇಶಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಗುರುವಾರ ತಿಳಿಸಿದ್ದಾರೆ. ಇಂದು ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ಈಗಾಗಲೇ ಪೊಲೀಸರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದ್ದೇವೆ ಎಂದು ತಿಳಿಸಿದರು.

ಇನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ತುಮಕೂರಿಗೆ 1 ಸಾವಿರ ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ. ಕೇಂದ್ರದಿಂದ ಶೇ.50, ರಾಜ್ಯ ಸರ್ಕಾರದಿಂದ ಶೇ.50ರಷ್ಟು ಅನುದಾನ ನೀಡಿದ್ದು, ಈಗಾಗಲೇ ಕೇಂದ್ರ ಸರ್ಕಾರ ಶೇ.45ರಷ್ಟು ಹಣ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ 443 ಕೋಟಿ ರೂ. ಅನುದಾನ ಮಂಜೂರು ಮಾಡಿದೆ ಎಂದರು. ಸ್ಮಾರ್ಟ್ ಸಿಟಿ ಯೋಜನೆಯಡಿ 170 ಕಾಮಗಾರಿ ನಡೆಯುತ್ತಿವೆ. ನವೆಂಬರ್ ನೊಳಗೆ ಎಲ್ಲಾ ಕಾಮಗಾರಿ ಮುಗಿಸಲು ಸೂಚನೆ ನೀಡಿದ್ದೇನೆ ಎಂದು ಪರಮೇಶ್ವರ್ ತಿಳಿಸಿದ್ದಾರೆ

## ಅರ್ಜಿ ಆಹ್ವಾನ

ಮೈಸೂರು, ಜೂ.22- 2023-24ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರೋತ್ಸಾಹಧನಕ್ಕಾಗಿ (www.sw.karnic.in) ವೆಬ್‌ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆ ದಿನಾಂಕವಾಗಿರುತ್ತದೆ ಹೆಚ್ಚಿನ ಮಾಹಿತಿಗಾಗಿ www. sw.kar.nic.in, ಅಥವಾ ದೂರವಾಣಿ ಸಂ: 08223-273128, 08223-273563ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಯನ್ಸ್ ಕ್ಲಬ್ ಆಫ್ ಅಂಬಾಸಿಡರ್ ತಂಡದ ಪದಗ್ರಹಣ

ಮೈಸೂರು, ಜೂ. 22- ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರ್ ಸಂಸ್ಥೆಯ 2023-24ನೇ ಸಾಲಿನ ನಿವೃತ್ತ ಐಎಫ್‌ಎಸ್ ಅಧಿಕಾರಿ ಎಚ್.ಸಿ. ಕಾಂತರಾಜು ತಂಡದ ಪದಗ್ರಹಣ ಹಾಗೂ ನೂತನ ಸದಸ್ಯರ ಸೇರ್ಪಡೆ ಕಾರ್ಯಕ್ರಮವು ಹೋಟೆಲ್ ಕಲ್ಯಾಣಿಯಲ್ಲಿ ಜೂ.23ರಂದು ಸಂಜೆ 7ಕ್ಕೆ ನಡೆಯಲಿದೆ.

ಬಿ. ರಾಜಶೇಖರಯ್ಯ ಜಿಲ್ಲಾ ಗವರ್ನರ್ 317ಎಫ್ ಮತ್ತು ನೂತನ ಸದಸ್ಯರ ಸೇರ್ಪಡೆ ಕಾರ್ಯಕ್ರಮದ ಪ್ರಮಾಣ ಬೋಧನಾ ಅಧಿಕಾರಿಯಾಗಿ ಎಸ್.ಮತಿದೇವ್‌ಕುಮಾರ್ ಪಾಲ್ಗೊಳ್ಳುವರು. ಮುಖ್ಯ ಅತಿಥಿಯಾಗಿ ಕ್ಯಾಬಿನೆಟ್ ಅಡ್ವೈಸರ್ ಕೆ. ದೇವೇಗೌಡ, ವಿಶೇಷ ಆಹ್ವಾನಿತರಾಗಿ 1ನೇ ಜಿಲ್ಲಾ ಗವರ್ನರ್ ಎನ್. ಸುಬ್ರಹ್ಮಣ್ಯ, 2ನೇ ಜಿಲ್ಲಾ ಗವರ್ನರ್ ಕೆ.ಎಲ್. ರಾಜಶೇಖರ ಪಾಲ್ಗೊಳ್ಳಲಿದ್ದು, ಎಂ. ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಪ್ರಾಂತಿ ಅಧ್ಯಕ್ಷ ಹೇಮಂತಕುಮಾರ್ ಬನ್ಸಾಲಿ, ವಲಯ ಅಧ್ಯಕ್ಷ ಕೆ.ಆರ್. ಭಾಸ್ಕರ್ ನಂದಾ, ಡಾ.ಆರ್.ಡಿ. ಕುಮಾರ್, ಟಿ.ಎಚ್. ವೆಂಕಟೇಶ್, ಕೆ.ಟಿ. ವಿಷ್ಣು ಪಾಲ್ಗೊಳ್ಳುವರು.

# ಅತಿಯಾದ ವಿಶ್ವಾಸ, ತಂತ್ರಗಾರಿಕೆಯಲ್ಲಿ ಎಡವಿದ್ದೇ ಬಿಜೆಪಿ ಸೋಲಿಗೆ ಕಾರಣ

- ಮೈಸೂರಲ್ಲಿ ಮಾಜಿ ಸಿಎಂ ಸದಾನಂದಗೌಡ ಸೋಲಿನ ಆತ್ಮವಿಮರ್ಶೆ
- ಕಳೆದುಕೊಂಡಲ್ಲಿಯೇ ಪಡೆದುಕೊಳ್ಳುವ ಛಲ ತೊಡುವಂತೆ ಕರೆ



ಮೈಸೂರು, ಜೂ.22(ಎಸ್‌ಬಿಡಿ)- ಅತಿಯಾದ ವಿಶ್ವಾಸ ಹಾಗೂ ಚುನಾವಣೆ ತಂತ್ರ ರೂಪಿಸುವಲ್ಲಿ ಎಡವಿದ್ದು ಬಿಜೆಪಿ ಸೋಲಿಗೆ ಕಾರಣವಾಯಿತು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ತಿಳಿಸಿದರು.


ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಗುರುವಾರ ನಡೆದ ಬಿಜೆಪಿ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮದು ದೊಡ್ಡ ಮನೆ. ಸಣ್ಣಪುಟ್ಟ ವ್ಯತ್ಯಾಸಗಳು ಇದ್ದೇ ಇರುತ್ತವೆ ಡಬಲ್ ಎಂಜಿನ್ ಸರ್ಕಾರ, ಜನ ನಮಗೇ ಮತ ನೀಡುತ್ತಾರೆ ಎಂಬ ಅತಿಯಾದ ವಿಶ್ವಾಸವಿತ್ತು. ಜೊತೆಗೆ ಚುನಾವಣಾ ತಂತ್ರಗಾರಿಕೆಯಲ್ಲಿ ವಿಫಲವಾಗಿದ್ದೇವೆ. ಕಳೆದ ವಿಧಾನಸಭಾ ಚುನಾವಣೆ ಫಲಿತಾಂಶದಿಂದ ಬುದ್ಧಿ ಕಲಿತಿದ್ದೇವೆ. ಆಡಳಿತದಲ್ಲಿದ್ದಾಗ ಕಾರ್ಯಕರ್ತರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ ಎಂಬ ನೋವಿದೆ. ಮುಂದೆ ಎಲ್ಲವನ್ನೂ ಸರಿ ಮಾಡಿಕೊಳ್ಳೋಣ. ಕಳೆದುಕೊಂಡಿರುವ ಸ್ಥಳದಲ್ಲೇ ಪಡೆದುಕೊಳ್ಳೋಣ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆದ್ದು ತೋರಿಸೋಣ ಎಂದು ಕಾರ್ಯಕರ್ತರಲ್ಲಿ ವಿಶ್ವಾಸ ತುಂಬಿದರು.

ಅಟಲ್ ಬಿಹಾರಿ ವಾಜಪೇಯಿ ಅವರು ಚುನಾವಣೆಯಲ್ಲಿ ಸೋತಾಗ ಶಿವಮೊಗ್ಗದ ಕಾರ್ಯಕರ್ತರೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಆಗ ವಾಜಪೇಯಿಯವರು ಆತನ ಕುಟುಂಬವನ್ನು ಭೇಟಿ ಮಾಡಿ, ಸಾಂತ್ವನ ಹೇಳಿದರು. ಆ ಮೂಲಕ ಕಾರ್ಯಕರ್ತರಲ್ಲಿ ಆತ್ಮಸ್ಥೈರ್ಯ ತುಂಬಿದರು. 1980ರ ದಶಕದಲ್ಲಿ ಬಿಜೆಪಿಗೆ ಯಡಿಯೂರಪ್ಪನವರು ಒಬ್ಬರೇ ಶಾಸಕರಾಗಿದ್ದರು. ಅವರು ಸಾವಿರಾರು ಕಾರ್ಯಕರ್ತರನ್ನು ಕಟ್ಟಿಕೊಂಡು ಪಕ್ಷ ಕಟ್ಟಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದಿತು. ಒಂದು ಕಾಲದಲ್ಲಿ ಇಬ್ಬರು ಮಾತ್ರ ಸಂಸದರಿದ್ದರು. ಈಗ ಕೇಂದ್ರದಲ್ಲಿ ಆಡಳಿತ ನಡೆಸುತ್ತಿಲ್ಲವೇ. ಗೋಡೆಗಳಿಗೆ ಪಕ್ಷದ ಪೋಸ್ಟರ್ ಅಂಟಿಸುತ್ತಿದ್ದ ನಾನು ಮುಖ್ಯಮಂತ್ರಿ ಹಾಗೂ ಕೇಂದ್ರ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಹಾಗಾಗಿ ಸೋಲಿನಿಂದ ಹತಾಶರಾಗುವುದು ಬೇಡ. ಈ ಸೋಲು ನಿಜವಾದ ಸೋಲಲ್ಲ. ಕೆಲವೇ ದಿನಗಳಲ್ಲಿ ಈ ನೋವು ದೂರಾಗುತ್ತದೆ. ಲೋಕಸಭೆ ಚುನಾವಣೆಯಲ್ಲಿ ಗೆಲುವು ಪಡೆಯೋಣ ಎಂದು ಹೇಳಿದರು.

ಸಭೆಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಗೌಡ, ವಿಭಾಗೀಯ ಪ್ರಭಾರಿ ಮೈ.ವಿ.ರವಿಶಂಕರ್, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ಮಾಜಿ ಎಂಎಲ್ಸಿಗಳಾದ ತೋಂಟದಾರ್ಯ, ಮಲ್ಲಿಕಾರ್ಜುನಪ್ಪ, ಮಾಜಿ ಸಚಿವ ಸಿ.ಎಚ್. ವಿಜಯಶಂಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರತಾಪ್ ದೇವನೂರು, ಮುಖಂಡರಾದ ಸಂದೇಶ್ ಸ್ವಾಮಿ, ಮಿರ್ಲೆ ಶ್ರೀನಿವಾಸಗೌಡ, ಯಶಸ್ವಿನಿ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ದರ ಏರಿಕೆ ಬರೆ ನಡುವೆ ವ್ಯತ್ಯಯದ ಕಿರಿಕಿರಿ!

# ಫೀಡರ್‌ಗಳ ನಿರ್ವಹಣೆ ಹಿನ್ನೆಲೆ ; ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ



**ಕಾರ್ಯಾಚರಣೆ ನಡೆಯುವ ದಿನಗಳಂದು ಸಂಬಂಧಿಸಿದ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ನಿರ್ವಹಣಾ ಜಾಲವನ್ನು ಸುಸ್ಥಿತಿಯಲ್ಲಿಡಲು 11 ಕೆವಿ ಫೀಡರ್‌ಗಳ ನಿರ್ವಹಣೆ ಅತ್ಯವಶ್ಯಕವಾಗಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್‌ನ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.**

ಮೈಸೂರು,ಜೂ.22(ಪಿಎಂ)- ಪ್ರಸಕ್ತ ಸಾಲಿನ ಮುಂಗಾರು ಮಳೆ ಅವಧಿಯಲ್ಲಿ ಗ್ರಾಹಕರಿಗೆ ಗುಣಮಟ್ಟದ ನಿರಂತರ ವಿದ್ಯುತ್ ಪೂರೈಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಸೆಸ್ಕ್) ವರುಣ ಉಪವಿಭಾಗದಲ್ಲಿ ಜೂ.23ರಿಂದ ಜು.5ರವರೆಗೆ ವಿವಿಧ ಶಾಖೆಗಳ ವ್ಯಾಪ್ತಿಯಲ್ಲಿ ನಿಗದಿತ ದಿನಾಂಕಗಳಂದು ಫೀಡರ್‌ಗಳ ನಿರ್ವಹಣೆ ಕಾರ್ಯಾಚರಣೆ ನಡೆಯಲಿದೆ.

**ಯಾವ ದಿನ ಎಲ್ಲಿ ವ್ಯತ್ಯಯ:** ಜೂ.23ರಂದು ವರುಣ ಶಾಖೆ ವ್ಯಾಪ್ತಿಯ ಜೆಎಸ್‌ಎಸ್ ಬಸಾವಣೆ, ನಾಡನಹಳ್ಳಿ, ವಸಂತನಗರ, ಕಪಿಲಾನಗರ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡನಗರ, ಪೊಲೀಸ್ ಬಡಾವಣೆ 3ನೇ ಹಂತ, ಯಾಂದಳ್ಳಿ ಹಾಗೂ ಸುತ್ತಮುತ್ತಲಿನ ಬಡಾವಣೆ, ಮೇಗಳಾಪುರ ಶಾಖೆ ವ್ಯಾಪ್ತಿಯ ಮೇಗಳಾಪುರ, ದುದ್ದಗೆರೆ, ಮಹಾದೇವಿ ಕಾಲೋನಿ, ಲಕ್ಷ್ಮೀಪುರ ಹಾಗೂ ಸುತ್ತಮುತ್ತಲಿನ ಪ್ರದೇಶ, ದೇವಲಾಪುರ ಶಾಖೆ ವ್ಯಾಪ್ತಿಯ ಕಿರಾಳು, ಮರಿಗೌಡನಹುಂಡಿ, ಚಿಕ್ಕಗೌಡನಹುಂಡಿ, ದೇವಲಾಪುರ ಕುಂಬ್ರಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶ, ಮೆಲ್ಲಹಳ್ಳಿ ಶಾಖೆ ವ್ಯಾಪ್ತಿಯ ಗಳಿಗರಹುಂಡಿ, ಭುಗತಗಳ್ಳಿ ಗೇಟ್ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅಂತೆಯೇ ಜೂ.26ರಂದು ವರುಣ ಶಾಖೆ ವ್ಯಾಪ್ತಿಯ ವಾಜಮಂಗಲ, ವರುಣ, ದಂಡೀಕೆರೆ ಹಾಗೂ ಸುತ್ತಮುತ್ತಲ ಪ್ರದೇಶ, ಮೇಗಳಾಪುರ ಶಾಖೆ ವ್ಯಾಪ್ತಿಯ ಕಡವೆಕಟ್ಟೆಹುಂಡಿ, ಹೊಸಹಳ್ಳಿ, ಮೇಗಳಾಪುರ ಹಾಗೂ ಸುತ್ತಮುತ್ತಲ ಪ್ರದೇಶ, ದೇವಲಾಪುರ ಶಾಖೆ ವ್ಯಾಪ್ತಿಯ ರಾಯನಹುಂಡಿ, ಹೊಸಹಳ್ಳಿ, ಮೇಗಳಾಪುರ ಹಾಗೂ ಸುತ್ತಮುತ್ತಲ ಪ್ರದೇಶ, ದೇವಲಾಪುರ ಶಾಖೆ ವ್ಯಾಪ್ತಿಯ ರಾಯನಹುಂಡಿ, ಆಯರಹಳ್ಳಿ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕುಂಬ್ರಳ್ಳಿ ಮಠ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೆಲ್ಲಹಳ್ಳಿ ಶಾಖೆ ವ್ಯಾಪ್ತಿಯ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳ್ಳಿಕೆರೆಹುಂಡಿ, ಶಿವಪುರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಜೂ.27ರಂದು ವರುಣ ಶಾಖೆ ವ್ಯಾಪ್ತಿಯ ವರಕೋಡು, ಕೆಜಿ ಹುಂಡಿ, ಬಡಗಲಹುಂಡಿ, ಮೂಡಲಹುಂಡಿ, ಪಿಲ್ಲಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೇಗಳಾಪುರ/ವರುಣ ಶಾಖೆ ವ್ಯಾಪ್ತಿಯ ವರಕೊಡು ಪೇಪರ್ ಫ್ಯಾಕ್ಟರಿ, ರಾಜಶ್ರೀ ಇಂಡಸ್ಟ್ರಿಯಲ್, ಸಿಮೆಂಟ್ ಫ್ಯಾಕ್ಟರಿ, ನಾರಾಯಣ ಕೋಳಿ ಫಾರಂ, ವರಕೊಡು ಗೇಟ್ ಹಾಗೂ ಸುತ್ತಮುತ್ತಲ ಪ್ರದೇಶ, ದೇವಲಾಪುರ ಶಾಖೆ ವ್ಯಾಪ್ತಿಯ ಆಯರಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೆಲ್ಲಹಳ್ಳಿ ಶಾಖೆ ವ್ಯಾಪ್ತಿಯ ಸಾತಗಳ್ಳಿ, ಹಂಚ್ಯ ಹಾಗೂ ಸುತ್ತಮುತ್ತಲಿನ ಪ್ರದೇಶ, ಜೂ.28ರಂದು ವರುಣ ಶಾಖೆ ವ್ಯಾಪ್ತಿಯ ವರಕೋಡು, ಕೆಜಿ ಹುಂಡಿ, ಬಡಗಲ ಹುಂಡಿ, ಮೂಡಲಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೇಗಳಾಪುರ ಶಾಖೆ ವ್ಯಾಪ್ತಿಯ ಪಿಜಿ ಹುಂಡಿ, ಚಟ್ನಹಳ್ಳಿ, ಚಟ್ನಹಳ್ಳಿ ಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶ, ದೇವಲಾಪುರ ಶಾಖೆ ವ್ಯಾಪ್ತಿಯ ಲಲಿತಾದ್ರಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೆಲ್ಲಹಳ್ಳಿ ಶಾಖೆ ವ್ಯಾಪ್ತಿಯ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳ್ಳಿಕೆರೆಹುಂಡಿ, ಶಿವಪುರದಲ್ಲಿ ವ್ಯತ್ಯಯ ಉಂಟಾಗಲಿದೆ.

ಜೂ.30ರಂದು ವರುಣ/ದೇವಲಾಪುರ ಶಾಖೆ ವ್ಯಾಪ್ತಿಯ ಜಂತಗಳ್ಳಿ, ಸಜ್ಜೆಹುಂಡಿ, ವರುಣ, ವಾಜಮಂಗಲ, ದಂಡೀಕೆರೆ, ಪಿಲ್ಲಹಳ್ಳಿ, ಎಂಬಿ ಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೇಗಳಾಪುರ ಶಾಖೆ ವ್ಯಾಪ್ತಿಯ ಸಿದ್ದರಾಮನಹುಂಡಿ, ಹೊಸಹಳ್ಳಿ, ಕುಪ್ಪೇಗಾಲ, ರಂಗನಾಥಪುರ, ಮುದ್ದೇಗೌಡನಹುಂಡಿ, ದೇವೇಗೌಡನಹುಂಡಿ, ಶ್ರೀನಿವಾಸಪುರ, ಯಡಕೊಳ ಹಾಗೂ ಸುತ್ತಮುತ್ತಲಿನ ಪ್ರದೇಶ, ದೇವಲಾಪುರ/ವರುಣ ಶಾಖೆ ವ್ಯಾಪ್ತಿಯ ಜಂತಗಳ್ಳಿ, ಸಜ್ಜೆಹುಂಡಿ, ಭುಗತಹಳ್ಳಿ, ಚೋರನಹಳ್ಳಿ, ಚಿಕ್ಕಹಳ್ಳಿ, ಎಂಬಿ ಹಳ್ಳಿ, ಯಾಂದಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೆಲ್ಲಹಳ್ಳಿ ಶಾಖೆ ವ್ಯಾಪ್ತಿಯ ರಮ್ಮನಹಳ್ಳಿ, ಆಶ್ರಯ ಬಡಾವಣೆ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಜು.1ರಂದು ದೇವಲಾಪುರ ಶಾಖೆ ವ್ಯಾಪ್ತಿಯ ರಾಯನಹುಂಡಿ, ಸೋಮೇಶ್ವರಪುರ, ಕುಂಬ್ರಳ್ಳಿ ಮಠ, ಬಸಹಳ್ಳಿಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶ, ಮೇಗಳಾಪುರ ಶಾಖೆ ವ್ಯಾಪ್ತಿಯ ಹಡಜನ, ಮಾರಶೆಟ್ಟಿಹಳ್ಳಿ, ಟಿಎಂ ಹುಂಡಿ, ಸರ್ಕಾರಿ ಉತ್ತನಹಳ್ಳಿ ಹಾಗೂ ಸುತ್ತಮುತ್ತಲಿನ ಬಡಾವಣೆ, ಜು.3ರಂದು ದೇವಲಾಪುರ ಶಾಖೆ ವ್ಯಾಪ್ತಿಯ ಎಂಸಿ ಹುಂಡಿ, ಮಾಧವಗೆರೆ, ಇನಾಂ ಉತ್ತನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಮೇಗಳಾಪುರ ಶಾಖೆ ವ್ಯಾಪ್ತಿಯ ಕೆಂಪಯ್ಯನಹುಂಡಿ, ಮೊಘಲ್ ದರ್ಬಾರ್ ಫಾರಂ, ಗುರುಬಾರ್‌ಪುರ ಹಾಗೂ ಸುತ್ತಮುತ್ತಲಿನ ಪ್ರದೇಶ, ಜು.4ರಂದು ಮೇಗಳಾಪುರ ಶಾಖೆ ವ್ಯಾಪ್ತಿಯ ದುದ್ದಗೆರೆ, ಮೇಗಳಾಪುರ, ಕೀಳನಪುರ, ಮಾಧವಗೆರೆ, ಪಿಜಿ ಹುಂಡಿ, ಚಟ್ನಹಳ್ಳಿ, ಲಕ್ಷ್ಮೀಪುರ ಹಾಗೂ ಸುತ್ತಮುತ್ತಲಿನ ಪ್ರದೇಶ ಹಾಗೂ ಜು.5ರಂದು ಮೇಗಳಾಪುರ ಶಾಖೆ ವ್ಯಾಪ್ತಿಯ ಕುಪ್ಪೆಗಾಲ, ಇನಾಂ ಉತ್ತನಹಳ್ಳಿ, ಎಂಸಿ ಹುಂಡಿ, ಯಡಕೊಳ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

## ಮುತ್ತತ್ತಿಯಲ್ಲಿ ಮಹಿಳೆ ಆತ್ಮಹತ್ಯೆ

ಹಲಗೂರು, ಜೂ.22– ಇಲ್ಲಿಗೆ ಸಮೀಪದ ಮುತ್ತತ್ತಿಯ ಕಾವೇರಿ ನದಿಗೆ ಹಾರಿ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ನಡೆದಿದೆ.

ರಾಮನಗರ ಜಿಲ್ಲೆ ಕನಕಪುರ ತಾಲೂಕಿನ ಕುರುಬರಹಳ್ಳಿ ನಿವಾಸಿ ನಿರ್ಮಲ(45) ಆತ್ಮಹತ್ಯೆ ಮಾಡಿಕೊಂಡವರು. ಈಕೆ ಅವಿವಾಹಿತೆಯಾಗಿದ್ದು, ತಂದೆ– ತಾಯಿ ಕಳೆದುಕೊಂಡು ಒಬ್ಬಂಟಿಯಾಗಿ ಜೀವನ ನಡೆಸುತ್ತಿದ್ದು, ಬೆಂಗಳೂರಿನ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡಿಕೊಂಡು ಅಲ್ಲೇ ವಾಸವಿದ್ದರು ಎನ್ನಲಾಗಿದೆ. ನಿನ್ನೆ ಗ್ರಾಮಕ್ಕೆ ಬಂದಿದ್ದ ಈಕೆ ಜೀವನದಲ್ಲಿ ಜಿಗುಪ್ಸೆಗೊಂಡು ಮುತ್ತತ್ತಿ ಬಳಿಯ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶವವನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದ್ದು, ಹಲಗೂರು ಎಸ್ಐ ಮಹೇಂದ್ರ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯುತ್ ದರ ಹೆಚ್ಚಳ ಖಂಡಿಸಿ ವರ್ತಕರ ಪ್ರತಿಭಟನೆ




ಮಂಡ್ಯ, ಜೂ.22– ವಿದ್ಯುತ್ ದರ ಹೆಚ್ಚಳ ಖಂಡಿಸಿ ವಿದ್ಯುತ್ ನಿಗಮದ ವಿರುದ್ಧ ಗುರುವಾರ ವರ್ತಕರು ನಗರದಲ್ಲಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಮಂಡಳಿ ಅಧ್ಯಕ್ಷ ಕೆ.ಪ್ರಭಾಕರ್, ಉಪಾಧ್ಯಕ್ಷ ಎನ್.ಡಿ. ಶ್ರೀಹರಿಪ್ರಸಾದ್ ನೇತೃತ್ವದಲ್ಲಿ ವರ್ತಕರು, ವ್ಯಾಪಾರಿಗಳು, ವಾಣಿಜ್ಯೋದ್ಯಮಿಗಳು ನಗರದ ಜೈನರ ಬೀದಿಯಲ್ಲಿರುವ ಮಹಾವೀರ ಭವನದಿಂದ ಬೃಹತ್ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿವರೆಗೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಅಧ್ಯಕ್ಷ ಕೆ.ಪ್ರಭಾಕರ್ ಮಾತನಾಡಿ, ಕರ್ನಾಟಕ ವಿದ್ಯುತ್ ನಿಗಮಗಳು ವಾಣಿಜ್ಯ, ಕೈಗಾರಿಕೆಗಳು ಹಾಗೂ ಗೃಹ ವಿದ್ಯುತ್ ದರಗಳನ್ನು ಏಕಾಏಕಿ ಶೇ.30 ರಿಂದ 70ರಷ್ಟು ಹೆಚ್ಚಿಸಿದೆ. ಹೆಚ್ಚಳ ಮಾಡಿರುವ ವಿದ್ಯುತ್ ದರ ಅವೈಜ್ಞಾನಿಕವಾಗಿದೆ. ದರ ಹೆಚ್ಚಳದಿಂದ ಅದರಲ್ಲೂ ಬಹು ಮುಖ್ಯವಾಗಿ ಕೈಗಾರಿಕಾ ವಲಯ, ವಾಣಿಜ್ಯ–ಉದ್ಯಮ ಮತ್ತು ವ್ಯಾಪಾರ ವಹಿವಾಟುಗಳಿಗೆ ಹೆಚ್ಚಿನ ಹೊರೆ ಉಂಟಾಗಿದೆ. ರಾಜಕೀಯ ಲಾಭಗಳಿಗಾಗಿ ವಿದ್ಯುತ್ ದರ ಹೆಚ್ಚಿಸಿ ಜನ ಸಾಮಾನ್ಯರ ಮೇಲೆ ಹೊರೆ ಹಾಕಿರುವುದು ನ್ಯಾಯ ಸಮ್ಮತವಲ್ಲ ಎಂದು ದೂರಿದರು.

ವಿದ್ಯುತ್ ದರ ಹೆಚ್ಚಳದಿಂದ ಮುಂದಿನ ದಿನಗಳಲ್ಲಿ ಕೈಗಾರಿಕೆ ಹಾಗೂ ವ್ಯಾಪಾರಗಳನ್ನು ನಡೆಸಲಾಗದೆ ಮುಚ್ಚುವ ಪರಿಸ್ಥಿತಿ ಉಂಟಾಗಬಹುದು. ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರವೇ ಸಂಪೂರ್ಣ ಹೊಣೆ ಎಂದು ಆರೋಪಿಸಿದರು. ದರ ಹೆಚ್ಚಳದಿಂದ ಕೈಗಾರಿಕೆಗಳು, ವಾಣಿಜ್ಯ, ಉದ್ಯಮ ಮತ್ತು ವ್ಯಾಪಾರಗಳ ಮೇಲಾಗಿರುವ ಹೊರೆ ಇಳಿಸಲು ರಾಜ್ಯ ಸರ್ಕಾರ ಕೂಡಲೇ ದರ ಹೆಚ್ಚಳ ಹಿಂಪಡೆಯಬೇಕು. ಹಿಂದೆ ಇದ್ದ ದರವನ್ನೇ ಮುಂದುವರೆಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಂಡ್ಯ ನಗರದ ಬಹುತೇಕ ವರ್ತಕರು ಹಾಗೂ ವಾಣಿಜ್ಯೋದ್ಯಮಿಗಳು ಭಾಗವಹಿಸಿದ್ದರಿಂದ ನಗರದ ಬೆಂಗಳೂರು– ಮೈಸೂರು ರಸ್ತೆ ಪೇಟೆ ಬೀದಿ, ವಿ.ವಿ.ರಸ್ತೆ, ಆರ್.ಪಿ.ರಸ್ತೆ, ಗುತ್ತಲು ರಸ್ತೆ ನೂರಡಿ ರಸ್ತೆ ಹಾಗೂ ಬನ್ನೂರು ರಸ್ತೆಯ ಬಹುತೇಕ ಅಂಗಡಿ– ಮುಂಗಟ್ಟುಗಳು ಕೆಲ ಗಂಟೆಗಳ ಕಾಲ ಬಂದ್ ಆಗಿದ್ದವು.

ಪ್ರತಿಭಟನೆಯಲ್ಲಿ ವರ್ತಕರಾದ ಕೆ.ಎಂ. ಶಿವಕುಮಾರ್, ಭರತ್ ಕುಮಾರ್, ಭೀಮರಾವ್, ಎಂ.ಎಸ್.ಶಿವಪ್ರಕಾಶ್, ಮದನ್ ಸಿಂಗ್, ಎಂ.ಬಿ.ವೆಂಕಟೇಶ್ ಬಾಬು, ಯು.ಜೆ.ರಾಜೇಂದ್ರ ಪ್ರಸಾದ್, ಎಂ.ಎನ್. ಶಾಂತಿ ಪ್ರಸಾದ್, ಎಂ.ಡಿ.ಸತೀಶ್, ಮೊಹಮದ್ ತನ್ವೀರ್, ಸಿ.ಸೋಮಶೇಖರ್, ಗೋವಿಂದ್ ಬಿ.ಪಟೇಲ್, ಹೆಚ್.ಆರ್.ಅರವಿಂದ್, ಶಿವರಾಮೇಗೌಡ ಇತರರಿದ್ದರು.

### ಸೋಮನಹಳ್ಳಿಯಲ್ಲಿ ಮಾಜಿ ಎಂಎಲ್‌ಸಿ ಎಸ್.ಎಂ.ಶಂಕರ್ ಪುಣ್ಯಸ್ಮರಣೆ

## ಸಹೋದರನ ಸಮಾಧಿಗೆ ಪೂಜೆ ಸಲ್ಲಿಸಿದ ಎಸ್.ಎಂ.ಕೃಷ್ಣ



ಮದ್ದೂರು, ಜೂ.22– ತಾಲೂಕಿನ ಸೋಮನಹಳ್ಳಿಯಲ್ಲಿ ಆಯೋಜಿಸಿದ್ದ ತಮ್ಮ ಸಹೋದರ ಎಸ್.ಎಂ.ಶಂಕರ್ ಅವರ 4ನೇ ಪುಣ್ಯಸ್ಮರಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪಾಲ್ಗೊಂಡಿದ್ದರು.

ಗುರುವಾರ ಬೆಳಗ್ಗೆ ಸೋಮನಹಳ್ಳಿ ಗ್ರಾಮದ ಎಸ್.ಸಿ.ಮಲ್ಲಯ್ಯ ವಿದ್ಯಾಸಂಸ್ಥೆ ಆವರಣಕ್ಕೆ ಆಗಮಿಸಿದ ಎಸ್.ಎಂ.ಕೃಷ್ಣ ಅವರು ಸಹೋದರ, ವಿಧಾನ ಪರಿಷತ್ ಮಾಜಿ ಸದಸ್ಯ ದಿ.ಎಸ್.ಎಂ.ಶಂಕರ್ ಅವರ ಸಮಾಧಿಗೆ ಪೂಜೆ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು. ಈ ವೇಳೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಜಿಪಂ ಮಾಜಿ ಅಧ್ಯಕ್ಷ ಎಸ್.ಗುರುಚರಣ್, ಪುರಸಭೆ ಸದಸ್ಯರು ಸೇರಿದಂತೆ ಇತರೆ ಮುಖಂಡರು ಪಾಲ್ಗೊಂಡಿದ್ದರು.

ಬಳಿಕ ತಾಲೂಕಿನ ಯರಗನಹಳ್ಳಿ ಗ್ರಾಮದ ನಾಗಲಿಂಗೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ಎಸ್.ಎಂ.ಕೃಷ್ಣ ಪೂಜೆ ಸಲ್ಲಿಸಿದರು. ಬಳಿಕ ತಮ್ಮ ನಿವಾಸದಲ್ಲಿ ಊಟ ಮುಗಿಸಿ ಕುಟುಂಬದವರ ಹಾಗೂ ಸ್ಥಳೀಯ ಮುಖಂಡರ ಕುಶಲೋಪರಿ ವಿಚಾರಿಸಿದರು.

**ಅಭಿನಂದನೆ:** ಸೋಮನಹಳ್ಳಿ ಕಾಫಿ ಡೇ ಬಳಿ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಮಾಜಿ ಶಾಸಕ ಡಿ.ಸಿ. ತಮ್ಮಣ್ಣ, ಯುವ ಮುಖಂಡ ಸಂತೋಷ್ ತಮ್ಮಣ್ಣ, ಜಿಪಂ ಮಾಜಿ ಅಧ್ಯಕ್ಷ ಎಸ್. ಗುರುಚರಣ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕ ಪಿ.ಸಂದರ್ಶ, ಪುರಸಭೆ ಮಾಜಿ ಅಧ್ಯಕ್ಷ ಎಂ.ಪಿ.ಅಮರ್‌ಬಾಬು, ಸದಸ್ಯೆ ಪ್ರಿಯಾಂಕ ಅಪ್ಪುಗೌಡ, ಮಾಜಿ ಸದಸ್ಯ ಡಾಬಾ ಮಹೇಶ್ ಅಭಿನಂದಿಸಿದರು.

## ಜೂ.26, ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ

ಮಂಡ್ಯ, ಜೂ.22– ಧ್ವನಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆಯನ್ನು ಜೂ.26ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಲೋಕಸೇವಾ ಆಯೋಗದ ಸದಸ್ಯ ಡಾ.ಪ್ರಭುದೇವ್ ಅಧ್ಯಕ್ಷತೆ ವಹಿಸಲಿದ್ದು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕಿ ಲತಾ ಕುಮಾರಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಪ್ರಾಸ್ತಾವಿಕವಾಗಿ ಭಾಷಣ ಮಾಡಲಿದ್ದಾರೆ. ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕ ಚಂದ್ರಕಾಂತ್ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಉಪ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ವ್ಯಸನಮುಕ್ತ ಮತ್ತು ಪ್ರೇರಕ ಅಭ್ಯರ್ಥಿಗಳಿಗೆ ಸನ್ಮಾನ ಮಾಡಲಿದ್ದಾರೆ. ಡಿಹೆಚ್‌ಓ ಡಾ.ಧನಂಜಯ್ ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಕುರಿತು ತಿಳಿಸಲಿದ್ದಾರೆ. ಮಾನಸಿಕ ಮತ್ತು ನರರೋಗ ತಜ್ಞ ಎಚ್.ಎನ್.ವಿನೋದ್‌ಕುಮಾರ್ ಅಭ್ಯರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಮುಖ್ಯ ಅತಿಥಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಸ್.ರಾಜಮೂರ್ತಿ ಭಾಗವಹಿಸಲಿದ್ದಾರೆ.

# ಜೂ.27, ಸಮರ್ಪಕ ಗ್ಯಾರಂಟಿ ಯೋಜನೆ ಜಾರಿಗಾಗಿ ಪ್ರತಿಭಟನೆ

### ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್.ನಾಗರಾಜು




ಭಾರತೀನಗರ, ಜೂ.22– ಗೃಹ ಜ್ಯೋತಿ ಯೋಜನೆಯಡಿ ರಾಜ್ಯ ಸರ್ಕಾರ 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ಗ್ಯಾರಂಟಿ ನೀಡಿ ಈಗ ಬಳಕೆಗಿಂತ ಶೇ.10ರಷ್ಟು ಮಾತ್ರ ವಿದ್ಯುತ್ ನೀಡುವುದಾಗಿ ಯೋಜನೆ ರೂಪಿಸಿರುವ ಕ್ರಮವನ್ನು ವಿರೋಧಿಸಿ ಜೂ. 27ರಂದು ಗಂಜಿ ಕುಡಿಯುವ ಮೂಲಕ ಪ್ರತಿಭಟನೆ ನಡೆಸಲಾಗುವುದು ಎಂದು ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್. ನಾಗರಾಜು ತಿಳಿಸಿದರು.

ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಕೆ.ಎಂ.ದೊಡ್ಡಿ ಕಚೇರಿ ಆವರಣದಲ್ಲಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ನೀಡಿದ್ದ ಗ್ಯಾರಂಟಿ ಯೋಜನೆಯನ್ವಯ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಬೇಕು. ರೈತರ ಪಂಪ್‌ಸೆಟ್‌ಗಳಿಗೂ ಸಹ ಉಚಿತ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಬಡವರಿಗೆ ವಿತರಿಸುವ ಪಡಿತರ ಅಕ್ಕಿಯಲ್ಲಿ ರಾಜಕೀಯ ಮಾಡುತ್ತಿದ್ದು, ತಕ್ಷಣದಿಂದಲೇ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿ ನೀಡಬೇಕು. ಪಡಿತರ ಪದಾರ್ಥ ಪಡೆಯುವ ಚೀಟಿದಾರರಿಗೆ ಹೆಬ್ಬೆಟ್ಟು ಪಡೆಯುವುದನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು. ಹಾಲು ಉತ್ಪಾದಕರಿಗೆ ಪ್ರತೀ ಲೀಟರ್ ಹಾಲಿಗೆ 5 ರೂ.ಗಳನ್ನು ವರ್ಷದಿಂದಲೂ ನೀಡಿಲ್ಲ. ಈಗಾಗಲೇ ಉತ್ಪಾದಕರು ತೊಂದರೆ ಅನುಭವಿಸುತ್ತಿದ್ದಾರೆ. ಅವರ ನೆರವಿಗೆ ಧಾವಿಸುವ ಮೂಲಕ ಶೀಘ್ರ ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರಿಗೆ 600 ರೂ. ನೀಡಬೇಕು. ಕೇಂದ್ರ ಸರ್ಕಾರ ಈಗಾಗಲೇ 360 ರೂ. ನೀಡುತ್ತಿದೆ. ರಾಜ್ಯ ಸರ್ಕಾರ 420 ರೂ. ಕೊಡಬಹುದು ಎಂದು ಹೇಳಿದ್ದರೂ, ಅನುಷ್ಠಾನಗೊಳಿಸಿಲ್ಲ. ಉಳಿಕೆ 119 ರೂ. ನೀಡಿ ಕೃಷಿ ಕೂಲಿಕಾರರಿಗೆ ಅನುಕೂಲ ಮಾಡಿಕೊಡಬೇಕು ಎಂದು ಪ್ರತಿಭಟನೆಯಲ್ಲಿ ಒತ್ತಾಯಿಸಲಾಗುವುದು ಎಂದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೂ ಮುನ್ನ 5 ಗ್ಯಾರಂಟಿ ಯೋಜನೆಗಳನ್ನು ತರುವುದಾಗಿ ವಾಗ್ದಾನ ಮಾಡಿದ್ದರು. ಮಾತು ಕೊಟ್ಟಂತೆ ಜನರಿಗೆ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಯಾವುದೇ ಷರತ್ತುಗಳನ್ನು ವಿಧಿಸದೆ ಹೇಳಿದಂತೆ ನಡೆದುಕೊಳ್ಳಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್, ಮುಖಂಡರಾದ ಬಿ.ಎಂ.ಶಿವಮಲ್ಲಯ್ಯ, ಹನುಮೇಗೌಡ, ಮಂಚೇಗೌಡ ಸರೋಜಮ್ಮ, ಅರುಣ್‌ಕುಮಾರ್, ಅಮಾಸಯ್ಯ, ಮಧುಕುಮಾರ್ ಇತರರಿದ್ದರು.

## ಅವಧಿ ವಿಸ್ತರಣೆ

ಮಂಡ್ಯ, ಜೂ.22– ಸಕ್ಕರೆ ಹರಾಜು ಕುರಿತು ಜೂ.16 ರಂದು ಪ್ರಕಟಣೆಗೊಂಡ ಮರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯಲ್ಲಿ ಆನ್‌ಲೈನ್ ಬಿಡ್ ಮಾಡಲು ಜೂ.23ರ ಬೆಳಗ್ಗೆ 10.30 ರಿಂದ ಮಧ್ಯಾಹ 3 ಗಂಟೆವರೆಗೆ ಇದ್ದ ಅವಧಿಯನ್ನು ಜೂ.25ರ ಬೆಳಗ್ಗೆ 10 ಗಂಟೆವರೆಗೂ ಮುಂದೂಡಲಾಗಿದೆ. ಹಾಗೂ ಅದೇ ದಿನ 10.30ರ ನಂತರ ಆನ್‌ಲೈನ್ ಬಿಡ್ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿದೆ ಎಂದು ಮೈಷುಗರ್ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ:9844766773 ಮತ್ತು 7353328103 ಅನ್ನು ಸಂಪರ್ಕಿಸಬಹುದು.

## ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜೂ.22– ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.24 ರಂದು ಬೆಳಗ್ಗೆ 9ರಿಂದ ಸಂಜೆ 5 ರವರೆಗೆ ಸುಭಾಷ್ ನಗರ, ಅಶೋಕ ನಗರ, ವಿ.ವಿ.ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರಡಿ ರಸ್ತೆ, ನೆಹರು ನಗರ, ಹೊಸಹಳ್ಳಿ, ದ್ವಾರಕ ನಗರ, ಗಾಂಧಿ ನಗರ, NGO'S layout, ಶ್ರೀರಾಮ ನಗರ, ಕಾವೇರಿ ನಗರ 1& 2ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರ ನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ, ಕ್ಯಾತುಂಗೆರೆ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ.ಹುಲಿಕೆರೆ, ಬಿ.ಹುಲಿಕೆರೆ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

ಮಂಡ್ಯ, ಜೂ.22– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಡ್ಯ ತಾಲೂಕಿನ ಮೆಟ್ರಿಕ್ ನಂತರದ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸ್‌ನ ವಿದ್ಯಾರ್ಥಿಗಳು) ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಜು.15 ರೊಳಗೆ ಆನ್‌ಲೈನ್ ಮೂಲಕ https://shp.karnataka.gov.in ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಬನ್ನಿ... ಚಾಮುಂಡೇಶ್ವರಿ ದರ್ಶನಭಾಗ್ಯ ಪಡೆಯಿರಿ...



ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುದ್ದಿಗೋಷ್ಠಿ ನಡೆಸಿದ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಂದೋಬಸ್ತ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದರು.

ಒಂದನೇ ಪುಟದಿಂದ

ನಾಲ್ಕು ಶುಕ್ರವಾರಗಳು ಹಾಗೂ ವರ್ಧಂತಿ ದಿನ ಚಾಮುಂಡೇಶ್ವರಿ ದರ್ಶನಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸುತ್ತಾರೆ. ಈ ನಿಟ್ಟಿನಲ್ಲಿ ಧಾರ್ಮಿಕ ದತ್ತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದು, ಕೆಲ ಬದಲಾವಣೆಗಳನ್ನೂ ಮಾಡಿಕೊಳ್ಳಲಾಗಿದೆ. ಎಲ್ಲರೂ ಸಹಕಾರ ನೀಡಬೇಕು ಎಂದು ತಿಳಿಸಿದರು.

**ಸ್ವಚ್ಛತೆಗೆ ಆದ್ಯತೆ:** ಸ್ವಚ್ಛತೆ ಹಾಗೂ ಸುರಕ್ಷತೆಗೆ ಆದ್ಯತೆ ನೀಡಿ ಆ ನಿಟ್ಟಿನಲ್ಲಿ ಎಲ್ಲಾ ಕ್ರಮ ವಹಿಸಲಾಗಿದೆ. ಸಾಕಷ್ಟು ಶೌಚಾಲಯ ವ್ಯವಸ್ಥೆ ಮಾಡಲಾಗಿದೆ. ಸ್ವಚ್ಛತೆ ನಿರ್ವಹಣೆಗೆ ಸಿಬ್ಬಂದಿ, ಸ್ಯಾನಿಟರಿ ಸೂಪರ್‌ವೈಸರ್‌ಗಳನ್ನು ನಿಯೋಜಿಸಿದ್ದು ಗ್ರಾಪಂ ವ್ಯಾಪ್ತಿಗೆ ಸೇರಿದ್ದರೂ ಮೈಸೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿಗಳು ಮೇಲುಸ್ತುವಾರಿ ನೋಡಿಕೊಳ್ಳಲಿದ್ದಾರೆ. ಈ ಬಾರಿ ಪ್ಲಾಸ್ಟಿಕ್ ಮುಕ್ತ ಆಷಾಢ ಶುಕ್ರವಾರ ಆಚರಿಸಬೇಕೆಂಬ ಆಶಯ ಹೊಂದಲಾಗಿದೆ. ಅರಣ್ಯ ಪ್ರದೇಶ ಸೇರಿದಂತೆ ಎಲ್ಲೆಂದರಲ್ಲಿ ಕಸ ಹಾಕಿದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಇದಕ್ಕೆ ಹಲವು ಸಂಘ ಸಂಸ್ಥೆಗಳು, ಸ್ವಯಂ ಸೇವಕರು ಕೈಜೋಡಿಸಿದ್ದಾರೆ. ಸ್ವಚ್ಛತೆ ಬಗ್ಗೆ ನಿಗಾ ವಹಿಸಲು ಗ್ರೀನ್ ವಾರಿಯರ್ಸ್ ತಂಡ ಸಜ್ಜಾಗಿದೆ ಎಂದು ತಿಳಿಸಿದರು.

**ಸುರಕ್ಷತೆಗೆ ಕಣ್ಗಾವಲು:** ಸ್ವಚ್ಛತೆ ಜೊತೆಗೆ ಸುರಕ್ಷತೆಗೆ ಹೆಚ್ಚಿನ ನಿಗಾ ವಹಿಸಲಾಗಿದೆ. ಯಾವುದೇ ಅಪರಾಧ ಕೃತ್ಯಗಳು ನಡೆಯದಂತೆ ಸೂಕ್ತ ಭದ್ರತೆ ಮಾಡಿಕೊಳ್ಳಲಾಗಿದೆ. ಬೆಟ್ಟದಲ್ಲಿ ಅತ್ಯಾಧುನಿಕ 46 ಶಾಶ್ವತ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಕಾರ್ಯ ನಡೆದಿದ್ದು, ಇನ್ನೆರಡು ದಿನಗಳಲ್ಲಿ ಮುಗಿಯಬಹುದು. ಇದಲ್ಲದೆ ಎಲ್ಲಾ ಸ್ಥಳಗಳಲ್ಲೂ ತಾತ್ಕಾಲಿಕವಾಗಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪೊಲೀಸರು ತೀವ್ರ ನಿಗಾ ವಹಿಸಲಿದ್ದಾರೆ ಎಂದು ಹೇಳಿದರು.

ಗ್ರಾಮ ಪಂಚಾಯ್ತಿ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಬಹಳಷ್ಟು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹೂವಿನ ಅಲಂಕಾರ ಮತ್ತು ಅನ್ನ ಸಂತರ್ಪಣೆ ಮಾಡುವ ಭಕ್ತರ ಹೆಸರು ಪಟ್ಟಿ ಮಾಡಿ ಅವರಿಗೆ ದಿನಾಂಕವನ್ನು ನಿಗದಿ ಮಾಡಿಕೊಡಲಾಗಿದೆ. ಸಾಮೂಹಿಕವಾಗಿ ದೊಡ್ಡ ಪ್ರಮಾಣದಲ್ಲಿ ಪ್ರಸಾದ ವಿತರಣೆ ಮಾಡುವಂತಹ ಭಕ್ತರು ತುಂಬಾ ಎಚ್ಚರಿಕೆ ವಹಿಸಬೇಕು. ಅಲ್ಲದೆ ನಮ್ಮಿಂದ ಪ್ರಮಾಣೀಕೃತ ಪಡೆಯುವುದು ಕಡ್ಡಾಯ. ಇದಕ್ಕಾಗಿ ಆಹಾರ ಸುರಕ್ಷತಾ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಆಹಾರ ವ್ಯರ್ಥ ಮಾಡದಂತೆ ನೋಡಿಕೊಳ್ಳುವುದಾಗಿ ಹಲವು ಸಂಘ ಸಂಸ್ಥೆಗಳ ಸದಸ್ಯರು ಮುಂದೆ ಬಂದಿದ್ದಾರೆ. ಪ್ರಸಾದ ವಿತರಿಸುವ ಸ್ಥಳಗಳಲ್ಲಿ ಕಂಟೈನರ್‌ಗಳನ್ನೂ ಇಡಲಾಗಿದೆ ಎಂದು ತಿಳಿಸಿದರು.

**ಪಾಸ್ ವ್ಯವಸ್ಥೆ ಇಲ್ಲ:** ಈ ಬಾರಿ ಚಾಮುಂಡಿ ಬೆಟ್ಟಕ್ಕೆ ತೆರಳುವವರಿಗೆ ವಿಶೇಷ ಪಾಸ್ ವ್ಯವಸ್ಥೆ ಮಾಡದಂತೆ ಜಿಲ್ಲಾ ಉಸ್ತುವಾರಿ ಸಚಿವರು ಖಡಕ್ ಸೂಚನೆ ನೀಡಿದ್ದಾರೆ. ಅದರಂತೆ ಈ ಬಾರಿ ಯಾವುದೇ ಪಾಸ್ ವ್ಯವಸ್ಥೆ ಮಾಡಿಲ್ಲ. ಗಣ್ಯರ ವಾಹನಗಳಿಗೆ ಅವಕಾಶ ಮಾಡಿಕೊಡಲು ತಹಶೀಲ್ದಾರ್ ಹಾಗೂ ಎಸ್ಐ ಗ್ರೇಡ್ ಅಧಿಕಾರಿಗಳನ್ನೊಳಗೊಂಡ ಸ್ಕ್ರೀನಿಂಗ್ ತಂಡಗಳನ್ನು ಮಾಡಲಾಗಿದೆ. ಯಾವ ವಾಹನಗಳನ್ನು ಬಿಡಬೇಕೆಂದು ಸ್ಥಳದಲ್ಲೇ ನಿರ್ಧರಿಸಲು ಹಿರಿಯ ಪೊಲೀಸ್ ಅಧಿಕಾರಿಗಳು, ಕಂದಾಯ ಹಾಗೂ ಮುಜರಾಯಿ ಇಲಾಖೆ ಅಧಿಕಾರಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ. ಬೆಟ್ಟ ಪ್ರವೇಶಿಸುವ ಗೇಟ್‌ನಲ್ಲಿರುವ ಸ್ಕ್ರೀನಿಂಗ್ ತಂಡ ನೀಡುವ ಚೀಟಿಯನ್ನು ಬೆಟ್ಟದ ಮೇಲಿರುವ ಮತ್ತೊಂದು ತಂಡಕ್ಕೆ ತೋರಿಸಬೇಕು. ಶಿಷ್ಟಾಚಾರದಡಿ ವಿಶೇಷ ಪ್ರವೇಶಾವಕಾಶ ಕಲ್ಪಿಸಬೇಕಿರುವ ಕಾರಣ ಈ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದರು.

**ಭಕ್ತರಿಗೆ ಪ್ರಸಾದ ವಿತರಿಸಲು ಷರತ್ತು:** ಈ ಹಿಂದೆ ನಾನಾಕಡೆ ಗುಣಮಟ್ಟವಿಲ್ಲದ ಪ್ರಸಾದ ವಿತರಣೆಯಿಂದಾಗಿ ಭಕ್ತಾಧಿಗಳ ಆರೋಗ್ಯದಲ್ಲಿ ಏರುಪೇರಾಗಿದ್ದ ವರದಿಗಳಾಗಿವೆ. ಹಾಗಾಗಿ ಈ ಬಾರಿ ಪ್ರಮಾಣ ಪತ್ರವಿಲ್ಲದೇ ಎಲ್ಲೆಂದರಲ್ಲಿ ಪ್ರಸಾದ ವಿತರಣೆ ಮಾಡುವಂತಿಲ್ಲ. ಪ್ರಸಾದ ಕೌಂಟರ್‌ಗಳಲ್ಲಿ ಆಹಾರ ಗುಣಮಟ್ಟ ಪರಿಶೀಲನಾಧಿಕಾರಿಗಳ ತಂಡ ಇರುತ್ತದೆ. ದೊಡ್ಡ ಮಟ್ಟದಲ್ಲಿ ಪ್ರಸಾದ ವಿತರಣೆ ಮಾಡುವವರು ಅಧಿಕಾರಿಗಳ ಬಳಿ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ತಿಳಿಸಿದರು.

**ಖಾಸಗಿ ವಾಹನಗಳಿಗೆ ನಿರ್ಬಂಧ**

ಗುರು ವಾರ ರಾತ್ರಿ 10 ಗಂಟೆಯಿಂದ ದೇಗುಲಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿ ಸಲಾಗಿದೆ. ಪ್ರವೇಶ ಮತ್ತು ನಿರ್ಗಮನ ಪಾಸ್‌ಗಳನ್ನು ಪಡೆದ ವಿವಿಐಪಿಗಳು, ನಿಯೋಜಿತ ಸರ್ಕಾರಿ ಸಿಬ್ಬಂದಿ ಮತ್ತು ಚಾಮುಂಡಿ ಬೆಟ್ಟದ ನಿವಾಸಿಗಳಿಗೆ ಮಾತ್ರ ಈ ನಿರ್ಬಂಧ ಅನ್ವಯಿಸುವುದಿಲ್ಲ. ಅಲ್ಲದೇ ಅಧಿಕೃತ ಗುರುತಿನ ಚೀಟಿ ಹೊಂದಿರುವ ಪತ್ರಕರ್ತರು, ಮಾಧ್ಯಮದವರಿಗೆ ತಮ್ಮ ವಾಹನಗಳಲ್ಲಿ ಬೆಟ್ಟಕ್ಕೆ ಹೋಗಲು ಅವಕಾಶ ನೀಡಲಾಗಿದ್ದು, ಮಹಿಷಾಸುರ ಪ್ರತಿಮೆ ಬಳಿ ತೆರಳಲು ಮಾತ್ರ ಅವಕಾಶ ನೀಡಲಾಗಿದೆ. ಅಲ್ಲಿಂದ ದೇಗುಲದ ಬಳಿ ಸಂಚರಿಸಲು ನಿರ್ಬಂಧ ಹೇರಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

**ಪ್ಲಾಸ್ಟಿಕ್ ತಡೆಗೆ ಸ್ವಯಂ ಸೇವಕರ ಬಳಕೆ:** ಬೆಟ್ಟದ ಮೇಲೆ ಹಾಗೂ ಪಾದದ ಬಳಿ ಸ್ವಚ್ಛತೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಸ್ವಯಂ ಸೇವಕರನ್ನು ಬಳಸಿ ಕೊಳ್ಳಲಾಗುತ್ತಿದೆ. ಪ್ಲಾಸ್ಟಿಕ್ ಬಿಸಾಡದಂತೆ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

### ಹೂ ಅಲಂಕಾರ ಮಾಡುವವರಿಗೆ ಅನುಮತಿ




5 ವಿಶೇಷ ದಿನಗಳಲ್ಲಿ ಬೆಳಗ್ಗೆ 2 ಗಂಟೆಯಿಂದ ಸಂಜೆ 6 ಗಂಟೆವರೆಗೆ ದೇವರ ಅಲಂಕಾರಕ್ಕೆ ಹೂ ಕೊಂಡೊಯ್ಯಲು, 5 ಜನರಿಗೆ ಮಾತ್ರ ಅವಕಾಶ ನೀಡಲಾಗಿದೆ. ಬೆಟ್ಟದಲ್ಲಿ ಪ್ರಸಾದ ವಿತರಣೆ ಸಿಬ್ಬಂದಿ ಸೇರಿದಂತೆ ಸುಮಾರು 20 ಮಂದಿಗೆ ವಾಹನದಲ್ಲಿ ಬೆಟ್ಟಕ್ಕೆ ತೆರಳಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

## ಭಕ್ತಾದಿಗಳಿಗೆ ಉಚಿತ ಬಸ್ ವ್ಯವಸ್ಥೆ; ದರ್ಶನಕ್ಕೆ ಅವಕಾಶ






ಈ ಬಾರಿಯೂ ಲಲಿತಮಹಲ್ ಪ್ಯಾಲೇಸ್ ಪಕ್ಕದ ಜಾಗ ದಿಂದ ಚಾಮುಂಡಿ ಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಭಕ್ತಾದಿಗಳ ವಾಹನ ನಿಲುಗಡೆಗೂ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಮಳೆ ಬಂದರೆ ಸಮಸ್ಯೆಯಾಗದಂತೆ ವಾಟರ್ ಪ್ರೂಫ್ ಜರ್ಮನ್ ಟೆಂಟ್, ತಾತ್ಕಾಲಿಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಭಕ್ತಾಧಿಗಳು ತಮ್ಮ ವಾಹನಗಳನ್ನು ಇಲ್ಲಿಯೇ ನಿಲ್ಲಿಸಿ, ನಗರ ಸಾರಿಗೆ ಬಸ್‌ನಲ್ಲಿ ಉಚಿತವಾಗಿ ಚಾಮುಂಡಿ ಬೆಟ್ಟಕ್ಕೆ ಹೋಗಿ ಬರಬೇಕು. ಸದ್ಯಕ್ಕೆ 40 ಬಸ್ ಗಳನ್ನು ಸೇವೆಗೆ ನಿಗದಿಪಡಿಸಿದ್ದು, ಭಕ್ತರ ಸಂಖ್ಯೆಗನುಗುಣವಾಗಿ ಅಗತ್ಯದಷ್ಟು ಬಸ್‌ಗಳನ್ನು ಬಳಸಿಕೊಳ್ಳಲು ಯೋಜನೆ ಮಾಡಿಕೊಳ್ಳಲಾಗಿದೆ. ಇನ್ನು ಎಂದಿನಂತೆ ನಗರ ಬಸ್ ನಿಲ್ದಾಣದಿಂದ ಟಿಕೆಟ್ ಪಡೆದು ಬಸ್‌ನಲ್ಲಿ ಪ್ರಯಾಣಿಸ ಬಹುದು. ಅಲ್ಲಿಂದ ಸುಮಾರು 80 ಬಸ್‌ಗಳು ಸಂಚರಿಸ ಲಿದ್ದು, ಅಗತ್ಯವಿದ್ದರೆ ಸಂಖ್ಯೆ ಹೆಚ್ಚಿಸಿಕೊಳ್ಳಲಾಗುವುದು. ಅಲ್ಲದೆ ಮೆಟ್ಟಿಲು ಮಾರ್ಗದ ಮೂಲಕವೂ ಬೆಟ್ಟಕ್ಕೆ ಹೋಗಬಹುದು. ಈ ಮೂರು ರೀತಿಯ ವ್ಯವಸ್ಥೆಯಲ್ಲಿ ಭಕ್ತರು ದೇವರ ದರ್ಶನ ಪಡೆಯಬಹುದು. ಬೆಟ್ಟಕ್ಕೆ ಸಂಪರ್ಕಿಸುವ ಉಳಿದೆಲ್ಲಾ ಮಾರ್ಗಗಳನ್ನೂ ಬಂದ್ ಮಾಡಲಾಗುವುದು ಎಂದು ತಿಳಿಸಿದರು.

**ದರ್ಶನ; ಬಸ್ ಸಮಯ**

ಈ ಐದು ವಿಶೇಷ ದಿನಗಳಲ್ಲಿ ಬೆಳಗ್ಗೆ 5.30ರಿಂದ ರಾತ್ರಿ 12 ಗಂಟೆವರೆಗೂ ಚಾಮುಂಡೇಶ್ವರಿ ದರ್ಶನಕ್ಕೆ ಅವಕಾಶವಿದೆ. ಆದರೆ ಉಚಿತ ಬಸ್ ವ್ಯವಸ್ಥೆ ಬೆಳಗ್ಗೆ 5ರಿಂದ ರಾತ್ರಿ 8 ಗಂಟೆ ವರೆಗೆ ಮಾತ್ರ ಇರುತ್ತದೆ. ರಾತ್ರಿ 8 ಗಂಟೆ ವೇಳೆಗೆ ಸರತಿಯಲ್ಲಿರುವ ಭಕ್ತರಿಗೆ ದರ್ಶನ ಮುಗಿಯುವಷ್ಟರಲ್ಲಿ ರಾತ್ರಿ 12 ಗಂಟೆಯಾಗಬಹುದು. ಈ ನಿಟ್ಟಿನಲ್ಲಿ ರಾತ್ರಿ 8 ಗಂಟೆಗೆ ಬಸ್ ಸೇವೆ ಸ್ಥಗಿತಗೊಳಿಸಿ, ಬೆಟ್ಟದಿಂದ ಮಾತ್ರ ಭಕ್ತರನ್ನು ಕರೆತರಲು ವ್ಯವಸ್ಥೆ ಮಾಡಿ ಕೊಳ್ಳ ಲಾಗಿದೆ. ಮೆಟ್ಟಿಲು ಮಾರ್ಗದಲ್ಲಿ ಬೆಟ್ಟಕ್ಕೆ ಹೋಗುವ ವರಿಗೆ ಮುಂಜಾನೆ 3 ಗಂಟೆಯಿಂದಲೇ ಅವಕಾಶ ಮಾಡಿ ಕೊಡಲಾಗುವುದು. ಧರ್ಮ ದರ್ಶನದ ಜೊತೆಗೆ 50 ರೂ. ಹಾಗೂ 300 ರೂ. ಟಿಕೆಟ್ ಮೂಲಕ ವಿಶೇಷ ದರ್ಶನ ವ್ಯವಸ್ಥೆ ಇರಲಿದೆ. ಯಾವುದೇ ರೀತಿಯಲ್ಲಿ ಗೊಂದಲ ವಾಗದಂತೆ ಕ್ರಮ ವಹಿಸಲಾಗಿದೆ. ದರ್ಶನ ಮುಗಿಸಿದ ಭಕ್ತರು ಅಡ್ಡಿಯಿಲ್ಲದೆ ಬಸ್ ನಿಲುಗಡೆ ಸ್ಥಳಕ್ಕೆ ಬಂದು ವಾಪಸ್ಸಾಗುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.




ಆಷಾಢ ಮಾಸದ ಮೊದಲ ಶುಕ್ರವಾರ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲು ಗುರುವಾರ ರಾತ್ರಿಯಿಂದಲೇ ದೇವಸ್ಥಾನದ ಬಳಿ ನೆರೆದಿರುವ ಭಕ್ತರು.

## ಸಿದ್ಧತೆ ಪರಿಶೀಲಿಸಿದ ಡಿಸಿ ಡಾ.ರಾಜೇಂದ್ರ

ಮೈಸೂರು,ಜೂ.22(ಪಿಎಂ)– ಚಾಮುಂಡಿ ಬೆಟ್ಟದ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ನಾಳೆ (ಜೂ.23) ಮೊದಲ ಆಷಾಢ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ ನಡೆಯುವ ಹಿನ್ನೆಲೆಯಲ್ಲಿ ಗುರುವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಬೆಟ್ಟಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು.

ಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಸಕಲ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ದೇವಾಲಯದ ಆಡಳಿತ ಮಂಡಳಿ ಕಾರ್ಯ ಪ್ರವೃತ್ತರಾಗಿದ್ದು, ಇಂದು ಸಿದ್ಧತೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಭಕ್ತರಿಗೆ ಯಾವುದೇ ಸಮಸ್ಯೆಯಾಗದಂತೆ ಸಮರ್ಪಕ ವ್ಯವಸ್ಥೆಗಳನ್ನು ಮಾಡುವಂತೆ ಜಿಲ್ಲಾಧಿಕಾರಿ ಸಲಹೆ–ಸೂಚನೆಗಳನ್ನು ನೀಡಿದರು.

ಭಕ್ತಾದಿಗಳಿಗೆ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಸರದಿ ಸಾಲಿನಲ್ಲಿ ಹೋಗಲು ಬ್ಯಾರಿಕೇಡ್ ವ್ಯವಸ್ಥೆಯ ಸಿದ್ಧತೆಗಳನ್ನು ಪರಿ ಶೀಲಿಸಿದರು. ಯಾವುದೇ ತೊಂದರೆ ಆಗದಂತೆ ವ್ಯವಸ್ಥೆ ಮಾಡಬೇಕೆಂದು ದೇವಾಲಯದ ಆಡಳಿತ ಮಂಡಳಿ ಅಧಿಕಾರಿ ಮತ್ತು ಸಿಬ್ಬಂದಿಗೆ ಸೂಚಿಸಿದರು. ಅಲ್ಲದೆ, ವರ್ಧಂತಿ ಉತ್ಸವದ ಸಿದ್ಧತೆಗಳನ್ನೂ ಜಿಲ್ಲಾಧಿಕಾರಿಗಳು ವೀಕ್ಷಿಸಿದರು.

ಶಾಂತಿಯುತವಾಗಿ ಚಾಮುಂಡೇಶ್ವರಿ ತಾಯಿ ದರ್ಶನ ಪಡೆಯಬೇಕೆಂದು ಡಿಸಿ ಭಕ್ತರಲ್ಲಿ ಮನವಿ ಮಾಡಿದರು. ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಸೇರಿ ದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ಮೈಸೂರು ಮಿತ್ರ

ಶುಕ್ರವಾರ 23 ಜೂನ್ 2023

# ಪ್ರೀತಿಗೆ ಅಡ್ಡಿಪಡಿಸಿದ ಪ್ರಿಯತಮೆಯ ಅಣ್ಣನ ಹತ್ಯೆ; ಐವರ ಬಂಧನ

ಮೈಸೂರು, ಜೂ.22(ಎಂಕೆ)– ಪ್ರೀತಿಗೆ ಅಡ್ಡಿಯಾಗಿದ್ದಾನೆ ಎಂಬ ಕಾರಣಕ್ಕೆ ಪ್ರಿಯತಮೆಯ ಅಣ್ಣನನ್ನು ಬರ್ಬರವಾಗಿ ಹತ್ಯೆ ಮಾಡಿದ್ದ ಪ್ರಕರಣದಲ್ಲಿ 5 ಮಂದಿ ಆರೋಪಿಗಳನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಹೊರವಲಯದ ವಿಜಯನಗರ 4ನೇ ಹಂತದ ಬಸವನಹಳ್ಳಿ ರಸ್ತೆಯಲ್ಲಿ ಜೂ.15ರಂದು ಬೆಳವಾಡಿ ಗ್ರಾಮದ ಹೇಮಂತ ಅಲಿಯಾಸ್ ಸ್ವಾಮಿ(23) ಎಂಬಾತನನ್ನು ಕುಡುಗೋಲಿನಿಂದ ಕೊಚ್ಚಿ, ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ವಿಜಯನಗರ ಪೊಲೀಸ್ ಠಾಣೆ ಪೊಲೀಸರು ಆರೋಪಿಗಳಾದ ಸಾಗರ್(23), ಮಂಜು(32), ಪ್ರತಾಪ್(24), ಮಹದೇವ್(45), ಸುಶೀಲಾ(42) ಅವರನ್ನು ಜೂ.17ರಂದು ಬಂಧಿಸಿದ್ದಾರೆ.

ಡಿಸಿಪಿ ಎಂ.ಮುತ್ತುರಾಜು ಮಾರ್ಗದರ್ಶನ, ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್.ರವಿಶಂಕರ್, ಪಿಎಸ್ಐಗಳಾದ ವಿಶ್ವನಾಥ್, ಅಶ್ವಿನಿ, ನಾರಾಯಣ, ಸಿಬ್ಬಂದಿಗಳಾದ ಶಂಕರ, ಲೋಕೇಶ್, ಪ್ರಭಾಕರ್, ಸೋಮಾರಾಧ್ಯ, ಶ್ರೀನಿವಾಸಮೂರ್ತಿ, ಅಣ್ಣಪ್ಪ ದೇವಾಡಿಗ, ಕಾಮಣ್ಣ, ಕೆ.ಎನ್.ಮಂಜುನಾಥ್, ಪ್ರದೀಪ್ ಕುಮಾರ್, ಸಂಜಯ್ ಪವಾರ್, ನಂದೀಶ, ತಿಲಕ್ ಕುಮಾರ, ಎಸಿಪಿ ಸ್ಕ್ವಾಡ್‌ನ ಮುರಳೀಧರ, ಉಮೇಶ, ಲಿಖಿತ, ಸುನೀಲ, ರಾಘವೇಂದ್ರ, ಸಿ.ಡಿ.ಆರ್ ವಿಭಾಗದ ಕುಮಾರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಕ್ರೀಡಾ ಇಲಾಖೆಯಲ್ಲಿ ಯೋಗ ಪ್ರದರ್ಶನ



ಮೈಸೂರು, ಜೂ. 22– 9ನೆಯ ಅಂತಾರಾಷ್ಟ್ರೀಯ ಯೋಗ ದಿನವನ್ನು ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆಯಿಂದ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾಮೂಹಿಕ ಯೋಗದ ಸಂಭ್ರಮದ ಮೂಲಕ ಆಚರಿಸಲಾಯಿತು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾಮೂಹಿಕ ಯೋಗದ ನೇತೃತ್ವ ವಹಿಸಿ ಮಾತನಾಡಿದ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುರೇಶ್, ಬಲಿಷ್ಠ ರಾಷ್ಟ್ರ ಆಗುವ ದಿಸೆಯಲ್ಲಿ ಯೋಗ ಅತ್ಯಂತ ಶಕ್ತಿದಾಯಕ ಪ್ರಯೋಗ ಆಗಿದೆ. ಇದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಅಭಿವೃದ್ಧಿ ಹೊಂದಿದ ರಾಷ್ಟ್ರದ ಸಾಲಿನಲ್ಲಿ ದೇಶ ನಿಲ್ಲಲಿದೆ. ಪ್ರಧಾನಿಗಳು ವಿದೇಶದಲ್ಲಿ ಯೋಗಾಭ್ಯಾಸ ನಡೆಸುವ ಮೂಲಕ ಹೊರದೇಶಕ್ಕೂ ಯೋಗದ ಮಹತ್ವ ಸಾರುತ್ತಿದ್ದಾರೆಂದು ಹೇಳಿದರು. ಬೆಳಗ್ಗೆ 6.30ಕ್ಕೆ ಪ್ರಾರಂಭವಾದ ಯೋಗ ಪ್ರದರ್ಶನ 30 ನಿಮಿಷಗಳ ಕಾಲ ನಡೆಯಿತು. ಚಾಮುಂಡಿ ವಿಹಾರ ಕ್ರೀಡಾಂಗಣದ ಕ್ರೀಡಾ ವಿದ್ಯಾರ್ಥಿಗಳು ಆಟಗಾರರು ಭಾಗವಹಿಸಿದ್ದರು. ಪ್ರೊ.ಕಬಡ್ಡಿಯ ಬಿಂದು ಕಿರಣ್, ತರಬೇತುದಾರರಾದ ಬಾಲು, ಸುಂದರೇಶ್, ಗಿರೀಶ್, ರವೀಂದ್ರ, ರಾಮಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಯೋಗಾಲಯ ಯೋಗಾಚಾರ್ಯ ರಂಗನಾಥ, ಮುಖ್ಯೋಪಾಧ್ಯಾಯ ಎಸ್.ರಾಮಪ್ರಸಾದ್ ಮತ್ತು ಶಿಕ್ಷಕ ವೃಂದದವರು ವಿದ್ಯಾರ್ಥಿಗಳ ಜೊತೆ ಯೋಗಾಭ್ಯಾಸ ಮಾಡಿದರು.

## ಶ್ರೀ ಸ್ವಾಮಿ ನಾರಾಯಣ ಗುರುಕುಲದಲ್ಲಿ ಯೋಗ ದಿನಾಚರಣೆ

ಮೈಸೂರು, ಜೂ. 22– ಮೈಸೂರು ನಗರದ ಹೊರವಲಯದಲ್ಲಿರುವ ಶ್ರೀ ಸ್ವಾಮಿ ನಾರಾಯಣ ಗುರುಕುಲ ಅಂತರರಾಷ್ಟ್ರೀಯ ಶಾಲೆಯಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀ ಹರ್ಷ ಜೋಶಿ ಅವರು ಯೋಗ ದಿನಾಚರಣೆಯ ಅಂಗವಾಗಿ ಮಕ್ಕಳಿಗೆ ಯೋಗ ಪ್ರತಿನಿತ್ಯ ಅವಶ್ಯಕ ಎಂಬುದರ ಬಗ್ಗೆ ಅರಿವು ಮೂಡಿಸಿದರು. ಸೂರ್ಯ ನಮಸ್ಕಾರ ಮಾಡುವುದರ ಬಗ್ಗೆ ಹಾಗೂ ಅದರಿಂದ ಆಗುವ ಪ್ರಯೋಜನಗಳನ್ನು ತಿಳಿಸಿದರು.

ಸಂಯೋಜಕ ಸತೀಶ್ ಮತ್ತು ಶಾಲಾ ಸಿಬ್ಬಂದಿ ವರ್ಗದವರ ಸಹಾಯದೊಂದಿಗೆ ಮಕ್ಕಳು ಶಾಲೆಯ ಹೆಸರಿನ ವಿನ್ಯಾಸವನ್ನು ಯೋಗ ಮಾಡುವ ಮೂಲಕ ರಚಿಸಿದರು.

## 302ನೆಯ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಜೂ. 22– ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 302ನೆಯ ಕಾರ್ಯಕ್ರಮವು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ನಡೆಯಲಿದೆ. ಪ್ರೊ. ಮೊರಬದ ಮಲ್ಲಿಕಾರ್ಜುನ ಅವರು ಜೂ.24ರಂದು ಸಂಜೆ 6 ಗಂಟೆಗೆ 'ಮಾತೆಂಬುದು ಜ್ಯೋತಿರ್ಲಿಂಗ' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮಹೇಶಪ್ಪ ವಹಿಸಲಿದ್ದಾರೆ.

ಡಾ.ಬೆಳಕು ವಿ.ಚಂದ್ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಇವರು ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ. ಕಾರ್ಯಕ್ರಮವು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

# ಪ್ರತ್ಯೇಕ ಪ್ರಕರಣಗಳಲ್ಲಿ ಐವರ ಹತ್ಯೆ

**● ಶ್ರೀರಂಗಪಟ್ಟಣ ಬಳಿ ತಂದೆಯಿಂದಲೇ ಮಕ್ಕಳಿಬ್ಬರ ಹತ್ಯೆ ● ಹುಣಸೂರಿನ ಸಾಮಿಲ್‌ನಲ್ಲಿ ಮಲಗಿದ್ದ ವಾಚ್‌ಮನ್, ಬುದ್ಧಿಮಾಂದ್ಯನ ಹತ್ಯೆ ● 10 ಸಾವಿರಕ್ಕಾಗಿ ಭಿಕ್ಷುಕಿಯ ಕೊಂದ ತರಕಾರಿ ವ್ಯಾಪಾರಿ**

ಶ್ರೀರಂಗಪಟ್ಟಣ, ಹುಣಸೂರು, ಜೂ.22– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಮಕ್ಕಳು ಸೇರಿದಂತೆ ನಾಲ್ವರನ್ನು ಹತ್ಯೆ ಮಾಡಿರುವ ಘಟನೆ ಬುಧವಾರ ಮಧ್ಯರಾತ್ರಿ ಶ್ರೀರಂಗಪಟ್ಟಣ, ಹುಣಸೂರಿನಲ್ಲಿ ನಡೆದಿದೆ.

ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕು ಮರಳಗಾಲದಲ್ಲಿ ತಂದೆಯೇ ತನ್ನ ಇಬ್ಬರು ಮಕ್ಕಳನ್ನು ಸುತ್ತಿಗೆಯಿಂದ ಹೊಡೆದು ಹತ್ಯೆಗೈದಿದ್ದರೇ, ಹುಣಸೂರಿನಲ್ಲಿ ದುಷ್ಕರ್ಮಿಗಳು ವಾಚ್‌ಮನ್ ಹಾಗೂ ಬುದ್ಧಿಮಾಂದ್ಯ ವ್ಯಕ್ತಿ ಮೇಲೆ ಭಾರವಾದ ವಸ್ತು ಎತ್ತಿಹಾಕಿ ಭೀಕರವಾಗಿ ಹತ್ಯೆ ಮಾಡಿದ್ದಾರೆ.

**ಶ್ರೀರಂಗಪಟ್ಟಣ:** ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ತಂದೆಯೇ ತನ್ನ ಇಬ್ಬರು ಮಕ್ಕಳನ್ನು ಸುತ್ತಿಗೆಯಿಂದ ಹೊಡೆದು ಹತ್ಯೆಗೈದು, ಪತ್ನಿಯನ್ನು ಗಂಭೀರವಾಗಿ ಗಾಯಗೊಳಿಸಿ ಪರಾರಿಯಾಗಿರುವ ಘಟನೆ ತಾಲೂಕಿನ ಮರಳಗಾಲ ಗ್ರಾಮದ ಬಳಿಯ ತೋಟದ ಮನೆಯಲ್ಲಿ ನಡೆದಿದೆ.

ಮೂಲತಃ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗಾಣಗಾಪುರ ಗ್ರಾಮದ ಶ್ರೀಕಾಂತ್ ಎಂಬಾತ, ತನ್ನ ಮಕ್ಕಳಾದ ಆದಿತ್ಯ(4), ಅಮೂಲ್ಯ(2) ಅವರನ್ನು ಕೊಲೆ ಮಾಡಿ, ಪತ್ನಿ ಲಕ್ಷ್ಮಿ(25) ಮೇಲೂ ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ.

ಮರಳಗಾಲ ಗ್ರಾಮದ ತೋಟವೊಂದರಲ್ಲಿ ಲಕ್ಷ್ಮಿ ಅವರ ತಂದೆ–ತಾಯಿ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದರು. ಲಕ್ಷ್ಮಿ ತನ್ನ ಪತಿಯೊಂದಿಗೆ ಜಗಳ ಮಾಡಿಕೊಂಡು ಮಕ್ಕಳೊಂದಿಗೆ ವಾರದ ಹಿಂದಷ್ಟೇ ಇಲ್ಲಿಗೆ ಬಂದಿದ್ದರು ಎನ್ನಲಾಗಿದೆ. ಬುಧವಾರ ಹೆಂಡತಿ ಮಕ್ಕಳನ್ನು ಹುಡುಕಿಕೊಂಡು ಬಂದಿದ್ದ ಶ್ರೀಕಾಂತ್ ರಾತ್ರಿ ಬಾಡೂಟ ಸವಿದು ಮಲಗಿದ್ದು, ಮಧ್ಯರಾತ್ರಿ ಮಕ್ಕಳನ್ನು ಹತ್ಯೆಗೈದು, ಪತ್ನಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ.



ತಂದೆಯಿಂದ ಹತ್ಯೆಗೀಡಾದ ಮಕ್ಕಳು

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

**ಹುಣಸೂರು:** ದುಷ್ಕರ್ಮಿಗಳು ವಾಚ್‌ಮನ್ ಹಾಗೂ ಬುದ್ಧಿಮಾಂದ್ಯನ ಮೇಲೆ ಭಾರವಾದ ವಸ್ತು ಎತ್ತಿಹಾಕಿ ಹತ್ಯೆಗೈದಿರುವ ಘಟನೆ ನಗರದ ಬೋಟಿ ಬಜಾರ್ ರಸ್ತೆಯ ಪರಸಯ್ಯನ ಛತ್ರ ಪಕ್ಕದ ಎಸ್.ಎಸ್. ಸಾಮಿಲ್‌ನಲ್ಲಿ ಬುಧವಾರ ಮಧ್ಯರಾತ್ರಿ ನಡೆದಿದೆ.

ನಗರದ ಕಲ್ಕುಣಿಕೆ ರಂಗನಾಥ ಬಡಾವಣೆ ನಿವಾಸಿ ಹಾಗೂ ಎಸ್.ಎಸ್.ಸಾಮಿಲ್ ವಾಚ್‌ಮನ್ ವೆಂಕಟೇಶ್(75) ಹಾಗೂ ಬುದ್ಧಿಮಾಂದ್ಯ ಷಣ್ಮುಖ(65) ಹತ್ಯೆಗೊಳಗಾದವರು.

ವೆಂಕಟೇಶ್ ಎಸ್.ಎಸ್.ಸಾಮಿಲ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬುದ್ಧಿಮಾಂದ್ಯ ಷಣ್ಮುಖನಿಗೆ ಯಾರು ಸಂಬಂಧಿಗಳಿಲ್ಲ. ಸಣ್ಣಪುಟ್ಟ ಕೆಲಸ ಮಾಡಿ, ಇದೆ ಮಿಲ್‌ನಲ್ಲಿ ಮಲಗುತ್ತಿದ್ದ ಎನ್ನಲಾಗಿದೆ.

ಈ ಹತ್ಯೆಯ ನಿಖರ ಮಾಹಿತಿ ಇಲ್ಲ. ಬೆಲೆ ಬಾಳುವ ಮರ ಕದಿಯಲು ಬಂದವರು ಹತ್ಯೆ ಮಾಡಿದರೋ, ಅಥವಾ ಬೇರೆ ಯಾವ ಕಾರಣಕ್ಕೆ ಈ ಕೊಲೆ ನಡೆದಿದೆ ಎಂಬ ಬಗ್ಗೆ ಪೊಲೀಸರ ತನಿಖೆ ಬಳಿಕ ತಿಳಿಯಬೇಕಿದೆ.

ವಿಷಯ ತಿಳಿದು ಗುರುವಾರ ಬೆಳಗ್ಗೆ ಶ್ವಾನದಳದೊಂದಿಗೆ ಸ್ಥಳಕ್ಕಾಗಮಿಸಿದ ಎಸ್‌ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್.ಪಿ.ನಂದಿನಿ, ಡಿವೈಎಸ್‌ಪಿ ಮಹೇಶ್, ಇನ್ಸ್‌ಪೆಕ್ಟರ್ ಧರ್ಮೇಂದ್ರ ಮಹಜರು ನಡೆಸಿದರು. ಈ ಸಂಬಂಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿಗಳ ಪತ್ತೆಗಾಗಿ ಸಾಮಿಲ್‌ನಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರ ಫುಟೇಜ್ ಪರಿಶೀಲಿಸಿದ್ದು, ತನಿಖೆ ಮುಂದುವರೆಸಿದ್ದಾರೆ.

**ಮೈಸೂರು:** ಭಿಕ್ಷುಕು ಬಳಿ ಇದ್ದ 10 ಸಾವಿರ ರೂ. ದೋಚಲು ಆಕೆಯನ್ನು ತರಕಾರಿ ವ್ಯಾಪಾರಿಯೊಬ್ಬ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿರುವ ಘಟನೆ ಮೈಸೂರಿನ ನಂಜುಮಳಿಗೆಯಲ್ಲಿ ನಡೆದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಮಂಗಳವಾರ ಆಟೋ ವೊಂದು ಭಿಕ್ಷುಕಿಗೆ ಗುದ್ದಿದ್ದು, ಗಾಯಗೊಂಡಿದ್ದ ಆಕೆ ಚಿಕಿತ್ಸೆಗಾಗಿ ಆಟೋ ಚಾಲಕ 10 ಸಾವಿರ ರೂ. ಪರಿಹಾರ ನೀಡಿದ್ದನಂತೆ. ಇದನ್ನು ನೋಡಿದ್ದ ತರಕಾರಿ ವ್ಯಾಪಾರಿ ರವಿ ಎಂಬಾತ ಬುಧವಾರ ರಾತ್ರಿ ನಂಜುಮಳಿಗೆಯ ಬಿಇಒ ಆಫೀಸ್ ಬಳಿ ಮಲಗಿದ್ದ ಭಿಕ್ಷುಕಿ ತಲೆ ಮೇಲೆ ಕಲ್ಲು ಹಾಕಿ ಹತ್ಯೆಗೈದಿದ್ದಾನೆ. ಸಿಸಿಟಿವಿ ದೃಶ್ಯಾವಳಿಯನ್ನು ಆಧರಿಸಿ ಕೆ.ಆರ್.ಠಾಣೆ ಪೊಲೀಸರು ಆತನನ್ನು ಬಂಧಿಸಿದ್ದಾರೆ.

# ಜೂ.29ಕ್ಕೆ ಬಕ್ರೀದ್; ಮಂಡಿ ಠಾಣೆಯಲ್ಲಿ ಧಾರ್ಮಿಕ ಮುಖಂಡರ ಸಭೆ

ಮೈಸೂರು, ಜೂ.22–ಮುಸ್ಲಿಂ ಬಾಂಧವರ ಪವಿತ್ರ ಬಕ್ರೀದ್ ಹಬ್ಬ ಜೂ.29ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್ ಅವರು ಗುರುವಾರ ತಮ್ಮ ಠಾಣೆಯಲ್ಲಿ ವಿವಿಧ ಧರ್ಮಗಳ ಮುಖಂಡರ ಸೌಹಾರ್ದ ಸಭೆ ನಡೆಸಿದರು.

ಬಕ್ರೀದ್ ಹಬ್ಬವನ್ನು ಸಹೋದರತ್ವ ಹಾಗೂ ಶಾಂತಿ–ಸೌಹಾರ್ದತೆಯಿಂದ ಆಚರಿಸಬೇಕು ಎಂದು ಮನವಿ ಮಾಡಿದ ಅವರು, ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಒಂದು ವೇಳೆ ಯಾರಾದರೂ ಶಾಂತಿ–ಸುವ್ಯವಸ್ಥೆಗೆ ಧಕ್ಕೆ ಬರುವಂತಹ ಚಟುವಟಿಕೆಗಳಲ್ಲಿ ಭಾಗಿಯಾದರೆ, ಅವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಮುಖಂಡರು ಯುವಕರಿಗೆ ಶಾಂತಿ–ಸೌಹಾರ್ದತೆಯ ಬಗ್ಗೆ ಮಾರ್ಗದರ್ಶನ ಮಾಡುವ ಮೂಲಕ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದು ಅವರು ಮನವಿ ಮಾಡಿದರು.





ಇದೇ ವೇಳೆ ವಿವಿಧ ಧರ್ಮಗಳ ಮುಖಂಡರು ನೀಡಿದ ಸಲಹೆಗಳನ್ನು ಆಲಿಸಿದ ಅವರು, ಶಾಂತಿ–ಸೌಹಾರ್ದತೆಗೆ ಪೊಲೀಸ್ ಇಲಾಖೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು. ಈ ಸಭೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ರಂಗಸ್ವಾಮಿ, ರೇವಣ್ಣ ಸಿದ್ದಪ್ಪ, ಮುಖಂಡರಾದ ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಫಾರು, ಮುಸ್ತಫಾ, ಸೂರಜ್, ರಫೀಕ್, ಅಲ್ತಾಫ್ ಅಹಮ್ಮದ್, ಎಬಿಎಸ್ ಸಯ್ಯದ್, ಮುಸ್ತಾಬ್, ತಂಬಿ, ಕುಮಾರ್, ಮಂಜು, ಬಸಪ್ಪ ಇನ್ನಿತರರಿದ್ದರು.

# ವಿದ್ಯುತ್ ದರ ಏರಿಕೆ ವಿರೋಧಿಸಿ ಮೈಸೂರಲ್ಲಿ ಉದ್ಯಮಿಗಳ ಪ್ರತಿಭಟನೆ

## ಯಥಾಪ್ರಕಾರ ವಾಣಿಜ್ಯ ವಹಿವಾಟು; ವಾಹನ ಸಂಚಾರ

ಮೈಸೂರು, ಜೂ.22(ಆರ್‌ಕೆ)– ವಿದ್ಯುತ್ ದರ ಏರಿಕೆ ಖಂಡಿಸಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಂಸಿಸಿಐ) ಹಾಗೂ ಇತರ ಸಂಘಟನೆಗಳ ಸಹಯೋಗದಲ್ಲಿ ಗುರುವಾರ ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಕರ್ನಾಟಕ ಬಂದ್‌ಗೆ ಕರೆ ನೀಡಿತ್ತಾದರೂ, ಬೇರೆ ಸಂಘಟನೆಗಳು ನೈತಿಕ ಬೆಂಬಲವನ್ನಷ್ಟೇ ನೀಡಿದ ಹಿನ್ನೆಲೆಯಲ್ಲಿ ಗುರುವಾರ ಪ್ರತಿಭಟನೆಗಷ್ಟೇ ಬಂದ್ ಸೀಮಿತಗೊಂಡಿತು. ಡಿ.ದೇವರಾಜ ಅರಸು ರಸ್ತೆಯ ಎಂಸಿಸಿಐ ಕಚೇರಿ ಬಳಿ ಉದ್ಯಮಿಗಳು ಸಮಾವೇಶಗೊಂಡು, ಪ್ರತಿಭಟನೆ ನಡೆಸಿದ ಬಳಿಕ, ಸಿದ್ಧಾರ್ಥ ನಗರದ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಸೆಸ್ಕ್ ಸೇರಿದಂತೆ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳೂ ಅವೈಜ್ಞಾನಿಕವಾಗಿ ವಿದ್ಯುತ್ ದರ ಹೆಚ್ಚಿಸಿರುವುದರಿಂದ ಕೈಗಾರಿಕೆ, ಕಾರ್ಖಾನೆ, ಉದ್ಯಮಗಳ ಉತ್ಪಾದನಾ ವೆಚ್ಚ ಅಧಿಕವಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚುವ ಸಂಭವವಿದೆ. ಅದರಿಂದ ನಿರುದ್ಯೋಗ, ಆರ್ಥಿಕ ವ್ಯವಸ್ಥೆ ಬುಡಮೇಲಾಗುತ್ತದೆ ಎಂದು ಪ್ರತಿಭಟನಾನಿರತರು ಆತಂಕ ವ್ಯಕ್ತಪಡಿಸಿದರು. ಕೈಗಾರಿಕೆಗಳು, ಉದ್ದಿಮೆಗಳು, ವಾಣಿಜ್ಯ ಕೇಂದ್ರಗಳಷ್ಟೇ ಅಲ್ಲದೆ, ಗೃಹ ಬಳಕೆ ಗ್ರಾಹಕರಿಗೂ ವಿದ್ಯುತ್ ದರ ಏರಿಕೆ ಬಿಸಿ ತಟ್ಟಲಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ನಾಗರಿಕರಿಗೆ ಜೀವನ ನಡೆಸುವುದೇ ದುಸ್ತರವಾಗಿದೆ. ಸರ್ಕಾರ ವಿದ್ಯುತ್ ದರ ಏರಿಸಿರುವುದನ್ನು ಹಿಂಪಡೆಯಬೇಕೆಂದು ಉದ್ಯಮಿಗಳು, ವಾಣಿಜ್ಯೋದ್ಯಮಿಗಳು ಒತ್ತಾಯಿಸಿದರು. ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ





ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್. ಆನಂದ್, ಕಾರ್ಯದರ್ಶಿ ಎ.ಕೆ.ಶಿವಾಜಿ ರಾವ್, ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಖಜಾಂಚಿ ಅಶೋಕ್, ಕಾಟ್ಕಿ ಕೈಗಾರಿಕಾ ಉತ್ಪಾದಕರ ಸಂಘದ ಪ್ರಶಾಂತ್, ರಾಮಕೃಷ್ಣೇಗೌಡ, ಹೋಟೆಲ್ ಮಾಲೀಕರ ಸಂಘದ ಸಿ.ನಾರಾಯಣಗೌಡ, ರವಿ ಶಾಸ್ತ್ರಿ, ನಂಜನಗೂಡು ಕೈಗಾರಿಕಾ ಸಂಘದ ರಾಮಪ್ರಸಾದ್, ಚಂದ್ರಶೇಖರ್, ಮೈಸೂರು ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್‌ನ ಶಶಿಕಲಾ ನಾಗರಾಜ್, ಪ್ರದೀಪ್, ಮೇಟಗಳ್ಳಿ ಇಂಡಸ್ಟ್ರೀಸ್ ಅಸೋಸಿಯೇಷನ್‌ನ ಬೈಂದೂರ್, ಯಾದವಗಿರಿ ಕೈಗಾರಿಕಾ ಸಂಘದ ವಿ.ಶ್ರೀಧರ್, ಹೆಬ್ಬಾಳು ಕೈಗಾರಿಕಾ ವಸಾಹತು ಸಂಘದ ಪ್ರಕಾಶ್ ಸೇರಿದಂತೆ ಹಲವು ಕೈಗಾರಿಕಾ ಸಂಘಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಬಂದ್‌ಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಕೆಲ ಅಂಗಡಿಗಳು ಬಂದ್ ಆಗಿದ್ದವಾದರೂ, ಮಧ್ಯಾಹ್ನ 12 ಗಂಟೆ ನಂತರ ತೆರೆದುಕೊಂಡವು. ಉಳಿದಂತೆ ಮೈಸೂರು ನಗರದಾದ್ಯಂತ ಎಲ್ಲಾ ಅಂಗಡಿ–ಮುಂಗಟ್ಟುಗಳು, ವಾಣಿಜ್ಯ ಕೇಂದ್ರಗಳು, ಮಾರುಕಟ್ಟೆ, ಆಟೋ, ಬಸ್, ಸರಕು ಸಾಗಣೆ ವಾಹನಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಮುಂಜಾಗ್ರತೆಯಾಗಿ ಎಲ್ಲೆಡೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಬಂದೋಬಸ್ತ್ ಮಾಡಲಾಗಿತ್ತು.

## ಗುರು ಪೂರ್ಣಿಮೆ

ಮೈಸೂರು, ಜೂ.22–ಮೈಸೂರಿನ ರಾಮಕೃಷ್ಣನಗರ 'ಇ' ಅಂಡ್ 'ಎಫ್' ಬ್ಲಾಕ್ ನಲ್ಲಿರುವ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ಜು.3ರಂದು ಗುರು ಪೂರ್ಣಿಮೆಯನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 6.30 ರಿಂದ ಕಾರ್ಯಕ್ರಮಗಳು ಪ್ರಾರಂಭವಾಗ ಲಿದ್ದು, ಕಾಕಡಾರತಿ, ಪ್ರತಿಷ್ಠಾಪನಾ ಮೂರ್ತಿಗೆ ವೇದಘೋಷಗಳೊಂದಿಗೆ ಜಲಾಭಿಷೇಕ, ಪುಷ್ಪಾರ್ಚನೆ, ಅಷ್ಟಧಾತು ಮೂರ್ತಿಗೆ ಷೋಡಶೋಪಚಾರ ಪೂಜೆ, ಪ್ರಾಕಾರೋತ್ಸವ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ನೈವೇದ್ಯಾರತಿ, ಸಂಜೆ 6 ಗಂಟೆಗೆ ಧೂಪಾರತಿ, ರಾತ್ರಿ 9 ಗಂಟೆಗೆ ಶೇಜಾರತಿ ನಡೆಯಲಿದೆ.

## ಭಾಷಣ ಸ್ಪರ್ಧೆ

ಮೈಸೂರು, ಜೂ. 22–ಸಾವರ್ಕರ್ ಪ್ರತಿಷ್ಠಾನವು ಜೂ. 25ರಂದು ನಗರದ ಲಕ್ಷ್ಮೀಪುರಂನ ಶ್ರೀಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ 18 ರಿಂದ 35 ವಯಸ್ಸಿನ ಸ್ಪರ್ಧಿಗಳಿಗೆ ಸ್ವಾತಂತ್ರ್ಯ ವೀರ ಸಾವರ್ಕರ್ ವಿಷಯದ ಬಗ್ಗೆ ಭಾಷಣ ಸ್ಪರ್ಧೆ ಏರ್ಪಡಿಸಿದೆ. ಬೆಳಗ್ಗೆ 9.30ಕ್ಕೆ ಸ್ಪರ್ಧೆ ಆರಂಭವಾಗಲಿದೆ. ಮೊದಲನೇ ಬಹುಮಾನ ರೂ. 10,000, 2ನೇ ಬಹುಮಾನ ರೂ. 5,000, ತೃತೀಯ ಬಹುಮಾನ ರೂ 3,000 ಇದೆ. ಹೆಸರು ನೋಂದಣಿಗೆ 95914 11335, 86602 19746 ಸಂಪರ್ಕಿಸಬಹುದು.

## ಪ್ರತಿಭಾ ಪುರಸ್ಕಾರ

ಮೈಸೂರು, ಜೂ.22–ನಗರದ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರ ಸ್ವಾಮಿಯವರ ದೇವಾಲಯದಲ್ಲಿ 38ನೇ ವರ್ಷದ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ 10ನೇ ವರ್ಷದ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರವು 2022–23ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ 531 ಅಂಕ ಮತ್ತು ಪಿಯುಸಿಯಲ್ಲಿ 540 ಅಂಕ ಗಳಿಗಿಂತ ಮೇಲು ತೆಗೆದುಕೊಂಡಿರುವ ಮೈಸೂರು ಜಿಲ್ಲೆಯ ವಿಶ್ವಕರ್ಮ ಜನಾಂಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಾತ್ರ ಜು. 10ರ ಸಂಜೆ 5.30ಕ್ಕೆ ಎಂ.ಆರ್. ರಘುರಾಂ ಸ್ಮರಣಾರ್ಥ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನವನ್ನು ನೀಡಲಾಗುವುದು. ಮಾಹಿತಿಗಾಗಿ ಕೆ.ನಾಗರಾಜು, ಮೊ. 9845773258 ಸಂಪರ್ಕಿಸಬಹುದು.

## ನೇರ ಹಾಜರಿಗೆ ಅವಕಾಶ

ಮೈಸೂರು, ಜೂ. 22– ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹಾಗೂ ವಿಭಿನ್ನ ಸಾಮರ್ಥ್ಯ ಮಕ್ಕಳಿಗೆ ಸೂಕ್ತ ತರಬೇತಿ ನೀಡಿ ಹತ್ತನೇ ತರಗತಿ (ಎಸ್‌ಎಸ್‌ಎಲ್‌ಸಿ) ಪರೀಕ್ಷೆಗೆ ನೇರವಾಗಿ ಎನ್‌ಐಓಎಸ್ ಬೋರ್ಡ್ ಮೂಲಕ ಕೂರಿಸಲಾಗುವುದು. ಆಸಕ್ತರು ಜೂ. 30 ರೊಳಗೆ ನಿರೀಕ್ಷೆ ವಿಶೇಷ ಶಾಲೆ, 1ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸರಸ್ವತಿ ಶಾಲಾ ಆವರಣ ಇಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9880179713, 9743625871 ಸಂಪರ್ಕಿಸಬಹುದು.

## ಆಧುನಿಕ ವಚನ ಕವಿಗೋಷ್ಠಿ

ಮೈಸೂರು, ಜೂ. 22– ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ವತಿಯಿಂದ ಜುಲೈ 2ನೇ ವಾರ ಆಧುನಿಕ ವಚನ ಕವಿಗೋಷ್ಠಿ ಏರ್ಪಡಿಸಿದೆ. ಭಾಗವಹಿಸುವವರು ಜೂ. 30 ಒಳಗೆ ತಾವು ರಚಿಸಿದ ಎರಡು ವಚನಗಳನ್ನು ಮ.ಗು. ಸದಾನಂದಯ್ಯ, ನಂ. 140, 3ನೇ ಮೇನ್, 1ನೇ ಕ್ರಾಸ್, ಎಂ ಬ್ಲಾಕ್, 2ನೇ ಹಂತ, ಕುವೆಂಪುನಗರ, ಮೈಸೂರು–23 ಅಥವಾ ವಾಟ್ಸಾಪ್ ಮೂಲಕ 9535500538 ಇದಕ್ಕೆ ಕಳುಹಿಸುವುದು. ಆಯ್ಕೆಯಾದ ವಚನಕಾರರನ್ನು ವಚನ ವಾಚನ ಮಾಡಲು ಅವಕಾಶ ಕಲಿಸಲಾಗುವುದು.

# ಪ್ಲಾಸ್ಟಿಕ್ ಬಳಕೆ ಮಿತಗೊಳಿಸಿ, ಪರಿಸರ ಸಂರಕ್ಷಿಸಿ: ಡಾ.ಭಾನುಮತಿ



ಮೈಸೂರು, ಜೂ.22–ಪ್ಲಾಸ್ಟಿಕ್ ಬಳಕೆಯನ್ನು ಮಿತಗೊಳಿಸಿ ಪರಿಸರವನ್ನು ಸಂರಕ್ಷಿಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಸಂಶೋಧಕರಾದ ಡಾ. ಭಾನುಮತಿ ಹೇಳಿದರು.

ಜಯನಗರದಲ್ಲಿರುವ ನೇಗಿಲಯೋಗಿ ಸಭಾಂಗಣದಲ್ಲಿ ಚುಂಚ ಶ್ರೀ ಗೌಡತಿ ಬಳಗದಿಂದ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಬಳಗದ ಸದಸ್ಯರಿಗೆ ವಿವಿಧ ಜಾತಿಯ ಗಿಡಗಳನ್ನು ವಿತರಿಸಿ ಮಾತನಾಡಿದ ಅವರು ನಾವು ಚಿಕ್ಕವರಿದ್ದಾಗ ನಮ್ಮ ಹಿರಿಯರು ಯಾವುದೇ ಪರಿಸರ ದಿನ ಎಂದು ಆಚರಿಸುತ್ತಾ ಇರಲಿಲ್ಲ. ಕಾರಣ, ಅವರು ದಿನನಿತ್ಯದ ಬಳಕೆಯಲ್ಲಿ ಪರಿಸರ ಹಾನಿ ಆಗದ ಹಾಗೆ ಜೀವನ ನಡೆಸುತ್ತಿದ್ದರು. ಯಾವುದೇ ಕಿರಾಣಿ ಅಂಗಡಿಗೆ ಹೋದರು ಒಂದೇ ಒಂದು ಬಟ್ಟೆಯ ಚೀಲ ಹಿಡಿದು ಹೋಗುತ್ತಿದ್ದರು. ಅಂಗಡಿಯವ ಸಾಮಾನುಗಳನ್ನು ಪೇಪರ್ ಪೊಟ್ಟಣದಲ್ಲಿ ಕಟ್ಟಿಕೊಡುತ್ತಿದ್ದರು. ಯಾವುದೇ ಪ್ಲಾಸ್ಟಿಕ್ ಉಪಯೋಗ ಮಾಡುತ್ತಿರಲಿಲ್ಲ, ಈಗಲೂ ನಾವು, ನೀವು ಮನಸ್ಸು ಮಾಡಿದರೆ ಅದೇ ರೀತಿ ಆಚರಣೆಯನ್ನು ಯಾಕೆ ಮಾಡಬಾರದು ಎಂದು ಹೇಳಿ ಪರಿಸರ ಸಂರಕ್ಷಣೆ ವಿಚಾರವಾಗಿ ಹತ್ತಾರು ವಿಷಯಗಳನ್ನು ತಿಳಿಸಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚುಂಚಶ್ರೀ ಗೌಡತಿ ಬಳಗದ ಅಧ್ಯಕ್ಷರಾದ ಸರೋಜಾ ಲೋಕೇಶ್ವರ ಹಾಗೂ ಸದಸ್ಯರು ಹಾಜರಿದ್ದರು. ಬಳಗದ ಸದಸ್ಯರಾದ ಪೂರ್ಣಿಮಾ, ಎಲ್ಲಾ ಸದಸ್ಯರಿಗೂ ವಿವಿಧ ಜಾತಿಯ ಗಿಡಗಳನ್ನು ವಿತರಿಸಿದರು



ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಕುವೆಂಪು ರಂಗ ಮಂದಿರದಲ್ಲಿ 9ನೇ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅವರಿಗೆ ಸೂರ್ಯ ನಮಸ್ಕಾರ, ಭುಜಂಗಾಸನ, ವೃಕ್ಷಾಸನ ಸೇರಿದಂತೆ ಹಲವು ಆಸನಗಳನ್ನು ಮಾಡಿಸುವುದರ ಜೊತೆಗೆ ಅಲ್ಲಿ ನೆರೆದಿದ್ದವರಿಗೆ ಯೋಗಾಸನದ ಮಹತ್ವವನ್ನು ತಿಳಿಸಲಾಯಿತು. ಪ್ರಾಂಶುಪಾಲೆ ಎನ್.ಅರ್ಚನಾ, ಹೆಚ್.ಆರ್. ಧನಂಜಯ್, ವಿನಯ್‌ಕುಮಾರ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾಲೇಜಿನ ಉಪನ್ಯಾಸಕ ಹಾಗೂ ಉಪನ್ಯಾಸಕೇತರ ವರ್ಗದವರು ಉಪಸ್ಥಿತರಿದ್ದರು.

# ವಿ.ಪೇಟೆ: 7 ಎಕರೆಯಲ್ಲಿ ವಸತಿಗೃಹ ನಿರ್ಮಾಣ

## ಪುರಸಭೆಯ ವತಿಯಿಂದ ಸನ್ಮಾನ ಸ್ವೀಕರಿಸಿದ ಶಾಸಕ ಪೊನ್ನಣ್ಣ ಭರವಸೆ



ವಿರಾಜಪೇಟೆ, ಜೂ.22– ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಅಯ್ಯಪ್ಪ ಬೆಟ್ಟ, ಅರಸುನಗರ, ನೆಹರು ನಗರದ ಬೆಟ್ಟ ಪ್ರದೇಶದ ನಿವಾಸಿಗಳಿಗೆ ವಸತಿಗೆ ಮೀಸಲಾದ ಅಂಬಟ್ಟಿ ಗ್ರಾಮದ ಏಳು ಎಕರೆ ಜಾಗ ಸ್ವಾಧೀನ ಗೊಳಿಸಲಾಗಿದ್ದು, ಮುಂದಿನ ದಿನದಲ್ಲಿ ಅನೇಕ ಕುಟುಂಬಗಳಿಗೆ ವಸತಿ ಗೃಹ ನಿರ್ಮಾಣ ಮಾಡಲಾಗುವುದು ಎಂದು ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ವಿರಾಜಪೇಟೆಯ ಪುರಭವನದ ಸಭಾಂಗಣದಲ್ಲಿ ಪುರಸಭೆಯ ವತಿಯಿಂದ ನಡೆದ ನೂತನ ಶಾಸಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬೆಟ್ಟ ಪ್ರದೇಶದಲ್ಲಿರುವ ನಿವಾಸಿಗಳಿಗೆ ವಸತಿಗೆ ಮೀಸಲಾಗಿರುವ ಏಳು ಎಕರೆ ಜಾಗದಲ್ಲಿ ತಾಲೂಕು ತಹಶೀಲ್ದಾರ್‌ಗೆ ಸೂಚಿಸಿದಂತೆ ಕೆಲಸ ಮುಗಿದಿದೆ. ಆ ಜಾಗದಲ್ಲಿರುವ ಮರವನ್ನು ಕಡಿಯುವ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕ್ರಮ ಕೈಗೊಂಡು ಶೀಘ್ರವಾಗಿ ವಸತಿ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದರು. ಕಾವೇರಿ ನದಿಯ ಸ್ವಚ್ಛತೆ ಯೋಜನೆಯ ಪ್ರಸ್ತಾವನೆ ರಾಜ್ಯ ಸರಕಾರದ ಮುಂದಿದ್ದು, ಈ ವಿಚಾರದ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಸಚಿವರ ಜೊತೆ ಸಮಾಲೋಚಿಸಲಾಗುವುದು. ಕೆಲವು ಸಿಬ್ಬಂದಿಗಳು ಇಲ್ಲಿ ಕರ್ತವ್ಯಕ್ಕೆ ಬಾರದಿರುವ ಬಗ್ಗೆ ಕ್ರಮ ವಹಿಸಲು ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ ಎಂದರು.

ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಸಮಾಲೋಚಿಸಿ 18 ಸಾವಿರ ರೂ.ಗಳನ್ನು ನೌಕರರಿಗೆ ನೇರ ವೇತನ ಪಾವತಿ ವ್ಯವಸ್ಥೆ ಮಾಡಲಾಗಿತ್ತು. ಕಸ ವಿಲೇವಾರಿಯಲ್ಲಿ ಪ್ರತಿಯೊಬ್ಬರು ಪ್ರಮುಖ ಪಾತ್ರ ವಹಿಸಬೇಕು. ಕೊಡಗಿನ ರಸ್ತೆ ಬದಿ ಕಸ ರಾರಾಜಿಸುತ್ತಿದೆ. ನದಿ ಕೆರೆ ಎಲ್ಲೆಡೆ ಹಾಕುವುದನ್ನು ನಿಯಂತ್ರಿಸಬೇಕು. ಗಡಿ ಭಾಗದಲ್ಲಿ ಕಸದ ವಾಹನಗಳು ಕಂಡಲ್ಲಿ ಕಡ್ಡಾಯ ಕ್ರಮ ತೆಗೆದುಕೊಳ್ಳಬೇಕು. ಮನೆ ತ್ಯಾಜ್ಯ ನದಿಗೆ ಸೇರಿ ಅಲ್ಲಿಂದ ಸಮುದ್ರ ಸೇರಿ ಜೀವಿಗಳ ಜೀವಕ್ಕೆ ಕುತ್ತಾಗಲಿದೆ. ಸೇವಾ ಸಂಸ್ಥೆಗಳ ಜೊತೆ ಸೇರಿ ಎಲ್ಲರೂ ಸ್ವಚ್ಛತೆಗೆ ಕೈಜೋಡಿಸಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ವಿರಾಜಪೇಟೆ ನಗರ ಬೆಳೆಯುತ್ತಿರುವ ಹಿನ್ನೆಲೆ ಜನಸಂಖ್ಯೆಗೆ ಅನುಗುಣವಾಗಿ ಅಗತ್ಯ ಮೂಲ ಸೌಕರ್ಯ ಒದಗಿಸಲು ಕ್ರಮ ವಹಿಸಬೇಕಿದೆ. ಮುಖ್ಯವಾಗಿ ಸುಸಜ್ಜಿತ ಪುರಸಭೆ ಕಚೇರಿ, ಸುಸಜ್ಜಿತ ಮಾರುಕಟ್ಟೆ ಆಗಬೇಕಿದೆ. ಇಪ್ಪತ್ತು ವರ್ಷದ ಹಿಂದೆ ನಿರ್ಮಾಣವಾದ ಮಾರುಕಟ್ಟೆ ಕಾಮಗಾರಿ ಅರ್ಧದಲ್ಲಿ ನಿಂತು ಹೋಗಿದೆ. ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಬೆಟ್ಟ ಪ್ರದೇಶದಲ್ಲಿರುವ ನಿವಾಸಿಗಳಿಗೆ ಸಮೀಪದ ಅಂಬಟ್ಟಿ ಗ್ರಾಮದಲ್ಲಿ 300 ಕುಟುಂಬಗಳಿಗೆ ವಸತಿ ನಿರ್ಮಾಣವಾಗಲಿದೆ. ಇನ್ನು ಅನೇಕರಿಗೆ ವಸತಿ ಸೌಲಭ್ಯ ಲಭಿಸಬೇಕಿದೆ. ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕು ಎಂದು ಶಾಸಕರಿಗೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧಿಕಾರಿ ಚಂದ್ರಕುಮಾರ್ ಪಟ್ಟಣದ ಸಮಸ್ಯೆಗಳನ್ನು ಶಾಸಕರ ಮುಂದಿಟ್ಟರು. ಪ್ರಾಸ್ತಾವಿಕವಾಗಿ ಅಭಿಯಂತರ ಹೇಮಕುಮಾರ್ ಮಾತನಾಡಿದರು. ಎಂ.ಕೆ. ದೇಚಮ್ಮ ಪರಿಚಯ ಮಾಡಿದರು. ಸದಸ್ಯ ಮಹ್ಮದ್ ರಫಿ ಸ್ವಾಗತಿಸಿದರು. ಸದಸ್ಯರಾದ ಡಿ.ಪಿ.ರಾಜೇಶ್, ಸಿ.ಕೆ.ಪೃಥ್ವಿನಾಥ್, ಮತ್ತೀನ್, ರಜನಿಕಾಂತ್, ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಶಾಸಕರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭ ಪುರಸಭೆಯ ಎಲ್ಲಾ ಸದಸ್ಯರು, ಸಿಬ್ಬಂದಿಗಳು, ಪೌರ ನೌಕರು ಉಪಸ್ಥಿತರಿದ್ದರು.

# ಡೆಂಗ್ಯೂ ಜ್ವರ ಕುರಿತು ಜಾಗೃತಿ ಮೂಡಿಸಲು ತೀರ್ಮಾನ



ಕುಶಾಲನಗರ, ಜೂ.22– ಡೆಂಗ್ಯೂ ಜ್ವರ ಹರಡದಂತೆ ಪಂಚಾಯತಿ ವ್ಯಾಪ್ತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಕೂಡು ಮಂಗಳೂರು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಇಂದಿರಾ ರಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಡೆಂಗ್ಯೂ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಎಲ್ಲಾ ವಾರ್ಡ್‌ಗಳಲ್ಲಿ ರಾಸಾಯನಿಕ ಹೊಗೆಯನ್ನು ಸಿಂಪಡಿಸಬೇಕು ಮತ್ತು ಚರಂಡಿಗಳಿಗೆ ಬ್ಲೀಚಿಂಗ್ ಪೌಡರ್ ಹಾಕುವ ಮೂಲಕ ಸ್ವಚ್ಛತೆ ಕಾಪಾಡಬೇಕು ಎಂದು ಸದಸ್ಯರು ಒತ್ತಾಯಿಸಿದರು.

ಚರಂಡಿ ಸ್ವಚ್ಛಗೊಳಿಸಿದ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಹಾಕಿ ದಿನಗಟ್ಟಲೇ ಅಲ್ಲಿಯೇ ಬಿಡುವ ಬದಲು ಕೂಡಲೇ ತೆರವುಗೊಳಿಸಬೇಕು ಎಂದು ಸದಸ್ಯ ಶಂಶುದ್ದೀನ್ ಒತ್ತಾಯಿಸಿದರು. ಪಂಚಾಯಿತಿಯ ಕಸದ ವಾಹನ ಸಮಯಕ್ಕೆ ಸರಿಯಾಗಿ ವಾರ್ಡ್‌ಗೆ ಬರುತ್ತಿಲ್ಲ. ಇದರಿಂದ ಜನರಿಗೆ ತೊಂದರೆ ಆಗುತ್ತಿದೆ ಎಂದು ಸದಸ್ಯ ಗಿರೀಶ್ ದೂರಿದರು.

ಪ.ಜಾತಿ ಹಾಗೂ ಪ.ಪಂ ಜನಾಂಗದವರಿಗೆ ಶೇ.25 ರ ನಿಧಿಯಲ್ಲಿ ನೀಡುವ ಅಂತ್ಯಸಂಸ್ಕಾರದ ಹಣವನ್ನು, ಒಂದು ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಿದವರಿಗೆ ಮಾತ್ರ ನೀಡಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಸ್ವಚ್ಛತಾ ಸಿಬ್ಬಂದಿಗಳನ್ನು ಆಯಾ ದಿನದಂದು ನಿಗದಿಪಡಿಸಿದ ವಾರ್ಡ್‌ನಲ್ಲಿ ಕೆಲಸ ನಿರ್ವಹಿಸಲು ಬಿಡಬೇಕು. ಅವರನ್ನು ಬೇರೆ ಕೆಲಸಗಳಿಗೆ ನಿಯೋಜಿಸಬಾರದು ಎಂದು ಸದಸ್ಯೆ ಫಿಲೋಮಿನಾ ಹೇಳಿದರು.

ಕೋಳಿ ಮಾಂಸದ ತ್ಯಾಜ್ಯಗಳನ್ನು ಆನೆಕೆರೆ ಬಳಿ ಹಾಕಲಾಗುತ್ತಿದೆ ಎಂದು ಸದಸ್ಯ ದಿನೇಶ್ ತಿಳಿಸಿದರು. ಕಸ ಎಸೆದವರಿಗೆ ದಂಡ ವಿಧಿಸುವುದಾಗಿ ಪಿಡಿಓ ಸಂತೋಷ್ ಹೇಳಿದರು. ಮುಂಗಾರು ಮಳೆ ಬೀಳದೇ ನದಿಯಲ್ಲಿ ನೀರಿಲ್ಲ. ಬರದ ಆತಂಕ ಜನರಲ್ಲಿದೆ. ಈ ಬಗ್ಗೆ ಪಂಚಾಯಿತಿ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಸಲಹೆ ನೀಡಿದರು. ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಜಾಗ ನಿಗದಿ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಈ ಬಗ್ಗೆ ಶಾಸಕರಿಗೆ ಪತ್ರ ಬರೆಯುವಂತೆ ತೀರ್ಮಾನಿಸಲಾಯಿತು. ಈ ಸಂದರ್ಭ ಕೂಡುಮಂಗಳೂರು ಗ್ರಾ.ಪಂ ಉಪಾಧ್ಯಕ್ಷ ಭಾಸ್ಕರ್ ನಾಯಕ್, ಗ್ರಾ.ಪಂ ಸದಸ್ಯರು ಹಾಗೂ ಪಂಚಾಯಿತಿ ಸಿಬ್ಬಂದಿಗಳು ಇದ್ದರು.

## ಜೂ.27 ರಂದು ಪೌತಿ ಖಾತೆ ಅಭಿಯಾನ

ಮಡಿಕೇರಿ, ಜೂ.22– ಮಡಿಕೇರಿ ತಾಲೂಕಿನ ಸಂಪಾಜೆ ಹೋಬಳಿ ವ್ಯಾಪ್ತಿಯಲ್ಲಿ ಚೆಂಬು, ಪೆರಾಜೆ ಹಾಗೂ ಸಂಪಾಜೆ ಗ್ರಾಮಗಳಿಗೆ ಸಂಬಂಧಿಸಿದ ಪೌತಿ/ ವಾರಸುದಾರಿಕೆ ಖಾತೆ ಅಭಿಯಾನ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಜೂ.27 ರಂದು ಬೆಳಗ್ಗೆ 11 ಗಂಟೆಗೆ ಸಂಪಾಜೆ ನಾಡಕಚೇರಿಯಲ್ಲಿ ನಡೆಯಲಿದೆ.

ಪೌತಿ/ವಾರಸುದಾರಿಕೆ ಖಾತೆ ಸಂಬಂಧ ಖಾತೆದಾರರ ಮರಣ ದೃಢೀಕರಣ ಪತ್ರ ಆರ್‌ಡಿ ಸಂಖ್ಯೆಯ ವಂಶವೃಕ್ಷ ದೃಢೀಕರಣ ಪತ್ರ, ಚಾಲ್ತಿ ಸಾಲಿನ ಪಹಣಿ ಜೊತೆಗೆ ಕಲಂ 10 ರಲ್ಲಿ ದಾಖಲಾಗಿರುವ ಮ್ಯೂಟೇಷನ್ ಪ್ರತಿ/ ಜಮಾಬಂಧಿ ಹಾಗೂ ಆಧಾರ್ ಪ್ರತಿ ಮತ್ತು ದೂರವಾಣಿ ಸಂಖ್ಯೆ ಹಾಜರು ಪಡಿಸಲು ಕಿರಣ್ ಗೌರಯ್ಯ ಅವರು ತಿಳಿಸಿದ್ದಾರೆ. ಎಲ್ಲಾ ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕಂದಾಯ ಪರಿವೀಕ್ಷಕರು ಕೋರಿದ್ದಾರೆ.

## ಜೂ.30, ಕಿವಿ, ಮೂಗು, ಗಂಟಲು ತಜ್ಞರಿಂದ ಉಚಿತ ತಪಾಸಣಾ ಶಿಬಿರ

ಮಡಿಕೇರಿ, ಜೂ.22– ಹಿರಿಯ ನಾಗರಿಕರ ವೇದಿಕೆ, ಲಯನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಹಿರಿಯ ನಾಗರಿಕರು, ಸದಸ್ಯರು ಮತ್ತು ಸಾರ್ವಜನಿಕರಿಗೆ ಕಿವಿ, ಮೂಗು, ಗಂಟಲು ತಜ್ಞರಿಂದ ಉಚಿತ ತಪಾಸಣಾ ಶಿಬಿರವು ಜೂ.30 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಲಯನ್ಸ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ತಿಮ್ಮಯ್ಯ ತಿಳಿಸಿದ್ದಾರೆ.

## ಸಿ.ಲಿಂಗರಾಜು ನಿಧನ

ಕುಶಾಲನಗರ, ಜೂ.22– ತಾಲೂಕು ಕಲ್ಲೂರು ನಿವಾಸಿ ಸಿ.ಲಿಂಗರಾಜು (79) ಗುರುವಾರ ಮಧ್ಯಾಹ್ನ ಅನಾರೋಗ್ಯದಿಂದಾಗಿ ನಿಧನರಾದರು.

ಮೃತರು ಪತ್ನಿ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯ ಪ್ರಸನ್ನ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಕಲ್ಲೂರು ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಕೊಡಗಲ್ಲಿ ಹೆಚ್ಚಿನ ಮಳೆ ಸಾಧ್ಯತೆ; ಮುನ್ನೆಚ್ಚರಿಕೆ ವಹಿಸಲು ಡಿಸಿ ಸೂಚನೆ



ಮಡಿಕೇರಿ, ಜೂ.22– ಕೊಡಗು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದ್ದು, ಆ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರ ವಹಿಸುವಂತೆ ನೋಡಲ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್‌ರಾಜ ಸೂಚಿಸಿದ್ದಾರೆ.

ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಾದಲ್ಲಿ ಸಂಭವಿಸಬಹುದಾದ ಅನಾಹುತ ತಡೆಯುವ ಸಂಬಂಧ ಅಗತ್ಯ ಮುನ್ನೆಚ್ಚರ ವಹಿಸುವ ಬಗ್ಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ 300 ಮಿ.ಮೀ. ಮಳೆ ಕಡಿಮೆ ಇದೆ. ಆದರೂ ಮುಂದಿನ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ವ್ಯಾಪಕ ಮಳೆಯಾದಲ್ಲಿ, ಮಳೆಯಿಂದ ಉಂಟಾಗಬಹುದಾದ ಅವಘಡವನ್ನು ತಪ್ಪಿಸಲು ಅಗತ್ಯ ಕಟ್ಟೆಚ್ಚರ ವಹಿಸಬೇಕಿದೆ ಎಂದು ಅವರು ನಿರ್ದೇಶನ ನೀಡಿದರು

ಹೆಚ್ಚಿನ ಮಳೆಯಿಂದ ಉಂಟಾಗಬಹುದಾದ ಪ್ರಾಣ ಹಾನಿ, ಜಾನುವಾರು ಹಾನಿ, ಆಸ್ತಿ–ಪಾಸ್ತಿ ಹಾನಿ ಹೀಗೆ ಪ್ರತಿಯೊಂದರ ಬಗ್ಗೆ ಎಚ್ಚರ ವಹಿಸಬೇಕಿದೆ. ಆ ನಿಟ್ಟಿನಲ್ಲಿ ತಮ್ಮ ಹಂತದಲ್ಲಿ ತಂಡೋಪಾದಿಯಾಗಿ ಕಾರ್ಯನಿರ್ವಹಿಸಬೇಕು. ಜೊತೆಗೆ ಸ್ಥಳೀಯರಿಗೆ ಮಾಹಿತಿ ನೀಡುವಂತಾಗಬೇಕು ಎಂದು ವೆಂಕಟ್ ರಾಜ ಸೂಚಿಸಿದರು.

ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಸ್ಥಳ ಪರಿಶೀಲಿಸಿ ಹೆಚ್ಚಿನ ಮಳೆಯಿಂದ ಪ್ರವಾಹ, ಬರೆ ಕುಸಿತ ಮತ್ತಿತರ ಬಗ್ಗೆ ಮಾಹಿತಿ ನೀಡುವಂತಾಗಬೇಕು. ಅಧಿಕಾರಿಗಳು ರಜೆ ಹೋದಲ್ಲಿ ಮುಂಚಿತವಾಗಿ ಮಾಹಿತಿ ನೀಡಿ ಕೇಂದ್ರ ಸ್ಥಾನದಿಂದ ತೆರಳಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಲೋಕೋಪಯೋಗಿ, ಪಂಚಾಯತ್ ರಾಜ್, ನಗರ/ಪಟ್ಟಣ ಸ್ಥಳೀಯ ಸಂಸ್ಥೆಗಳು, ಸೆಸ್ಕ್, ನೀರಾವರಿ, ಅರಣ್ಯ, ಕಂದಾಯ, ಹೀಗೆ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಸಂಬಂಧಿಸಿದಂತೆ ಅಗತ್ಯ ಮುನ್ನೆಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಚರಂಡಿ ಹಾಗೂ ಸೇತುವೆಯಲ್ಲಿ ನೀರು ಸರಾಗವಾಗಿ ಹೋಗುವಂತೆ ಸರಿಪಡಿಸುವುದು. ಸೆಸ್ಕ್ ವಿಭಾಗದ ಅಧಿಕಾರಿಗಳು ಹಳೇ ವಿದ್ಯುತ್ ಕಂಬಗಳ ಬದಲಾವಣೆ, ಕೆಟ್ಟಿರುವ ವಿದ್ಯುತ್ ಪರಿವರ್ತಕಗಳನ್ನು ಬದಲಿಸುವುದು ಹೀಗೆ ಹಲವು ಕಾರ್ಯಗಳ ಬಗ್ಗೆ ಜಿಲ್ಲಾಧಿಕಾರಿ ಮಾಹಿತಿ ಪಡೆದರು.

ಇದೇ ಜೂ.27 ರಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ನಡೆಯಲಿದೆ. ತಮ್ಮ ತಮ್ಮ ಇಲಾಖೆ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಿಖರ ಮಾಹಿತಿ ಒದಗಿಸುವಂತೆ ಜಿಲ್ಲಾಧಿಕಾರಿ ಸ್ಪಷ್ಟ ನಿರ್ದೇಶನ ನೀಡಿದರು.

ಜಿಪಂ ಸಿಇಒ ಡಾ.ಎಸ್.ಆಕಾಶ್ ಅವರು ತಾಪಂ ಇಒಗಳು ಸೇರಿದಂತೆ ಎಂಜಿನಿಯರ್‌ಗಳು ಚರಂಡಿ, ಸೇತುವೆ ಬಗ್ಗೆ ಕೂಡಲೇ ವರದಿ ನೀಡಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಶುದ್ಧ ಕುಡಿಯುವ ನೀರು ಪೂರೈಸಬೇಕು ಎಂದು ಸೂಚಿಸಿದರು.

ಭೂ ದಾಖಲೆಗಳ ಉಪನಿರ್ದೇಶಕ ಪಿ.ಶ್ರೀನಿವಾಸ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟರಾಜು, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಡಾ. ರೂಪೇಶ್ ಗೋಪಾಲ್, ಡಾ.ಸತೀಶ್, ಕಾರ್ಮಿಕ ಇಲಾಖೆ ಅಧಿಕಾರಿ ಎಂ.ಎಂ.ಯತ್ನಟ್ಟಿ, ಪೌರಾಯುಕ್ತ ವಿಜಯ್, ಪಿಎಂಜಿಎಸ್‌ವೈ ಎಂಜಿನಿಯರ್ ಪ್ರಭು, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್ ಇತರರು ಇದ್ದರು.

## ಕೊಡಗು ಡಿಸಿ ಕಚೇರಿ ಆವರಣದಲ್ಲಿ ಅಂಬೇಡ್ಕರ್ ಪುತ್ಥಳಿ, ಭವನ ನಿರ್ಮಿಸಲು ಒತ್ತಾಯ

ಮಡಿಕೇರಿ, ಜೂ.22– ನಗರದ ಜಿಲ್ಲಾಧಿಕಾರಿಗಳ ಕಟ್ಟಡದ ಆವರಣದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಹಾಗೂ ಭವನವನ್ನು ನಿರ್ಮಿಸುವಂತೆ ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೊಡಗು ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಜಿಲ್ಲಾ ಸಂಚಾಲಕಿ ಗಾಯತ್ರಿ ನರಸಿಂಹ ಅವರ ನೇತೃತ್ವದಲ್ಲಿ ಸಮಿತಿಯ ಪ್ರಮುಖರು ಹಾಗೂ ಪದಾಧಿಕಾರಿಗಳು ಶಾಸಕರಿಗೆ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಆಕಾಶ್ ಹಾಗೂ ಸಮಾಜ ಕಲ್ಯಾಣಾಧಿಕಾರಿಗಳಿಗೆ ಬೇಡಿಕೆಯ ಮನವಿ ಪತ್ರವನ್ನು ಸಲ್ಲಿಸಿದರು. ಭಾರತದ ಇತಿಹಾಸದ ಪುಟಗಳಲ್ಲಿ ಅಂಬೇಡ್ಕರ್ ಅವರ ಸಾಧನೆ ಅಜರಾಮರವಾಗಿದ್ದು, ಜೀವನದ ಪ್ರತಿಕ್ಷಣವನ್ನು ಶೋಷಿತರ ಧ್ವನಿಯಾಗಿ ಕಳೆದವರು. ಅಂಬೇಡ್ಕರ್ ಅವರನ್ನು ವಿಶ್ವವೇ ಹಾಡಿ ಹೊಗಳಿದರೂ ಜಿಲ್ಲಾ ಮತ್ತು ತಾಲೂಕು ಕಚೇರಿ ಮುಂಭಾಗ ಅವರ ಹೆಸರನ್ನು ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ಸರ್ಕಾರದ ಅನುದಾನದಲ್ಲಿ ಪುತ್ಥಳಿ ಹಾಗೂ ಭವನವನ್ನು ನಿರ್ಮಾಣ ಮಾಡದೇ ಇರುವುದು ಸಂವಿಧಾನ ಶಿಲ್ಪಿಗೆ ಅಗೌರವ ತೋರಿದಂತೆ ಎಂದರು.

ಆದ್ದರಿಂದ ಶೀಘ್ರವೇ ಕೊಡಗು ಜಿಲ್ಲಾ ಕೇಂದ್ರವಾದ ಮಡಿಕೇರಿ ಜಿಲ್ಲಾಧಿಕಾರಿಗಳ ಕಟ್ಟಡದ ಆವರಣದಲ್ಲಿ ಹಾಗೂ ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ, ಪೊನ್ನಂಪೇಟೆ ತಾಲೂಕುಗಳಲ್ಲಿ ಮತ್ತು ಅಂಬೇಡ್ಕರ್ ಅವರ ಪುತ್ಥಳಿ ಹಾಗೂ ಮಡಿಕೇರಿಯಲ್ಲಿ ಅಂಬೇಡ್ಕರ್ ಭವನ ನಿರ್ಮಿಸಿ, ಗೌರವಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಸಂಘಟನಾ ಸಂಚಾಲಕ ಜೇಮ್ಸ್, ಜಿಲ್ಲಾ ಮಹಿಳಾ ಒಕ್ಕೂಟದ ಸಂಘಟನಾ ಸಂಚಾಲಕಿಯರಾದ ಭಾಗ್ಯವತಿ, ಶಶಿಕಲಾ, ವಿರಾಜಪೇಟೆ ತಾಲೂಕು ಸಂಚಾಲಕ ಮನು, ಸಂಘಟನಾ ಸಂಚಾಲಕರುಗಳಾದ ರಘು, ಬೋಜ, ಕುಳಿಯ, ಬಾರಿಕಾಡು ಗ್ರಾಮ ಸಂಚಾಲಕರಾದ ವೈ.ಆರ್.ಮಂಜು, ಸರಸು, ಮಂಜುಳಾ, ಬೆಳ್ಳಿ ಮತ್ತಿತರರು ಹಾಜರಿದ್ದರು.

# ದಾಖಲೆಯ 13 ಬಜೆಟ್ ಕೊಟ್ಟಂತೆ ಗದ್ದೆಯಲ್ಲಿ ಭತ್ತ ಬೆಳೆದು ಅಕ್ಕಿ ಕೊಡಲಾಗದು

## ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಜಿ ಸಿಎಂ ಸದಾನಂದಗೌಡ ಕಿಡಿ ನುಡಿ



ಚಾಮರಾಜನಗರ, ಜೂ.22– ಕೇಂದ್ರ ಸರ್ಕಾರ ಅಕ್ಕಿ ಕೊಡುತ್ತಿಲ್ಲ ಎಂಬ ರಾಜ್ಯ ಕಾಂಗ್ರೆಸ್ ನಾಯಕರ ಆರೋಪದಲ್ಲಿ ಹುರುಳಿಲ್ಲ. 13 ಬಜೆಟ್ ಕೊಟ್ಟಂತೆ ಗದ್ದೆಯಲ್ಲಿ ಭತ್ತ ಬೆಳೆದು ಅಕ್ಕಿ ಕೊಡಲು ಆಗುವುದಿಲ್ಲ. ಕುಣಿಯಲಾರದವನು ನೆಲ ಡೊಂಕು ಅಂದಂತೆ ಅಕ್ಕಿ ಕೊಡುತ್ತೇವೆ ಎಂದು ಹೇಳುವಾಗ ಇವರಿಗೆ ಪರಿಜ್ಞಾನ ಇರಲಿಲ್ಲವೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಕಿಡಿಕಾರಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೂ, ನಿಮಗೂ, ನಮ್ಮ ಮನೆಯವರಿಗೂ, ನಿಮ್ಮ ಮನೆಯವರಿಗೂ ಅಕ್ಕಿ ಕೊಡುತ್ತೇನೆ ಅಂತಾ ಹೇಳಿದ್ದ ಸಿದ್ದರಾಮಯ್ಯ ಅವರ ಟವಲ್ ಹೆಗಲಿನಿಂದ ಈಗ ಎಲ್ಲೋಯ್ತು? ಎಂದು ಪ್ರಶ್ನಿಸಿದ ಅವರು, ಏನಾದ್ರು ಆಗ್ಲಿ ಕೊಡ್ತಿನಿ ಅಂತಾ ತಿಪ್ಪರಲಾಗ ಹಾಕಿದರು ಎಂದರು.

ಮುಖ್ಯಮಂತ್ರಿ ಆಗುವವನಿಗೆ ಮುಂದಾಲೋಚನೆ ಇರಬೇಕು. ಅಕ್ಕಿ ಮಾರಾಟ ಮಾಡಬಾರದು ಎಂದು ಕೇವಲ ಕರ್ನಾಟಕಕ್ಕೆ ಮಾತ್ರ ಮಾಡಿದ್ದಲ್ಲ. ಇದು ದೇಶದಲ್ಲಿ ಆಹಾರ ಭದ್ರತೆಗೆ ಕೇಂದ್ರ ಕೈಗೊಂಡ ನಿಲುವು. ಇದು ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲು ಕೇಂದ್ರ ಕೈಗೊಂಡ ನಿರ್ಧಾರ ಎಂದರು.

ಅಕ್ಕಿ ಕೊಡಬಾರದೆಂದು ಹೇಳುವ ನೀಚ ಬುದ್ಧಿ ರಾಜ್ಯ ಬಿಜೆಪಿ ನಾಯಕರಿಗಿಲ್ಲ. ಇವರಂತೆ (ಕಾಂಗ್ರೆಸ್) ಚೀಪ್ ಪಾಲಿಟಿಕ್ಸ್ ಮಾಡಿ ಬಡವರ ಹೊಟ್ಟೆಗೆ ಹೊಡೆಯುವ ಕೆಲಸ ಮಾಡಲ್ಲ. ಕರ್ನಾಟಕದ ಪ್ರತಿಯೊಬ್ಬ ನಾಗರಿಕನಿಗೂ ಅಕ್ಕಿ ಸಿಗಬೇಕೆಂಬುದು ಬಿಜೆಪಿ ನಿಲುವಾಗಿದೆ ಎಂದು ಸದಾನಂದಗೌಡ ಹೇಳಿದರು.

**ಅಡ್ಜೆಸ್ಟ್‌ಮೆಂಟ್ ನಡೆದಿಲ್ಲ:** ನಮ್ಮ ಪಕ್ಷದಲ್ಲಿ ಬಿಲ್‌ಕುಲ್ ಅಡ್ಜೆಸ್ಟ್‌ಮೆಂಟ್ ನಡೆದಿಲ್ಲ. ಹೊಂದಾಣಿಕೆ ರಾಜಕೀಯ ಮಾಡಿಕೊಂಡಿದ್ದರೆ ಖಂಡಿತ ಬಹುಮತ ಪಡೆಯುತ್ತಿದ್ದೇವು. ಹೀಗಾಗಿ ನಾವು ಅಡ್ಜೆಸ್ಟ್‌ಮೆಂಟ್ ಮಾಡಿಲ್ಲ. ಹಾಗಾಗಿಯೇ ಹಿನ್ನಡೆ ಆಗಿದೆ. ನಮ್ಮ ಪಾರ್ಟಿಯಲ್ಲಿ ನೂರಕ್ಕೆ ನೂರು ಹೊಂದಾಣಿಕೆ ರಾಜಕಾರಣ ನಡೆದಿಲ್ಲ. ಗೆಲ್ಲುವ ನಿರೀಕ್ಷೆ ಇದ್ದ ಕಡೆಯೂ ನಾವು ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದರು. ಸಮಯ, ಸಂದರ್ಭ ನೋಡಿ ಪೊಲಿಟಿಕಲ್ ಸ್ಟ್ರಾಟಜಿ ಮಾಡಬೇಕು. ಎಲ್ಲವನ್ನೂ ಮಾಧ್ಯಮದವರ ಬಳಿ ಹೇಳಲು ಆಗುವುದಿಲ್ಲ ಪೊಲಿಟಿಕಲ್ ಅಡ್ಜೆಸ್ಟ್‌ಮೆಂಟ್ ರಾಜ ಕಾರಣದಲ್ಲಿ ಇರಬಾರದು ಅಂತೇನೂ ಇಲ್ಲ ಯಾವಾಗ ಅವಶ್ಯಕತೆ ಇದೆ ಆಗ ಮಾಡಬೇಕು ಎಂದರು.

**ಜು.3ರೊಳಗೆ ವಿಪಕ್ಷ ನಾಯಕನ ಆಯ್ಕೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜುಗಲ್ ಬಂದಿಗೆ ಸವಾಲು ಹಾಕುವ ವಿಪಕ್ಷ ನಾಯಕನನ್ನು ಆರಿಸುತ್ತೇವೆ. ಸೋಲಿನ ಹಿನ್ನೆಲೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕೆಂದಿರುವುದರಿಂದ ವಿಳಂಬವಾಗಿದೆ. ಜು.3ರೊಳಗೆ ವಿಪಕ್ಷ ನಾಯಕನನ್ನು ಆಯ್ಕೆ ಮಾಡುತ್ತೇವೆ ಎಂದರು.

ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಅಳೆದು, ತೂಗಿ ವಿಪಕ್ಷ ನಾಯಕನನ್ನು ಆಯ್ಕೆ ಮಾಡುತ್ತಾರೆ. ನಮ್ಮ ಪಕ್ಷದಲ್ಲಿ ಶಿಸ್ತು ಇದೆ. ಈ ಪ್ರಕಾರ ರಾಷ್ಟ್ರೀಯ ನಾಯಕರು ಆಯ್ಕೆ ಮಾಡುತ್ತಾರೆ ಎಂದರು.

## ಬಿಜೆಪಿ ಕಾರ್ಯಕರ್ತರಿಂದ ಮುಖಂಡರ ತರಾಟೆ

ಚಾಮರಾಜನಗರ, ಜೂ.22– ಇಂದಿಲ್ಲಿ ನಡೆದ ಪ್ರಧಾನಿ ಮೋದಿ ಅವರ 9ನೇ ವರ್ಷದ ಸಾಧನೆ ತಿಳಿಸುವ ಸಂಪರ್ಕದಿಂದ ಸಮರ್ಥನೆ ಕಾರ್ಯಕ್ರಮದಲ್ಲಿ ಚಾಮರಾಜನಗರದಲ್ಲಿ ವಿ.ಸೋಮಣ್ಣ ಅವರ ಸೋಲಿಗೆ ನೀವೇ ಕಾರಣ ಎಂದು ಜಿಲ್ಲಾ ಬಿಜೆಪಿ ಮುಖಂಡರನ್ನು ಕೆಲ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡರು. ಸಭೆ ಆರಂಭವಾಗುತ್ತಿದ್ದಂತೆಯೇ ಆಕ್ರೋಶ ಹೊರ ಹಾಕಿದ ವಿ.ಸೋಮಣ್ಣ ಬೆಂಬಲಿಗರು, ನಗರದಲ್ಲಿ ಸೋಮಣ್ಣ ಸೋಲಿಗೆ ಕಾಂಗ್ರೆಸ್‌ನ ಗ್ಯಾರಂಟಿಗಳು ಕಾರಣವಲ್ಲ. ನಮ್ಮ ಪಕ್ಷದ ಮುಖಂಡರೇ ಕಾರಣ ಎಂದು ದೂರಿದರು.

ಕಳೆದ ಮೂರು ಚುನಾವಣೆಗಳಿಂದಲೂ ಹೀಗೆಯೇ ಮಾಡುತ್ತಿದ್ದೀರಿ. ಸಭೆಯಲ್ಲಿ ಮೊದಲು ಕಾರ್ಯಕರ್ತರಿಗೆ ಮಾತನಾಡಲು ಅವಕಾಶ ಕಲ್ಪಿಸಿ. ಚುನಾವಣೆಯಲ್ಲಿ ನಮಗೆ ಏಕೆ ಹಿನ್ನಡೆಯಾಗಿದೆ ಎನ್ನುವುದನ್ನು ಹೇಳುತ್ತೇವೆ. ಅದನ್ನು ಬಿಟ್ಟು ನೀವು ಹೇಳುವುದು ಏನಿದೆ ಎಂದು ಮುಖಂಡರನ್ನು ಪ್ರಶ್ನಿಸಿದರು. ನಂತರ ಮುಖಂಡರು ಆಕ್ರೋಶಿತರನ್ನು ಸಮಾಧಾನಪಡಿಸಿ ಮಾಧ್ಯಮದವರು ಇದ್ದಾರೆ. ತಮಗೆ ನಂತರ ಮಾತನಾಡಲು ಅವಕಾಶ ಕಲ್ಪಿಸುವುದಾಗಿ ಹೇಳಿದರು. ಕಾರ್ಯಕ್ರಮ ಉದ್ಘಾಟನೆ ಬಳಿಕ ಮಾಧ್ಯಮದವರನ್ನು ಹೊರ ಕಳುಹಿಸಿದರು. ಆ ನಂತರವೂ ಕಾರ್ಯಕರ್ತರು ತಮ್ಮ ಆಕ್ರೋಶ ಹೊರ ಹಾಕಿದರು.

**ವಿ.ಸೋಮಣ್ಣ ಗೈರು:** ಸಭೆಯಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಗೈರು ಹಾಜರಾಗಿದ್ದು ಎದ್ದು ಕಾಣುತ್ತಿತ್ತು. ಈ ಬಗ್ಗೆ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ ಸದಾನಂದಗೌಡ, ಸೋತವರಿಗೆ ಸಾಮಾನ್ಯವಾಗಿ ನೋವು ಇದ್ದೇ ಇರುತ್ತದೆ. ಎರಡೂ ಕ್ಷೇತ್ರಗಳಲ್ಲಿ ನಿಂತು ಹಿನ್ನಡೆಯಾಯಿತು ಎಂಬ ನೋವಿನಿಂದ ಸೋಮಣ್ಣ ಬಂದಿಲ್ಲ. ಅವರಿಗೆ ಯಾವುದೇ ಕೋಪ, ತಾಪ ಇಲ್ಲ ಎಂದು ಸ್ಪಷ್ಟಪಡಿಸಿದರು.

## ಗೆಲುವನ್ನು ಕಳೆದುಕೊಂಡ ಸ್ಥಳದಲ್ಲೇ ಪಡೆಯುತ್ತೇವೆ: ಡಿವಿಎಸ್

ಚಾಮರಾಜನಗರ, ಜೂ.22– ಕಳೆದುಕೊಂಡದ್ದನ್ನು ಕಳೆದು ಹೋದ ಜಾಗದಲ್ಲೇ ಹುಡುಕಬೇಕು. ಹೀಗಾಗಿ ನಾವು ಗೆಲುವನ್ನು ಕಳೆದುಕೊಂಡ ಸ್ಥಳದಲ್ಲೇ ಹುಡುಕಿ ಪಡೆದುಕೊಳ್ಳುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಭವಿಷ್ಯ ನುಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ನಡೆದ ಪ್ರಧಾನಿ ಮೋದಿ ಅವರ 9ನೇ ವರ್ಷದ ಸಾಧನೆ ತಿಳಿಸುವ ಸಂಪರ್ಕದಿಂದ ಸಮರ್ಥನೆ ಕಾರ್ಯಕ್ರಮದಲ್ಲಿ ಮಾತನಾಡಿ, ಚುನಾವಣೆಯಲ್ಲಿ ಸೋಲು ಉಂಟಾಗಿದೆ. ನಾವು ಎಲ್ಲಿ ವಿಫಲವಾಗಿದ್ದೇವೆ ಎಂಬುದನ್ನು ಅರಿತು ಅದನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಗೆಲುವು ಸಾಧಿಸುವ ನಿಟ್ಟಿನಲ್ಲಿ ಕಾರ್ಯಕರ್ತರೆಲ್ಲರೂ ಮುಂದಾಗಬೇಕು ಎಂದರು. ಕಾರ್ಯಕರ್ತರು ಜನರಿಗೆ ಕಾಂಗ್ರೆಸ್ ಸರ್ಕಾರದ ವೈಫಲ್ಯ ತಿಳಿಸುವ ಜೊತೆಗೆ ಮೋದಿ ಸರ್ಕಾರದ 9 ವರ್ಷಗಳ ಸಾಧನೆ ತಿಳಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ತನ್ನ ಗ್ಯಾರಂಟಿಗಳನ್ನು ನೀಡಲು ಸಾಧ್ಯವಿಲ್ಲ. ಹೀಗಾಗಿ, ಲೋಕಸಭಾ ಚುನಾವಣೆ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಹೋಗುತ್ತಾರೆ ಎಂದರು.

**ಅಕ್ಕಿ ನೀಡುವಂತೆ ಪ್ರತಿಭಟನೆ:** ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿ, ಕಾಂಗ್ರೆಸ್ ತನ್ನ 5 ಗ್ಯಾರಂಟಿಗಳನ್ನು ರಾಜ್ಯದ ಜನರಿಗೆ ನೀಡಬೇಕು ಎನ್ನುವುದೇ ನಮ್ಮ ಅಜೆಂಡಾ. ಅದರಂತೆ ಅನ್ನಭಾಗ್ಯ ಯೋಜನೆಯಡಿ ಜು.1ರಿಂದ ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ ನೀಡಬೇಕು. ಇಲ್ಲದಿದ್ದರೆ ಅವರ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಲಿದೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ ನಾರಾಯಣ್ ಮಾತನಾಡಿ, ಜನರಿಗೆ ಮೋದಿ ಸರ್ಕಾರದ 9 ವರ್ಷಗಳ ಸಾಧನೆ ತಿಳಿಸುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 28 ಸ್ಥಾನಗಳಲ್ಲೂ ಗೆಲುವು ಸಾಧಿಸಲು ಶ್ರಮಿಸಬೇಕು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಜಿ.ನಾರಾಯಣ್ ಪ್ರಸಾದ್ ಮಾತನಾಡಿದರು. ಸಭೆಯಲ್ಲಿ ಮಾಜಿ ಶಾಸಕರಾದ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಸಿ.ಎಸ್.ನಿರಂಜನಕುಮಾರ್, ಎಸ್.ಬಾಲರಾಜು, ಮಾಜಿ ಸಚಿವ ವಿಜಯಶಂಕರ್, ಮುಖಂಡರಾದ ಎಸ್.ಮಹದೇವ್, ನೂರೊಂದುಶೆಟ್ಟಿ, ಮೈ.ವಿ.ರವಿಶಂಕರ್, ಆರ್.ಸುಂದರ್, ಹನುಮಂತಶೆಟ್ಟಿ, ಕುಮಾರಸ್ವಾಮಿ, ನಾಗಶ್ರೀ ಪ್ರತಾಪ್, ನಾಗೇಂದ್ರ, ಸೋಮಶೇಖರ್ ಇತರರಿದ್ದರು.

## ನಾಳೆ ಜಿಲ್ಲಾ ಮಟ್ಟದ ಯುವ ಉತ್ಸವ

ಚಾಮರಾಜನಗರ, ಜೂ.22– ನೆಹರು ಯುವ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಜಿಲ್ಲಾ ಮಟ್ಟದ ಯುವ ಉತ್ಸವ ಜೂ.24 ರಂದು ಬೆಳಗ್ಗೆ 10.30ಕ್ಕೆ ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉಪಸ್ಥಿತರಿರಲಿದ್ದು, ಸಂಸದ ವಿ.ಶ್ರೀನಿವಾಸಪ್ರಸಾದ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಬೆಂಗಳೂರು ದಕ್ಷಿಣ ರಾಜ್ಯಗಳ ಎನ್‌ವೈಕೆಎಸ್ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್, ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಜಿಪಂ ಸಿಇಓ ಎಸ್.ಪೂವಿತಾ, ಎಸ್ಪಿ ಪದ್ಮಿನಿ ಸಾಹು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಸುಮತಿ, ರಾಷ್ಟ್ರೀಯ ಸೇವಾ ಸಂಯೋಜನೆ ಜಿಲ್ಲಾ ಸಂಯೋಜನಾಧಿಕಾರಿ ಡಾ.ಎಂ.ಬಿ. ಮಹೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಆರ್. ಅನಿತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

## ಭ್ರಮರಾಂಬಿಕಾ ನಿಧನ



ಚಾಮರಾಜನಗರ, ಜೂ.22– ತೊರವಳ್ಳಿ ಗ್ರಾಮದ ನಿವಾಸಿ ಭ್ರಮರಾಂಬಿಕಾ(53) ಗುರುವಾರ ನಿಧನರಾದರು.

ಮೃತರು ಆರೋಗ್ಯ ಇಲಾಖೆ ನಿವೃತ್ತ ನೌಕರ ಶಂಭುಲಿಂಗಸ್ವಾಮಿ ಅವರ ಪತ್ನಿ. ಅಂತ್ಯಕ್ರಿಯೆ ಅವರ ಸ್ವಗ್ರಾಮ ಚಾಮರಾಜನಗರ ತಾಲೂಕಿನ ಹೆಗ್ಗವಾಡಿಪುರ ಗ್ರಾಮದಲ್ಲಿ ನಾಳೆ (ಶುಕ್ರವಾರ) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮಲೆಯೂರು ಪಿಎಸಿಎಸ್‌ನಿಂದ ಹಣ ದುರುಪಯೋಗ ಆರೋಪ

# ರೈತರಿಂದ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ



ಚಾಮರಾಜನಗರ, ಜೂ.22– ತಾಲೂಕಿನ ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಸದಸ್ಯರ ಚಿನ್ನಾಭರಣದ ಮೇಲೆ ಸಾಲ ನೀಡುವ ಮೂಲಕ 3 ಕೋಟಿ ರೂ.ಗಳಿಗೂ ಹೆಚ್ಚು ವಂಚನೆ ಮಾಡಿದ್ದಾರೆ ಎಂದು ಆರೋಪಿಸಿ ನೊಂದ ಸಂಘದ ಸದಸ್ಯರು ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಿ ಧರಣಿ ನಡೆಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಭಾಗ್ಯರಾಜ್ ಮಾತನಾಡಿ, ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಲ್.ಶಿವಪ್ಪ, ಕಾರ್ಯದರ್ಶಿ ನಾಗೇಂದ್ರ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಶೂನ್ಯ ಬಡ್ಡಿ ದರದಲ್ಲಿ ಚಿನ್ನಾಭರಣ ಸಾಲ ನೀಡುತ್ತೇವೆ ಎಂದು ರೈತರಿಂದ ಚಿನ್ನಾಭರಣ ಪಡೆದು ಸಾಲ ನೀಡಿದ್ದು, ಮತ್ತೆ ಹಣ ಕಟ್ಟಿಸಿಕೊಂಡು ಸಂಘದ ಸದಸ್ಯರ ಚಿನ್ನಾಭರಣ ವಾಪಸ್ ನೀಡಲು ಹಿಂದೇಟು ಹಾಕಿದ್ದಾರೆ. ಚಿನ್ನಾಭರಣಗಳನ್ನು ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಸದಸ್ಯರು ಇತರ ಖಾಸಗಿ ಬ್ಯಾಂಕ್‌ಗಳಲ್ಲಿ ಅಡವಿಟ್ಟು ಹೆಚ್ಚಿನ ಹಣ ಪಡೆದು ದುರ್ಬಳಕೆ ಮಾಡಿಕೊಂಡಿದ್ದು, ಮುಗ್ಧ ರೈತರು, ರೈತ ಮಹಿಳೆಯರನ್ನು ವಂಚಿಸಿದ್ದಾರೆ. ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ನೊಂದ ಸದಸ್ಯರ ಚಿನ್ನಾಭರಣ ಬಿಡಿಸಿಕೊಡಬೇಕೆಂದು ಆಗ್ರಹಿಸಿದರು.

ಆಡಳಿತ ಮಂಡಳಿ ಸದಸ್ಯರು ವ್ಯವಸ್ಥಿತವಾಗಿ 8 ಗ್ರಾಮಗಳ ಮುಗ್ಧ ರೈತರು ಹಾಗೂ ರೈತ ಮಹಿಳೆಯರನ್ನು ವಂಚಿಸಿದ್ದಾರೆ. ಯಾವುದೇ ಪಿಎಸಿಎಸ್‌ಗಳಲ್ಲಿ ಚಿನ್ನದ ಮೇಲೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಇಲ್ಲ. ಆದರೆ ಈ ಸಂಘ ರೈತರನ್ನು ವಂಚನೆ ಮಾಡಲು ಕಳೆದ ಮೂರು ವರ್ಷದಿಂದ ರೈತರಿಂದ ಚಿನ್ನಾಭರಣ ಪಡೆದು ಶೂನ್ಯ ಬಡ್ಡಿದರ ಎಂದು ನಂಬಿಸಿ ಅಲ್ಪ ಮೊತ್ತಕ್ಕೆ ಗಿರವಿ ಇಟ್ಟುಕೊಂಡಿದ್ದಾರೆ. ಇದೀಗ ಹಣ ಕಟ್ಟಿದರೂ ಚಿನ್ನ ನೀಡುತ್ತಿಲ್ಲ ಎಂದು ದೂರಿದರು. ಇದೊಂದು ದೊಡ್ಡ ವಂಚನೆ ಪ್ರಕರಣ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಸಂಘವನ್ನು ಸೂಪರ್‌ಸೀಡ್ ಮಾಡಬೇಕು ಎಂದರು. ಪ್ರತಿಭಟನಾ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಮಾತನಾಡಿ, 10 ದಿನಗಳೊಳಗೆ ಸಹಕಾರಿ ಇಲಾಖೆ ಮೇಲಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಜಂಟಿಯಾಗಿ ರೈತ ಮುಖಂಡರು ಹಾಗೂ ಮಲೆಯೂರು ಪಿಎಸಿಎಸ್‌ನಿಂದ ನೊಂದ ಸದಸ್ಯರೊಂದಿಗೆ ಸಭೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಕಾರ್ಯದರ್ಶಿ ಕೆ.ಮೂಕಹಳ್ಳಿ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಾಗರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ಹರ್ಷ, ಕಾರ್ಯದರ್ಶಿ ನಾಗರಾಜು, ಮಲೆಯೂರು ಗ್ರಾಮ ಘಟಕ ಅಧ್ಯಕ್ಷ ಬಸವರಾಜಪ್ಪ, ಮಂಜುನಾಥ್, ಸಿದ್ದೇಶ್, ಪ್ರದೀಪ್, ಗುರುಸ್ವಾಮಿ, ಗಿರಿಜಾ, ಲಕ್ಷ್ಮಮ್ಮ, ಕಮಲಮ್ಮ, ಸುವರ್ಣಮ್ಮ, ಪ್ರವೀಣ್ ಸೇರಿದಂತೆ ನೂರಾರು ರೈತರು, ಮಹಿಳೆಯರು ಭಾಗವಹಿಸಿದ್ದರು.

ಮೈಸೂರು ಮಿತ್ರ ಶುಕ್ರವಾರ 23 ಜೂನ್ 2023

# ಗ್ರಾಮ ಲೆಕ್ಕಿಗನ ವರ್ಗಾವಣೆಗೆ 40 ಸಾವಿರ ಲಂಚ ಸ್ವೀಕಾರ: ಪಾಂಡವಪುರ ತಹಶೀಲ್ದಾರ್ ಸೌಮ್ಯ ಲೋಕಾಯುಕ್ತ ಬಲೆಗೆ

ಪಾಂಡವಪುರ, ಜೂ.22–ಗ್ರಾಮ ಲೆಕ್ಕಿಗನ ವರ್ಗಾವಣೆಗಾಗಿ 40 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ವೇಳೆ ಪಾಂಡವಪುರ ತಹಸೀಲ್ದಾರ್ ಕೆ.ಸಿ.ಸೌಮ್ಯ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಪಾಂಡವಪುರ ತಾಲೂಕಿನ ಗ್ರಾಮ ಲೆಕ್ಕಿಗ ಮರಿಸ್ವಾಮಿ ತನ್ನನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ತಹಸೀಲ್ದಾರ್ ಸೌಮ್ಯ ಅವರ ಬಳಿ ಮನವಿ ಮಾಡಿದ್ದರು ಎನ್ನಲಾಗಿದ್ದು, ಅವರ ವರ್ಗಾವಣೆಗಾಗಿ ಸೌಮ್ಯ 40 ಸಾವಿರ ರೂ. ಲಂಚದ ಬೇಡಿಕೆ ಇಟ್ಟಿದ್ದರು. ತನ್ನ ಹಿರಿಯ ಅಧಿಕಾರಿಯ ಲಂಚಬಾಕತನದಿಂದ ಬೇಸತ್ತಿದ್ದ ಮರಿಸ್ವಾಮಿ ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಪಿ.ಸುನೀಲ್ ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆಗಿಳಿದಿತ್ತು. ಗುರುವಾರ ಸಂಜೆ 6.30ರ ಸುಮಾರಿನಲ್ಲಿ ಮರಿಸ್ವಾಮಿ ಅವರಿಂದ ತಹಸೀಲ್ದಾರ್ ಸೌಮ್ಯ 40 ಸಾವಿರ ರೂ. ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರು ಹಣದ ಸಮೇತ ಅವರನ್ನು ಬಂಧಿಸಿದರು. ರಾತ್ರಿ 9 ಗಂಟೆ ನಂತರವೂ ಕೂಡ ತಹಸೀಲ್ದಾರ್ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸುತ್ತಿದ್ದುದು ಕಂಡು ಬಂತು. ಈ ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಡಿವೈಎಸ್ಪಿ ಪಿ.ಸುನೀಲ್ ಕುಮಾರ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಬ್ಯಾಟರಾಯಗೌಡ, ಸಬ್ ಇನ್ಸ್‌ಪೆಕ್ಟರ್‌ಗಳಾದ ಮೋಹನ್ ರೆಡ್ಡಿ, ಪ್ರಕಾಶ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

# ಗ್ಯಾರಂಟಿ ಭರವಸೆ ಈಡೇರಿಸದಿದ್ದರೆ ವಿಧಾನಸಭೆ ಮುಂದೆ ಧರಣಿ

● ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಎಚ್ಚರಿಕೆ ● ಐದು ಭರವಸೆ ಅನುಷ್ಠಾನ ಸಾಧ್ಯವಾಗದೇ ಇದ್ದರೆ ಅಧಿಕಾರ ಬಿಟ್ಟು ತೊಲಗಲಿ



ದಾವಣಗೆರೆ, ಜೂ.22– ಕಾಂಗ್ರೆಸ್ ಸರ್ಕಾರಕ್ಕೆ ಐದು ಯೋಜನೆ ಅನುಷ್ಠಾನ ಮಾಡಲು ಆಗದೇ ಇದ್ದರೆ ಅಧಿಕಾರ ಬಿಟ್ಟು ತೊಲಗಲಿ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಾಗ್ದಾಳಿ ನಡೆಸಿದ್ದಾರೆ. ನಗರದ ಶ್ರೀ ಅಭಿನವ ರೇಣುಕಾಮಂದಿರದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಪಕ್ಷದ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಗೂ ಮುನ್ನ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಜನರನ್ನು ಮರಳು ಮಾಡಲು ಕಾಂಗ್ರೆಸ್ ಮುಖಂಡರು ದಿನಕ್ಕೊಂದು ನಾಟಕವಾಡುತ್ತಿದ್ದಾರೆ. ಅನ್ನಭಾಗ್ಯಕ್ಕಾಗಿ ಅಕ್ಕಿ ನೀಡುವ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಕೇಳಿ ಭರವಸೆ ಕೊಟ್ಟಿದ್ದರಾ ಎಂದು ಪ್ರಶ್ನಿಸಿದ ಅವರು, ಚುನಾವಣೆಯಲ್ಲಿ ಗೆಲ್ಲಬೇಕು ಎಂದು ಅವರೇ ಭರವಸೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಈಗಾಗಲೇ 5 ಕೆ.ಜಿ. ಅಕ್ಕಿ ಕೊಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ಕೊಟ್ಟಂತೆ 10 ಕೆಜಿ ಅಕ್ಕಿ ಕೊಡಬೇಕು. ಕೊಡಲು ಆಗದಿದ್ದರೆ ಅಧಿಕಾರ ಬಿಟ್ಟು ತೊಲಗಲಿ ಎಂದು ಹರಿಹಾಯ್ದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್ ರವಿಕುಮಾರ್ ಮಾತನಾಡಿ, ಬಿಜೆಪಿಯನ್ನು ರೈತರಪರ, ಬಡವರ ಪರ ಬೆಳೆಸಿದವರು ಮಾಜಿ ಸಿಎಂ ಯಡಿಯೂರಪ್ಪ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಭರವಸೆ ಈಡೇರಿಸದಿದ್ದರೆ ವಿಧಾನಸಭೆ ಮುಂದೆ ಧರಣಿ ನಡೆಸುವುದಾಗಿ ಬಿಎಸ್‌ವೈ ಹೇಳಿದ್ದಾರೆ. ಅದಕ್ಕಾಗಿ ರಾಜ್ಯದಲ್ಲಿ ಏಳು ತಂಡಗಳು ಪ್ರವಾಸ ಕೈಗೊಂಡಿವೆ. ರಾಜ್ಯ ಸರ್ಕಾರದ ಐದು ಭರವಸೆ ಈಡೇರಿಸಬೇಕು ಎಂದು ಒತ್ತಾಯಿಸಿ ಈ ತಂಡಗಳು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಧರಣಿ ನಡೆಸಲಿವೆ. ಸರ್ಕಾರ ಅಧಿಕಾರಕ್ಕೆ ಬಂದು ಒಂದು ತಿಂಗಳಾದರೂ ಅಷ್ಟರಲ್ಲೇ ಸರ್ಕಾರದ ಹಣೇಬರಹ ಜನರ ಮುಂದೆ ಬದಲಾಗುತ್ತಿದೆ ಎಂದರು. ಪ್ರಧಾನಿ ಮೋದಿಯವರು ವಿಶ್ವವೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.

## ಒಂದನೇ ಪುಟದಿಂದ

## ಮೈಸೂರು ಶ್ರೀಗಂಧದ ಕಂಪು!

ವಸ್ತ್ರ ದಶದಾನಗಳಲ್ಲಿ ಒಳಗೊಂಡಿರುತ್ತದೆ. ಈ ವರ್ಷ ನವೆಂಬರ್‌ನಲ್ಲಿ 80 ವರ್ಷ ಪೂರೈಸಿ 81ನೇ ವರ್ಷಕ್ಕೆ ಕಾಲಿಡುತ್ತಿರುವ ಜೋ ಬೈಡನ್ ಅವರಿಗೆ ಪ್ರಧಾನಿ ಮೋದಿ ದಶ ದಾನ ನೀಡಿ ಗೌರವಿಸಿದರು. ಬೈಡನ್ ಅವರಿಗೆ ನೀಡಿದ ವಿಶೇಷವಾದ ಮೈಸೂರಿನ ಶ್ರೀಗಂಧದ ಪೆಟ್ಟಿಗೆಯನ್ನು ಜೈಪುರದ ಮಾಸ್ಟರ್ ಕುಶಲಕರ್ಮಿ ಯೊಬ್ಬರು ತಯಾರಿಸಿದ್ದಾರೆ. ಈ ಪೆಟ್ಟಿಗೆಯಲ್ಲಿ ವಿವಿಧ ಪ್ರಾಣಿಗಳ ಮಾದರಿಯನ್ನು ಸಂಕೀರ್ಣವಾಗಿ ಕೆತ್ತಲಾಗಿದೆ. ಪೆಟ್ಟಿಗೆಯೊಳಗೆ ಗಣೇಶನ ವಿಗ್ರಹ ಹಾಗೂ ಬೆಳ್ಳಿ ದೀಪವಿದೆ.

ಗಣೇಶ ವಿಗ್ರಹವನ್ನು ವಿಘ್ನ ನಿವಾರಕ ಸೂಚನೆಯಾಗಿ ನೀಡಲಾಗಿದೆ. ತಾಮ್ರ ಪತ್ರ ಎಂದು ಕರೆಯಲ್ಪಡುವ ತಾಮ್ರ ಫಲಕದಲ್ಲಿ ಶ್ಲೋಕಗಳನ್ನು ಕೆತ್ತಲಾಗಿದೆ. ಪಶ್ಚಿಮ ಬಂಗಾಳದ ನುರಿತ ಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟ ಬೆಳ್ಳಿ ತೆಂಗಿನ ಕಾಯಿಯನ್ನು ಹಸು ದಾನದ ಬದಲಿಗೆ ನೀಡಲಾಗಿದೆ. ಭೂ ದಾನಕ್ಕೆ ಭೂಮಿಗೆ ಬದಲಾಗಿ ಮೈಸೂರಿನ ಪರಿಮಳಯುಕ್ತ ಶ್ರೀಗಂಧದ ತುಂಡನ್ನು ನೀಡಲಾಗಿದೆ. ತಮಿಳುನಾಡಿನಿಂದ ತರಲಾಗಿದ್ದ ಬಿಳಿ ಎಳ್ಳುಬೀಜ, ರಾಜಸ್ತಾನದಿಂದ ತಂದ 24 ಕ್ಯಾರೆಟ್ ಶುದ್ಧ ಹಾಲ್ ಮಾರ್ಕ್ ಚಿನ್ನದ ನಾಣ್ಯವನ್ನು ನೀಡಲಾಗಿದೆ. ಜಾರ್ಖಂಡ್‌ನಿಂದ ತರಿಸಲಾಗಿದ್ದ ಕೈಯ್ಯಿನಿಂದ ನೇಯ್ದ ಟಸ್ಸಾರ್ ರೇಷ್ಮೆ ಬಟ್ಟೆಯನ್ನು ವಸ್ತ್ರ ದಾನವಾಗಿ, ಉತ್ತರಾಖಂಡದಿಂದ ತರಿಸಲಾದ ಅಕ್ಕಿಯನ್ನು ಧಾನ್ಯ ದಾನವಾಗಿ, ಮಹಾರಾಷ್ಟ್ರದ ಬೆಲ್ಲವನ್ನು ಬೆಲ್ಲ ದಾನವಾಗಿ ಬೈಡನ್ ಅವರಿಗೆ ನೀಡಲಾಯಿತು.

## ಅಮೆರಿಕಾದ ಕಾನ್ಸುಲೇಟ್ ಕಚೇರಿ

ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಮೇರಿಕಾ ಮತ್ತು ಭಾರತದ ನಡುವಿನ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಬೇಕು ಎಂಬ ಉದ್ದೇಶದಿಂದ ಉಭಯ ದೇಶಗಳು ಈ ಕ್ರಮಕ್ಕೆ ಮುಂದಾಗಿವೆ. ಕಳೆದ ವರ್ಷ ಅಮೆರಿಕಾವು ದಾಖಲೆಯ 1.25 ಲಕ್ಷ ವೀಸಾಗಳನ್ನು ಭಾರತೀಯ ವಿದ್ಯಾರ್ಥಿಗಳಿಗೆ ನೀಡಿದೆ. ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಕಳೆದ ವರ್ಷ ಶೇ.20ರಷ್ಟು ಹೆಚ್ಚಳದೊಂದಿಗೆ ಯು.ಎಸ್.ನಲ್ಲಿ ಅತೀ ದೊಡ್ಡ ವಿದೇಶಿ ವಿದ್ಯಾರ್ಥಿ ಸಮುದಾಯವಾಗಿದೆ ಎಂದು ಶ್ವೇತ ಭವನದ ಅಧಿಕಾರಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಅಮೇರಿಕಾ ರಾಯಭಾರಿ ಕಚೇರಿ ಇದ್ದು, ಹಾಲಿ ಮುಂಬೈ, ಕಲ್ಕತ್ತಾ ಮತ್ತು ಹೈದರಾಬಾದ್‌ನಲ್ಲಿರುವ ಕಾನ್ಸುಲೇಟ್ ಕಚೇರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ. ಇದರ ಜೊತೆಗೆ ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಅಮೇರಿಕಾ ಕಾನ್ಸುಲೇಟ್ ಕಚೇರಿಗಳನ್ನು ತೆರೆಯಲಿದೆ. ಭಾರತವೂ ಕೂಡ ಅಮೇರಿಕಾದ ವಾಷಿಂಗ್ಟನ್‌ನಲ್ಲಿ ರಾಯಭಾರಿ ಕಚೇರಿ ಹೊಂದಿದ್ದು, ನ್ಯೂಯಾರ್ಕ್, ಸ್ಯಾನ್‌ಫ್ರಾನ್ಸಿಸ್ಕೋ, ಷಿಕಾಗೋ, ಹ್ಯೂಸ್ಟನ್ ಮತ್ತು ಅಟ್ಲಾಂಟ ಸೇರಿದಂತೆ ಐದು ಕಡೆ ಕಾನ್ಸುಲೇಟ್ ಕಚೇರಿಗಳನ್ನು ಹೊಂದಿದೆ.

## ಸಿದ್ದರಾಮಯ್ಯ, ಮುನಿಯಪ್ಪ

ಇದರ ಮಧ್ಯೆ ಮುಖ್ಯಮಂತ್ರಿ ಅವರು ನಿನ್ನೆ ರಾತ್ರಿ ಕೇಂದ್ರ ಗೃಹ ಸಚಿವ ಅಮಿತ್‌ಷಾ ಅವರನ್ನು ಭೇಟಿಯಾಗಿ ಅನ್ನಭಾಗ್ಯ ಯೋಜನೆಗೆ ಮಾಸಿಕ 2.28 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಪೂರೈಸುವಂತೆ ಮನವಿ ಮಾಡಿದರು. ಇದಕ್ಕೆ ಸರಿಯಾಗಿ ಸ್ಪಂದಿಸದ ಷಾ ಸಂಬಂಧಪಟ್ಟ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ನಮ್ಮ ಬೇಡಿಕೆ ಈಡೇರಿಸುವುದಿಲ್ಲ ಎಂಬುದು ಮನದಟ್ಟಾಗುತ್ತಿದ್ದಂತೆ ಉತ್ತರ ಭಾರತದಲ್ಲಿ ಭತ್ತ ಬೆಳೆಯುವ ರಾಜ್ಯಗಳನ್ನು ಸಂಪರ್ಕಿಸಿದ್ದಾರೆ. ಅದರಲ್ಲೂ ಪಂಜಾಬ್ ಮತ್ತು ಛತ್ತೀಸ್‌ಘಡಗಳಿಂದ ಅಕ್ಕಿ ಖರೀದಿ ಕುರಿತಂತೆ ನಡೆಸಿರುವ ಮಾತುಕತೆ ಒಂದಷ್ಟು ಯಶಸ್ವಿಯಾಗಿದೆ. ಆದರೆ, ಅವೆರಡೂ ರಾಜ್ಯಗಳು ಇಡೀ ವರ್ಷ ಕರ್ನಾಟಕಕ್ಕೆ ಬೇಕಾಗುವ ಅಕ್ಕಿ ಸರಬರಾಜು ಮಾಡುವುದಿಲ್ಲ. ಒಂದೆರಡು ತಿಂಗಳಿಗಷ್ಟೇ ಸೀಮಿತ. ಅಲ್ಲದೆ, ಅಲ್ಲಿನ ಅಕ್ಕಿಯೂ ದುಬಾರಿ ಹಾಗೂ ಸಾಕಾಣಿಕೆ ವೆಚ್ಚವೂ ಹೆಚ್ಚು. ಇದು ರಾಜ್ಯ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಇನ್ನೂ ಆಂಧ್ರಪ್ರದೇಶ ಮತ್ತು ತೆಲಂಗಾಣ ಈಗ ಅಕ್ಕಿ ಬದಲು ಭತ್ತ ನೀಡುವುದಾಗಿ ಹೇಳಿವೆ. ಆದರೂ ಅದಕ್ಕೆ ಅಂತಿಮ ಸ್ವರೂಪ ಬಂದಿಲ್ಲ. ಅಕ್ಕಿ ಗೊಂದಲ ಪರಿಹರಿಸಲು ಮತ್ತು ಒಂದು ನಿರ್ಣಯ ಕೈಗೊಳ್ಳಲು ಜೂನ್ 28ರಂದು ಸಂಪುಟ ಸಭೆ ಕರೆದಿದ್ದಾರೆ. ಅಂದು ಮಹತ್ವದ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ.

ಆಹಾರ ಸಚಿವರು ಬಡವರಿಗೆ ಅಕ್ಕಿ ಪೂರೈಸಲು ದೇವರೇ ನಮ್ಮ ನೆರವಿಗೆ ಬರಬೇಕು ಎಂದು ಕೈಚೆಲ್ಲಿದ್ದಾರೆ. ಏನೇ ಆದರೂ ನಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ. ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿರುವ ಮುಖ್ಯಮಂತ್ರಿಗಳು ಅಕ್ಕಿ ವಿತರಣೆ ಬಗ್ಗೆ ರಾಜಕೀಯ ಅಥವಾ ದ್ವೇಷದ ರಾಜಕಾರಣ ಮಾಡುವುದು ಬೇಡ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ತಿಳಿಸಿದ್ದೇನೆ ಎಂದಿದ್ದಾರೆ.ಎಫ್‌ಸಿಐ ಅಕ್ಕಿ ನೀಡುವ ವಿಚಾರದಲ್ಲಿ ಒಪ್ಪಿಗೆ ನೀಡಿ, ಮರುದಿನವೇ ಅಕ್ಕಿ ವಿತರಣೆಯನ್ನು ರಾಜ್ಯಗಳಿಗೆ ಸ್ಥಗಿತಗೊಳಿಸಿರುವ ವಿಚಾರವನ್ನೂ ಅವರ ಗಮನಕ್ಕೆ ತಂದಿದ್ದೇನೆ. ಷಾ ಅವರು, ಸಂಬಂಧಪಟ್ಟ ಮಂತ್ರಿಗಳೊಂದಿಗೆ ಮಾತನಾಡುತ್ತೇನೆ ಎಂದು ಭರವಸೆ ನೀಡಿದ್ದಾರೆ, ನೋಡೋಣ ಎಂದರು.

# ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಶೀಘ್ರ ದುರಸ್ತಿ

## ಶಾಸಕ ಕೆ. ಹರೀಶ್‌ಗೌಡ ಭರವಸೆ



ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಪ್ರತಿ ವರ್ಷ ಪಾಶ್ಚಿಮಾತ್ಯ ಕಲೆಗಳ ಬಗ್ಗೆ ಸಂಭ್ರಮ ನಡೆಸಲಾಗುತ್ತಿತ್ತು. ಈ ಬಾರಿ ದೇಸಿ ಸಂಭ್ರಮ ನಡೆಸಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿನಿಯರು ಸೀರೆಯುಟ್ಟು ಬಂದಿದ್ದಾರೆ. ಸೀರೆ ನಮ್ಮ ಸಂಸ್ಕೃತಿ. ಈ ರೀತಿಯ ಸಂಸ್ಕಾರ ಬೆಳೆಸುವ ಕಾರ್ಯಕ್ರಮಗಳು ಹೆಚ್ಚಾಗಬೇಕು. ದೇಸೀ ಸಂಸ್ಕಾರವನ್ನು ಬಿಡಬಾರದು. ಜಾನಪದ ಮತ್ತು ಸೋಬಾನೆ ಗೀತೆಗಳ ಮೂಲಕ ಜೀವನದ ಪಾಠ ತಿಳಿಸಿಕೊಡುತ್ತಾರೆ. ಆದ್ದರಿಂದ ಜಾನಪದಕ್ಕೆ ಒಳ್ಳೆಯ ಆದ್ಯತೆ ಇದೆ ಎಂದು ತಿಳಿಸಿದರು.
- ಕೆ.ಹರೀಶ್‌ಗೌಡ, ಶಾಸಕ

ಮೈಸೂರು, ಜೂ.22(ಜಿಎ)– ಪಾರಂಪರಿಕ ಸಂರಕ್ಷಣಾ ಸಮಿತಿಯ ವತಿಯಿಂದ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡ ದುರಸ್ತಿಗಾಗಿ ವರದಿ ಪಡೆಯಲಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಮಾಡಲಾಗುತ್ತದೆ ಎಂದು ಶಾಸಕ ಕೆ.ಹರೀಶ್‌ಗೌಡ ಭರವಸೆ ನೀಡಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಕನ್ನಡ ಜಾನಪದ ಪರಿಷತ್ ವತಿಯಿಂದ ಕಾಲೇಜಿನ ಆವರಣದಲ್ಲಿ ಗುರುವಾರ ಆಯೋಜಿಸಿದ್ದ 'ಮಹಾರಾಣಿ ದೇಸಿ ಸಂಭ್ರಮ'ಕ್ಕೆ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಕೂಡ ನಾನೇ ಆಗಿರುವುದರಿಂದ ಶೀಘ್ರದಲ್ಲಿಯೇ ಭೇಟಿ ನೀಡಿ, ಪರಿಶೀಲಿಸಿ, ಎಲ್ಲರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಜೊತೆಗೆ ಈ ಕಟ್ಟಡವನ್ನು ದುರಸ್ತಿ ಮಾಡುವ ಬದಲು ಕೆಡವಿ, ಹೊಸ ಕಟ್ಟಡ ನಿರ್ಮಿಸುವ ಬಗ್ಗೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಗಮನಕ್ಕೆ ತರಲಾಗುವುದು ಎಂದರು.

ಕಷ್ಟಪಟ್ಟು ವ್ಯಾಸಂಗ ಮಾಡಿದರೆ ನಿಮ್ಮ ಮುಂದಿನ ಜೀವನ ಬಹಳ ಸುಂದರವಾಗಿರುತ್ತದೆ. ಇಂತಹ ಸಮಯದಲ್ಲಿ ನಿಮ್ಮ ಮನಸು ಚಂಚಲತೆಯಿಂದ ಕೂಡಿರುತ್ತದೆ. ಇದು ಸಾಮಾನ್ಯ. ಇದರ ಹೊರತಾಗಿಯೂ ಏಕಾಗ್ರತೆ ಸಾಧಿಸಿ ವಿದ್ಯಾಭ್ಯಾಸದ ಕಡೆ ಗಮನಹರಿಸಬೇಕು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಓದಿದ ಸಾಕಷ್ಟು ವಿದ್ಯಾರ್ಥಿಗಳು ಹಲವು ಸಾಧನೆಗಳನ್ನು ಮಾಡಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ. ಮುಂದಿನ ದಿನಗಳಲ್ಲಿ ಇಲ್ಲಿಯೇ ಪಿಜಿ ತರಗತಿಗಳು ಪ್ರಾರಂಭವಾಗುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಜಾನಪದ ಶ್ರೀ ಪ್ರಶಸ್ತಿ ಪುರಸ್ಕೃತ ಕಂಸಾಳೆ ಕುಮಾರಸ್ವಾಮಿ, ಸೋಬಾನೆ ಹಾಡುಗಾರರಾದ ಉತ್ತನಹಳ್ಳಿಯ ಸಣ್ಣಮ್ಮ, ಯರಗನಹಳ್ಳಿಯ ಮಾದಮ್ಮ, ಜಾನಪದ ಹಾಡುಗಾರ್ತಿ ವರುಣದ ರಾಣಿ ಅವರನ್ನು ಸಮಾಜ ಸೇವಕ ರವಿಗೌಡ ಸನ್ಮಾನಿಸಿದರು.

ಮಹಾರಾಣಿ ಕಾಲೇಜು ಸಂಪೂರ್ಣ ಹಳ್ಳಿಯ ಸೊಗಡಿನಲ್ಲಿ ಕಂಗೊಳಿಸುವಂತೆ ಸಿಂಗರಿಸಲಾಗಿತ್ತು. ನಂತರ ವಿವಿಧ ಸ್ಪರ್ಧೆಗಳು ನಡೆದವು. ಖ್ಯಾತ ಜಾನಪದ ಗಾಯಕ ಅಮ್ಮ ರಾಮಚಂದ್ರ, ಪಿ. ಸೋಮಶೇಖರ್, ಮರಿಸ್ವಾಮಿ ಸರ್ವಾರ್ಥ ತೀರ್ಪುಗಾರರಾಗಿದ್ದರು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಜಾನಪದ ಪರಿಷತ್ ವಿಭಾಗೀಯ ಸಂಚಾಲಕಿ ಡಾ. ಕಾವೇರಿ ಪ್ರಕಾಶ್, ಪ್ರಾಂಶುಪಾಲ ಡಾ.ಡಿ. ರವಿ, ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಡಾ.ಕೆ. ಸಿದ್ದರಾಜು, ಸಾಂಸ್ಕೃತಿಕ ಸಮಿತಿ ಅಧ್ಯಾಪಕ ಸಂಚಾಲಕಿ ಪಿ.ಆರ್. ವನಿತಾ, ಖಜಾಂಚಿ ಡಾ.ದೀಪಾ ಆರ್. ಹೆಬ್ಬಾರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್. ಕೆಂಡಗಣ್ಣೇಗೌಡ, ಬೇಸೂರು ಮೋಹನ್ ಪಾಳೇಗಾರ್ ಉಪಸ್ಥಿತರಿದ್ದರು.

# ನಾಳೆ ನೂತನ ನಂದಿಧ್ವಜದ ಉದ್ಘಾಟನಾ ಸಮಾರಂಭ

## ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ 87ನೇ ವಾರ್ಷಿಕೋತ್ಸವ



ಮೈಸೂರು,ಜೂ.22(ಪಿಎಂ)– ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ 87ನೇ ವಾರ್ಷಿಕೋತ್ಸವ ಹಾಗೂ ನೂತನ ನಂದಿಧ್ವಜದ ಉದ್ಘಾಟನಾ ಸಮಾರಂಭವನ್ನು ಜೂ.24ರಂದು ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಆರ್.ಅಂಕಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಅಗ್ರಹಾರದ ಬಸವೇಶ್ವರ ರಸ್ತೆಯಲ್ಲಿರುವ ಸಂಘದ ಮುಂಭಾಗದಲ್ಲಿ ಸಮಾರಂಭ ನಡೆಯಲಿದೆ ಎಂದರು.

ಶಿವಯೋಗಿ ಶ್ರೀ ಶಿವಪಾದ ಸ್ವಾಮೀಜಿಯವರ ಹೆಸರಿನಲ್ಲಿ ಯಜಮಾನ್ ಮಿಠಾಯಿ ಅಂಗಡಿ ಬಸಪ್ಪನವರು ಸ್ನೇಹಿತರೊಡಗೂಡಿ 1936ರಲ್ಲಿ ಈ ಸಂಘದ ಸ್ಥಾಪನೆ ಮಾಡಿದರು. ಇದೀಗ ಸಂಘವು 86 ವರ್ಷಗಳನ್ನು ಪೂರೈಸಿ, 87ನೇ ವರ್ಷಕ್ಕೆ ಕಾಲಿಡುತ್ತಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಂಘದ ಸದಸ್ಯರು ಪಾಲ್ಗೊಳ್ಳುತ್ತಿದ್ದೇವೆ ಎಂದು ತಿಳಿಸಿದರು.

ಒಂದೂವರೆ ಲಕ್ಷ ರೂ. ವೆಚ್ಚದಲ್ಲಿ ಸಂಘದಿಂದ ಹೊಸದಾಗಿ ನಂದಿಧ್ವಜ ಮಾಡಿಸಿದ್ದು, ಇದು ಸುಮಾರು 150 ಕೆಜಿ ತೂಕ ಹಾಗೂ 30 ಅಡಿ ಎತ್ತರವನ್ನು ಹೊಂದಿದೆ. ಹಳೇ ನಂದಿಧ್ವಜವೂ ಸಂಘದಲ್ಲಿದೆ. ಅಂದು ಬೆಳಗ್ಗೆ 10ಕ್ಕೆ ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮತ್ತು ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಅತಿಥಿಗಳಾಗಿ ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಗಣೇಶ್ ಪ್ರಸಾದ್, ಪಾಲಿಕೆ ಸದಸ್ಯರಾದ ಸೌಮ್ಯ ಉಮೇಶ್, ಬಿ.ವಿ.ಮಂಜುನಾಥ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ವೀರಶೈವ ನಂದಿಧ್ವಜ ಸಂಘದ ಎಂ.ಎನ್.ಚಂದ್ರಶೇಖರ, ಶ್ರೀ ಗೌರಿಶಂಕರ ನಂದಿಧ್ವಜ ಸಂಘದ ಮಹದೇವಪ್ಪ ಉಡಿಗಾಲ ಮತ್ತು ಶ್ರೀ ಗುರುಮಲ್ಲೇಶ್ವರ ನಂದಿಧ್ವಜ ಸಂಘದ ಮಲ್ಲೇಶಯ್ಯ ಅವರನ್ನು ಸನ್ಮಾನಿಸಲಾಗುವುದು ಎಂದರು.

ಇದಕ್ಕೂ ಮುನ್ನ ಅಂದು ಬೆಳಗ್ಗೆ 9.30ಕ್ಕೆ ಅಗ್ರಹಾರದ 101 ಗಣಪತಿ ದೇವಸ್ಥಾನದಿಂದ ಸಂಘದವರೆಗೆ ಎಲ್ಲಾ ಸ್ವಾಮೀಜಿಗಳನ್ನು ಮೆರವಣಿಗೆ ಮೂಲಕ ಕರೆತರಲಾಗುವುದು. ಅಂದು ಮಧ್ಯಾಹ್ನ 12.30ಕ್ಕೆ ಎರಡೂವರೆ ಸಾವಿರ ಮಂದಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಂಘದ ಕಾರ್ಯದರ್ಶಿ ಹೆಚ್.ಜಿ. ರಾಜು, ನಿರ್ದೇಶಕರಾದ ಎಂ.ಜಿ.ಪ್ರಭು, ಮಹೇಶ್, ಸದಸ್ಯ ಜಿ.ಮಹೇಶ್ ಗೋಷ್ಠಿಯಲ್ಲಿದ್ದರು.

# ನಾಳೆ 'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಪ್ರದರ್ಶನ



ಮೈಸೂರು, ಜೂ.22(ಪಿಎಂ)–ಬೆಂಗಳೂರಿನ ಅಂತರಂಗ ಬಹಿರಂಗ ಹವ್ಯಾಸಿ ರಂಗ ತಂಡದ ವತಿಯಿಂದ ಜೂ.24ರಂದು 'ಹಿಂಗ್ ಮಾಡಿದ್ರೆ ಹೆಂಗೆ' ಎಂಬ ಹಾಸ್ಯ ನಾಟಕದ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ್ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 7ಕ್ಕೆ ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ನಾಟಕದ ಪ್ರದರ್ಶನ ಏರ್ಪಡಿಸಲಾಗಿದೆ. ಯಾವುದೇ ಡಬಲ್ ಮೀನಿಂಗ್ ಇಲ್ಲದ ತಿಳಿ ಹಾಸ್ಯ ಹೊಂದಿರುವ ನಾಟಕ ಇದಾಗಿದ್ದು, 90 ನಿಮಿಷ ಅವಧಿಯನ್ನು ಹೊಂದಿದೆ. ಟಿಕೆಟ್ ದರ 150 ರೂ. ಆಗಿದೆ ಎಂದರು.

ತಂಡದ ಮುಖ್ಯಸ್ಥ ಭೀಷ್ಮ ರಾಮಯ್ಯ ಮಾತನಾಡಿ, ನಮ್ಮ ತಂಡ 6 ವರ್ಷಗಳಿಂದ ನಿರಂತರವಾಗಿ ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ತಂಡದಿಂದ ಪ್ರದರ್ಶನಗೊಳ್ಳುತ್ತಿರುವ 6ನೇ ನಾಟಕ ಇದಾಗಿದ್ದು, ಈ ನಾಟಕ ಈಗಾಗಲೇ 10 ಪ್ರದರ್ಶನಗಳನ್ನು ಕಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ತಿಳಿಸಿದರು.

ನಾಟಕದ ನಿರ್ದೇಶಕ ಬಾಷ್ ರಾಘವೇಂದ್ರ, ನಾಟಕದ ರಚನಕಾರರಾದ ನಾಗವೇಣಿ ರಂಗನ್ ಗೋಷ್ಠಿಯಲ್ಲಿದ್ದರು.

# ನಾಳೆ 'ಭಾವ ಮಿಲನ' ಕೃತಿ ಬಿಡುಗಡೆ



ಮೈಸೂರು,ಜೂ.22(ಪಿಎಂ)–ಮೈಸೂರಿನ ಕುವೆಂಪುನಗರದ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ ಜೂ.24ರಂದು 'ಭಾವ ಮಿಲನ–ಕವನಗಳ ಕನವರಿಕೆ' ಪುಸ್ತಕ ಬಿಡುಗಡೆ ಮತ್ತು ಪುಸ್ತಕದ ಕವನಗಳ ಗೀತೆಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಹಾಗೂ ವೈದ್ಯ ಡಾ.ನಾರಾಯಣ್ ಹೆಗಡೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾವ ಮಿಲನ ಕೃತಿಯನ್ನು ಬರೆದಿದ್ದು, ಸಂಘದ ಯೋಗ ಸಂಸ್ಕೃತಿ ಭವನದಲ್ಲಿ ಅಂದು ಸಂಜೆ 5ಕ್ಕೆ ಕಾರ್ಯಕ್ರಮ ನಡೆಯಲಿದೆ. ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಪುಸ್ತಕ ಬಿಡುಗಡೆ ಮಾಡಲಿದ್ದು, ಪುಸ್ತಕ ಕುರಿತು ಪ್ರಾಧ್ಯಾಪಕ ರಾಮಚಂದ್ರ ಭಟ್ ಮಾತನಾಡಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಕವನದ ಹಾಡುಗಳಿಗೆ ರಾಗ ಸಂಯೋಜನೆ ಮಾಡಿರುವ ಅತಿಶಯ್ ಜೈನ್, ಸಮೀರ್ ರಾವ್, ಮನುರಾವ್, ರಘುನಾಥ್, ಆತ್ಮರಾವ್ ಮತ್ತು ಆರೋಗ್ಯ ರಾಜ್ ಅವರನ್ನು ಮಂಜುನಾಥ್ ಭಟ್ ಸನ್ಮಾನಿಸಲಿದ್ದಾರೆ. ಮೈಸೂರಿನ ಅಧ್ಯಾಪಕರು ಹಾಗೂ ಸಾಹಿತಿಗಳು ಕವನಗಳ ಕುರಿತಂತೆ ಆಶಯ ನುಡಿಗಳನ್ನಾಡಲಿದ್ದಾರೆ. ಬಳಿಕ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಸಂಜೆ 4ಕ್ಕೆ ಸಂಘದ ನವೀಕೃತ ವಿದ್ಯಾರ್ಥಿ ನಿಲಯ ಹಾಗೂ ಅತಿಥಿಗೃಹದ ಉದ್ಘಾಟನೆ ನಡೆಯಲಿದೆ ಎಂದು ಹೇಳಿದರು. ವೈದ್ಯೆ ಮತ್ತು ಗಾಯಕಿ ಡಾ.ಶಿಲ್ಪ ಹೆಗಡೆ, ಸಂಘದ ಕಾರ್ಯದರ್ಶಿ ತೇಜಸ್ವಿ ನಾಯಕ್, ಗಾಯಕ ಅತಿಶಯ್ ಜೈನ್ ಗೋಷ್ಠಿಯಲ್ಲಿದ್ದರು.

# ಜೂ.25ರಂದು ವಾಸವಿ ಭವನ ಉದ್ಘಾಟನೆ

● ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ ಸಾನ್ನಿಧ್ಯ
● ಪರಿಷತ್ ಮಾಜಿ ಸಭಾಪತಿ ಡಿ.ಹೆಚ್.ಶಂಕರಮೂರ್ತಿ ಉದ್ಘಾಟನೆ



ಮೈಸೂರು,ಜೂ.22(ಪಿಎಂ)– ಕರ್ನಾಟಕ ಆರ್ಯವೈಶ್ಯ ಮಹಾಸಭಾ ವತಿಯಿಂದ ಮೈಸೂರಿನ ಲಷ್ಕರ್ ಮೊಹಲ್ಲಾದ ಗೀತಾಮಂದಿರ ರಸ್ತೆಯ ಮಹಾಸಭಾದ ನಿವೇಶನದಲ್ಲಿ ನಿರ್ಮಿಸಿರುವ 'ವಾಸವಿ ಭವನ'ದ ಉದ್ಘಾಟನಾ ಸಮಾರಂಭವನ್ನು ಜೂ.25ರಂದು ಹಮ್ಮಿಕೊಳ್ಳಲಾಗಿದೆ ಎಂದು ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ.ನಾಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.45ಕ್ಕೆ ಶ್ರೀ ವಾಸವೀ ಪೀಠದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಹೆಚ್.ಶಂಕರಮೂರ್ತಿ ಭವನದ ಉದ್ಘಾಟನೆ ನೆರವೇರಿಸಲಿದ್ದಾರೆ. ಸಂಸದ ಪ್ರತಾಪ್ ಸಿಂಹ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಭವನದಲ್ಲಿರುವ ಹಾಸ್ಟೆಲ್ ಅನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್, ಮೇಯರ್ ಶಿವಕುಮಾರ್ ಭಾಗವಹಿಸಲಿದ್ದು, ಮಹಾಸಭಾದ ಅಧ್ಯಕ್ಷ ಆರ್.ಪಿ.ರವಿಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮಾರಂಭಕ್ಕೂ ಮುನ್ನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸುಮಾರು 8 ಕೋಟಿ ರೂ. ವೆಚ್ಚದಲ್ಲಿ ವಾಸವಿ ಭವನ ನಿರ್ಮಾಣಗೊಂಡಿದ್ದು, ಅತ್ಯಾಧುನಿಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪ್ರತ್ಯೇಕ ಹಾಸ್ಟೆಲ್, ಅತಿಥಿಗೃಹ ಮತ್ತು ವಾಸವಿ ಅಕಾಡೆಮಿಯ ಕೊಠಡಿಗಳನ್ನು ಒಳಗೊಂಡಿದೆ ಎಂದು ವಿವರಿಸಿದರು.

ಮಹಾಸಭಾದ ಮೈಸೂರು ವಿಭಾಗೀಯ ಕಾರ್ಯದರ್ಶಿ ಇ.ಕೆ.ಅನಂತ, ಕಾರ್ಯಕಾರಿ ಸಮಿತಿ ಸದಸ್ಯೆ ಗೌರವ್ ಸುಧಾಮುರಳಿ, ಜಿಲ್ಲಾಧ್ಯಕ್ಷ ಆನಂದ ಕೃಷ್ಣ, ಕಾರ್ಯದರ್ಶಿ ರಶ್ಮಿ ರಾಘವೇಂದ್ರ, ಕನ್ನಿಕಾ ಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಸಂದೀಪ್ ಗೋಷ್ಠಿಯಲ್ಲಿದ್ದರು.



# ವನ್ಯಜೀವಿಗಳಿಗೆ ಕಂಟಕವಾಗಿದ್ದ ಬಲೆಗಳ ತೆರವು ಕಾರ್ಯಾಚರಣೆ; ವೈಜ್ಞಾನಿಕ ವಿಲೇವಾರಿ



ಮೈಸೂರು,ಜೂ.22(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಮೀನುಗಾರಿಕೆಗೆ ಬಳಸಿದ್ದ ನೈಲಾನ್ ದಾರದ ಬಲೆ ವನ್ಯಜೀವಿಗಳಿಗೆ ಕಂಟಕವಾಗಿ ಪರಿಣಿಸಿರುವುದನ್ನು ಮನಗಂಡ ಅರಣ್ಯ ಇಲಾಖೆ ಸಿಬ್ಬಂದಿ, ವನ್ಯಜೀವಿಗಳಿಗೆ ಮಾರಕವಾದ ಬಲೆಗಳ ತೆರವು ಕಾರ್ಯಾಚರಣೆ ನಡೆಸಿದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ ಕುಪ್ಪೆ ವನ್ಯಜೀವಿ ವಲಯಕ್ಕೆ ಸೇರಿದ ಕಬಿನಿ ಹಿನ್ನೀರು ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಇತ್ತೀಚೆಗೆ ಕಬಿನಿ ಹಿನ್ನೀರಿನ ಪ್ರದೇಶದ ಬಳಿ ಜಿಂಕೆಯೊಂದರ ಕೊಂಬಿಗೆ ಬಲೆ ಸಿಲುಕಿರುವುದು ಸಫಾರಿಗೆ ತೆರಳಿದ್ದ ಪ್ರವಾಸಿಗರ ಕಣ್ಣಿಗೆ ಬಿದ್ದಿತ್ತು. ಕೂಡಲೇ ಇದನ್ನು ಪಾರು ಮಾಡುವಂತೆ ಆಗ್ರಹಿಸಿದ್ದರು. ಹಿನ್ನೀರಿನ ಪ್ರದೇಶದಲ್ಲಿ ಮೀನುಗಾರಿಕೆಗೆ ಅಕ್ರಮವಾಗಿ ನೈಲಾನ್ ದಾರದ ಬಲೆ ಹಾಕುತ್ತಿರುವುದರಿಂದ ವನ್ಯಜೀವಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆಯೂ ಅರಣ್ಯ ಇಲಾಖೆ ಗಮನ ಸೆಳೆದಿದ್ದರು.

**ಬಲೆಯಿಂದ ಮುಕ್ತಿ:** ವನ್ಯಜೀವಿ ಪ್ರೇಮಿಗಳ ಒತ್ತಾಯಕ್ಕೆ ಮಣಿದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ಹಿರಿಯ ಅಧಿಕಾರಿಗಳ ಅನುಮತಿ ಪಡೆದು, ಮೀನಿನ ಬಲೆಯ ಉಂಡೆ ಕೊಂಬಿಗೆ ಸುತ್ತಿಕೊಂಡು ಓಡಾಡುತ್ತಿದ್ದ ಜಿಂಕೆಯನ್ನು ಜೂ.20ರಂದು ಕಾರ್ಯಾಚರಣೆ ನಡೆಸಿ, ಹಿಡಿದು ತೆರವುಗೊಳಿಸಿದ್ದರು. ಜಿಂಕೆ ಘಾಸಿಗೊಳ್ಳದಂತೆ ವೈಜ್ಞಾನಿಕವಾಗಿ ಪಶು ವೈದ್ಯಾಧಿಕಾರಿಗಳು ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ನಡೆಸಲಾಗಿತ್ತು. ನಂತರ ಕೊಂಬಿನಲ್ಲಿ ಸುತ್ತಿಕೊಂಡಿದ್ದ ಬಲೆಯನ್ನು ಬಿಡಿಸಿದರು. ಕೊಂಬಿನಿಂದ ಬಲೆ ತೆರವುಗೊಳಿಸುತ್ತಿದ್ದಂತೆ ಜಿಂಕೆ ಮರಳಿ ಕಾಡು ಹೊಕ್ಕಿತ್ತು.

**ಕಾರ್ಯಾಚರಣೆ:** ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಬಿದ್ದಿದ್ದ ಮೀನಿನ ಬಲೆಗಳ ತೆರವು ಕಾರ್ಯಾಚರಣೆಯನ್ನು ಡಿ.ಬಿ.ಕುಪ್ಪೆ ಆರ್‌ಎಫ್‌ಓ ಮಧು ನೇತೃತ್ವದಲ್ಲಿ ನಡೆಸಲಾಯಿತು. ಮಾಸ್ತಿಗುಡಿ ಉಪ ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಬಿನಿ ಹಿನ್ನೀರಿನ ಪ್ರದೇಶ, ಉದ್ಬೂರು ಕಳ್ಳಬೇಟೆ ತಡೆ ಶಿಬಿರ (ಎಪಿಸಿ)ಯಿಂದ ಮಾಸ್ತಿಗುಡಿವರೆಗೆ 8 ಕಿಮೀ ಅರಣ್ಯ ಇಲಾಖೆ ಬೋಟಿನ ಸಹಾಯದಿಂದ ಒಣ ಮರಗಳಿಗೆ ಸಿಕ್ಕಿಕೊಂಡ ಹಾಗೂ ನದಿಯ ದಡದಲ್ಲಿ ಬಿದ್ದ ಮೀನಿನ ಬಲೆಗಳನ್ನು ತೆರವುಗೊಳಿಸಿ ಅವುಗಳನ್ನು ಅರಣ್ಯ ಪ್ರದೇಶದಿಂದ ಹೊರಗೆ ತಂದು ವೈಜ್ಞಾನಿಕವಾಗಿ ವಿಲೇವಾರಿ ಮಾಡಿದ್ದಾರೆ.



ಶುಕ್ರವಾರ 23-06-2023

ಬೆಳ್ಳಿ ಬೆಳಕು

ಮೈಸೂರು ಮಿತ್ರ

● ಸತ್ಯಮೂರ್ತಿ ತೋಳಹುಣಸೆ

ಸಿನಿಮಾ ಪುರವಣಿ




## ಇಂದು ಬರುತ್ತಿದ್ದಾನೆ
# ರೋಡ್‌ಕಿಂಗ್

**ಕೊ**ರೊನಾ ನಂತರ ಇಂಟರ್‌ನೆಟ್ ಬಳಕೆ ಬಹಳ ಹೆಚ್ಚಾಗಿದೆ. ಈಗ ಹೆಚ್ಚಾಗಿ ಎಲ್ಲಾ ಕೆಲಸಗಳು ಆನ್‌ಲೈನ್‌ನಲ್ಲೇ ನಡೆಯುತ್ತಿದೆ. ಆದರೆ ಕೊರೊನಾ ಪೂರ್ವದಲ್ಲೇ ಹಾಲಿವುಡ್ ನಿರ್ದೇಶಕ ರಾಂಡಿಕೆಂಟ್ ಅವರು "ರೋಡ್‌ಕಿಂಗ್" ಕನ್ನಡ ಚಿತ್ರವನ್ನು ಸ್ಕೈಪ್ ಮೂಲಕ ನಿರ್ದೇಶಿಸಿ ಯಶಸ್ವಿಯಾಗಿದ್ದಾರೆ. ಸ್ಕೈಪ್ ಮೂಲಕ ನಿರ್ದೇಶನ ಮಾಡಿರುವ ಮೊದಲ ಕನ್ನಡ ಚಿತ್ರ ಇದಾಗಿದ್ದು, ಕುತೂಹಲಕಾರಿ ಕಥಾಹಂದರ ಹೊಂದಿರುವ ಆ ಚಿತ್ರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಚಿತ್ರದ ಬಿಡುಗಡೆ ಪೂರ್ವ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಚಿತ್ರತಂಡ ಒಂದಷ್ಟು ಮಾಹಿತಿ ಹಂಚಿಕೊಂಡಿತು. ಹಾಲಿವುಡ್‌ನ ಹೆಸರಾಂತ ನಿರ್ದೇಶಕ ರಾಂಡಿ ಕೆಂಟ್ ಅವರ ಬಳಿ ಈ ಚಿತ್ರವನ್ನು ನಿರ್ದೇಶನ ಮಾಡಿಸಬೇಕೆಂದು ಕೊಂಡು ಎಲ್ಲಾ ತಯಾರಿ ಮಾಡಿಕೊಳ್ಳಲಾಗಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಅವರ ವೀಸಾ ಸಮಸ್ಯೆಯಿಂದ ರಾಂಡಿ ಅವರು ಭಾರತಕ್ಕೆ ಬರಲಾಗಲಿಲ್ಲ. ಆಗ ಏನು ಮಾಡಬೇಕೆಂದು ಹೊಳೆಯಲಿಲ್ಲ. ಹೀಗೆ ಯೋಚಿಸುತ್ತಿದ್ದಾಗ ಸ್ಕೈಪ್ ಮೂಲಕ ನಿರ್ದೇಶನ ಮಾಡಿಸಿದರೆ ಹೇಗೆ? ಎಂದು ನನ್ನ ಮಿತ್ರ ಭುವನ್ ಬಳಿ ಹೇಳಿದೆ. ಆನಂತರ ಸ್ಕೈಪ್ ಮೂಲಕವೇ ರಾಂಡಿ ಅವರು ಅಮೇರಿಕಾದಿಂದ ಈ ಚಿತ್ರವನ್ನು ನಿರ್ದೇಶನ ಮಾಡಿದರು. ಹಲವು ಕಾರಣಗಳಿಂದ ಚಿತ್ರ ತೆರೆಗೆ ಬರುವುದು ತಡವಾಯಿತು. ಈಗ ಜೂನ್ 23ಕ್ಕೆ ಚಿತ್ರ ಬಿಡುಗಡೆಯಾಗಲಿದೆ. ನಾನೇ ಚಿತ್ರಕ್ಕೆ ಕಥೆ ಬರೆದಿದ್ದೇನೆ. ಅಲ್ಲದೆ ಚಿತ್ರದ ನಾಯಕನಾಗಿಯೂ ನಟಿಸಿದ್ದೇನೆ ಎಂದು ಚಿತ್ರದ ನಾಯಕ ನಟ ಮತೀನ್ ಹುಸೇನ್ ತಿಳಿಸಿದರು. ನಾನು ಹಾಲಿವುಡ್‌ನಲ್ಲಿ ಹದಿಮೂರು ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಸ್ಕೈಪ್ ಮೂಲಕ ಕನ್ನಡ ಚಿತ್ರವೊಂದನ್ನು ನಿರ್ದೇಶಿಸಿದ್ದು ನಿಜಕ್ಕೂ ನನಗೆ ಖುಷಿಯಾಗಿದೆ ಎಂದು ನಿರ್ದೇಶಕ ರಾಂಡಿ ಕೆಂಟ್ ಹೇಳಿದರು. ರೋಡ್‌ಕಿಂಗ್ ಚಿತ್ರದ ಕಥೆ ಚೆನ್ನಾಗಿದೆ. ಸದ್ಯದಲ್ಲೇ ರೋಡ್‌ಕಿಂಗ್ ಚಿತ್ರದ ಸೀಕ್ವೆಲ್ (ರೋಡ್‌ಕಿಂಗ್-2) ಆರಂಭಿಸುವುದಾಗಿ ನಿರ್ಮಾಪಕ ದಿಲೀಪ್‌ಕುಮಾರ್ ತಿಳಿಸಿದರು.

ರಾಂಡಿಕೆಂಟ್ ಅವರು ನಿರ್ದೇಶನ ಮಾಡಿದ ಪರಿಯನ್ನು ವಿಸ್ತಾರವಾಗಿ ಸಂಕಲನಕಾರ ರೋಡ್‌ಕಿಂಗ್ ಕ್ರೇಜಿಮೈಂಡ್ಸ್‌ನ ಶ್ರೀ ವಿವರಿಸಿದರು. ಇನ್ನು ಈ ಚಿತ್ರದಲ್ಲಿ ನಟಿಸಿರುವ ಡಾ.ಲೀಲಾಮೋಹನ್, ಹರೀಶ್‌ಕುಮಾರ್ ಹಾಗೂ ಭುವನ್‌ರಾಜ್ ಚಿತ್ರದ ಕುರಿತಂತೆ ಮಾತನಾಡಿದರು. ಚಿತ್ರದ ಹಾಡೊಂದನ್ನು ಹಾಡಿರುವ ಗಾಯಕ ಚಂದನ್ ಶೆಟ್ಟಿ ಸಹ ಹಾಜರಿದ್ದು ಚಿತ್ರತಂಡಕ್ಕೆ ಶುಭ ಕೋರಿದರು. ರನ್ ಆಂಟೋನಿ ಖ್ಯಾತಿಯ ನಟಿ ರುಕ್ಸಾರ್ ಈ ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.





# ಇಂದಿನಿಂದ 'ಬೇರ' ಬಿಡುಗಡೆ

**ಎಸ್**.ಎಲ್.ವಿ.ಕಲರ್ಸ್ ಲಾಂಛನದಲ್ಲಿ ದಿವಾಕರದಾಸ್, ನೆರ್ಲಾಜೆ ಹಾಗೂ ರಾಮ್‌ದಾಸ್ ಶೆಟ್ಟಿ ಅವರು ನಿರ್ಮಿಸಿರುವ, ಕಡಲತೀರದಲ್ಲಿ ನಡೆಯುವ ಕುತೂಹಲಕಾರಿ ಕಥಾಹಂದರ ಹೊಂದಿದ ಚಿತ್ರ 'ಬೇರ' ಇಂದಿನಿಂದ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಕಿರುತೆರೆಯಲ್ಲಿ ಹಿಟ್ ಧಾರಾವಾಹಿಗಳನ್ನು ನಿರ್ದೇಶಿಸುವ ಮೂಲಕ ತನ್ನದೇ ಆದ ಛಾಪು ಮೂಡಿಸಿರುವ ವಿನು ಬಳಂಜ ಅವರ ಪ್ರಥಮ ನಿರ್ದೇಶನದ ಚಿತ್ರ ಇದಾಗಿದ್ದು, ಈ ಚಿತ್ರದಲ್ಲಿ ನಟಿ ಹರ್ಷಿಕಾ ಪೂಣಚ್ಚ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಹಿರಿಯನಟ ದತ್ತಣ್ಣ, ಯಶ್ ಶೆಟ್ಟಿ, ಧವಳ್ ದೀಪಕ್, ದತ್ತಣ್ಣ, ಹರ್ಷ, ಅಶ್ವಿನ್ ಹಾಸನ್, ಚಿತ್ಕಲ ಬಿರಾದಾರ್, ಮಂಜುನಾಥ್ ಹೆಗಡೆ, ರಾಕೇಶ್‌ಮಯ್ಯ ಇತರರು ಅಭಿನಯಿಸಿದ್ದಾರೆ.

ತುಳು ಭಾಷೆಯಲ್ಲಿ 'ಬೇರ' ಎಂದರೆ ವ್ಯಾಪಾರ ಎಂದರ್ಥ. ಅಮಾಯಕ ಮನುಷ್ಯರನ್ನು ಮೆಟ್ಟಿಲಾಗಿ ಬಳಸಿಕೊಂಡು ಉಳ್ಳವರು ಹೇಗೆ ನಾಯಕರಾಗಿ ಬೆಳೆಯುತ್ತಾರೆ ಅನ್ನೋದರ ಮೇಲೆ ಈ ಚಿತ್ರದ ಕಥೆ ರೂಪಿಸಲಾಗಿದೆ. ಯಾವ ತಾಯಂದಿರ ಮಕ್ಕಳೂ ಇನ್ನೊಬ್ಬರಿಂದಾಗಿ ಸಾಯಬಾರದು. ಸಾವಿನ ವ್ಯಾಪಾರದಲ್ಲಿ ನಮ್ಮ ನಾಯಕರು ಯಾವ ರೀತಿ ವರ್ತಿಸುತ್ತಾರೆ, ಇಂಥ ಹಲವಾರು ವಿಷಯಗಳನ್ನು ತೆಗೆದುಕೊಂಡು ಈ ಚಿತ್ರವನ್ನು ನಿರೂಪಿಸಲಾಗಿದೆ. ಜೊತೆಗೆ ಸಮಕಾಲೀನ ಜೀವನದಲ್ಲಿ ಏನೇನು ಆಗುತ್ತೆ ಅಂತಲೂ ಚಿತ್ರದಲ್ಲಿ ಹೇಳಿದ್ದಾರೆ. ಸಲೀಂ ಎನ್ನುವ ಪಾತ್ರದಲ್ಲಿ ಯಶ್ ಶೆಟ್ಟಿ ಹಾಗೂ ವಿಷ್ಣು ಎಂಬ ಪಾತ್ರದಲ್ಲಿ ಹರ್ಷವರ್ಧನ ನಟಿಸಿದ್ದಾರೆ. ಅಮಾಯಕನಾಗಿದ್ದುಕೊಂಡೇ ಇನ್ನೊಬ್ಬರನ್ನು ಟಾರ್ಗೆಟ್ ಮಾಡುವ ಪಾತ್ರದಲ್ಲಿ ಧವಳ್ ದೀಪಕ್ ನಟಿಸಿದ್ದಾರೆ. ಈಗ ಮನುಷ್ಯ ಮನುಷ್ಯನನ್ನೇ ವ್ಯಾಪಾರ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ನಡೆಯುತ್ತಿರುವ ಹಾದಿ ಸರಿಯೋ ತಪ್ಪೋ ಅನ್ನುವುದು ತಿಳಿಯುವ ವೇಳೆಗೆ ಕಾಲ ಮಿಂಚಿಹೋಗಿರುತ್ತೆ. ವಿನು ಬಳಂಜ ಅವರು ತಮ್ಮ ಐಡಿಯಾಗಳನ್ನೆಲ್ಲ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದಾರೆ ಎಂದು ನಟ ಧವಳ್ ದೀಪಕ್ ಹೇಳಿದರು. ಸುಮಾರು ಎಂಭತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ 'ಬೇರ' ರಿಲೀಸಾಗುತ್ತಿದೆ. ಈ ಚಿತ್ರದಲ್ಲಿ ನಾಯಕ, ನಾಯಕಿ ಅಂತ ಯಾರೂ ಇಲ್ಲ. ಕಥೆಯಲ್ಲಿ ಬರುವ ಎಲ್ಲಾ ಪಾತ್ರಗಳು ಮುಖ್ಯವಾಗಿವೆ ಎಂದು ನಿರ್ದೇಶಕ ವಿನು ಬಳಂಜ ಹೇಳಿದ್ದಾರೆ. ನಾಯಕಿ ಹರ್ಷಿಕಾ ಪೂಣಚ್ಚ ಅವರಿಗೆ ಚಿತ್ರದಲ್ಲಿ ಎರಡು ಶೇಡ್ ಇರುವ ಪಾತ್ರವಿದೆ. ರಾಜಶೇಖರ್ ಚಿತ್ರದ ಛಾಯಾಗ್ರಹಕರಾಗಿದ್ದು, ಮಣಿಕಾಂತ ಕದ್ರಿ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.





## 'ಅಗ್ರಸೇನಾ' ಈ ವಾರ ತೆರೆಗೆ

**ಮು**ರುಗೇಶ್ ಕಣ್ಣಪ್ಪ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ 'ಅಗ್ರಸೇನಾ' ಈ ವಾರ ತೆರೆ ಕಂಡಿದೆ. ಶ್ರೀಮತಿ ಮಮತಾ ಜಯರಾಮರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಹಳ್ಳಿ ಹಾಗೂ ನಗರದಲ್ಲಿ ಡಬಲ್ ಟ್ರ್ಯಾಕ್‌ನಲ್ಲಿ ಸಾಗುವ ಕಥಾಹಂದರ ಈ ಚಿತ್ರದಲ್ಲಿದ್ದು, ತಂದೆ-ಮಗನ ಸಂಬಂಧದ ಕಥೆ ಒಂದು ಕಡೆಯಾದರೆ, ನಾಯಕ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಹೇಗೆ ಹೋರಾಡುತ್ತಾನೆ ಎನ್ನುವುದು ಮತ್ತೊಂದು ಟ್ರ್ಯಾಕ್‌ನಲ್ಲಿ ಸಾಗುತ್ತದೆ.

ಆಕ್ಷನ್ ಫ್ಯಾಮಿಲಿ, ಲವ್, ಸೆಂಟಿಮೆಂಟ್ ಎಲ್ಲಾ ರೀತಿಯ ಅಂಶಗಳನ್ನು ಒಳಗೊಂಡ ಈ ಚಿತ್ರದಲ್ಲಿ ಅಮರ್ ವಿರಾಜ್ ಹಾಗೂ ಅಗಸ್ತ್ಯ ಬೆಳಗೆರೆ ಇಬ್ಬರು ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ರಚನಾ ದಶರಥ್, ಭಾರತಿ ಹೆಗ್ಡೆ ನಾಯಕಿಯರಾಗಿ ನಟಿಸಿದ್ದಾರೆ. ಅಲ್ಲದೆ ಚಿತ್ರದಲ್ಲಿ ಹಿರಿಯನಟ ರಾಮಕೃಷ್ಣ ಅವರು ಗ್ರಾಮದ ಮುಖಂಡ ಸೂರಪ್ಪ ಹಾಗೂ ನಾಯಕನ ತಂದೆಯ ಪಾತ್ರ ನಿರ್ವಹಿಸಿದ್ದು, ಇದು ಅವರ 200ನೇ ಚಿತ್ರ ಎನ್ನುವುದು ವಿಶೇಷ.

# ಸಿನಿಪದಬಂಧ-479



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______





ಉಮ್ಮತ್ತೂರು ಇಂದುಶೇಖರ್

ಮೊ.9880820462

### ಸಿನಿ ಪದಬಂಧ 478ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಸೂ | ಪ | ರ್ | ■ | ತಾ | ಯಿ | ಯ | ಮ | ಡಿ | ಲ | ಲ್ಲಿ |
| ತ್ರ | ■ | ■ | ■ | ರ | ■ | ■ | ■ | ವಿ | ■ | ■ |
| ದ | ಯಾ | ನಾ | ಯ | ಕ್ | ■ | ಚಿ | ■ | ರಾ | ■ | ನಾ |
| ಬೊ | ■ | ಯ | ■ | ■ | ನ | ನ್ನ | ರೋ | ಜಾ | ನೀ | ನೇ |
| ಬೆ | ಳ್ಳಿ | ಕಾ | ಲುಂ | ಗ | ರ | ■ | ■ | ರಾಂ | ■ | ನೂ |
| ■ | ■ | ■ | ಗಿ | ■ | ಹಂ | ■ | ಗು | ■ | ■ | ■ |
| ಸ್ಮೈ | ■ | ಡ್ರೈ | ■ | ■ | ತ | ವ | ರಿ | ನ | ಸಿ | ರಿ |
| ಕ | ನ | ಸಿ | ನ | ಲೋ | ಕ | ■ | ■ | ಜೇ | ■ | ಯ |
| ಲ್ | ■ | ಬೋ | ■ | ಕ | ■ | ಕ | ಬೀ | ರ್ | ಲಾ | ಲ್ |
| ■ | ■ | ಪ | ■ | ■ | ■ | ರು | ■ | ■ | ■ | ಸ್ವಾ |
| ಕಾ | ಮ | ಣ್ಣ | ನ | ಮ | ಕ್ಕ | ಳು | ■ | ರೈ | ಡ | ರ್ |

ವಿಜೇತರು: ಎಂ.ತನುಶ್ರೀ, ತನುಶ್ರೀ ಬುಕ್‌ಸೆಂಟರ್, ಜಿ.ಎಂ.ಸರ್ಕಲ್, ಹಾಡ್ಲಿ ಪೋಸ್ಟ್, ಮಳವಳ್ಳಿ ತಾಲೂಕು. 571475

**ಎಡದಿಂದ ಬಲಕ್ಕೆ**

1.ಮೊದಲನೇಯದರಿಂದ ಕೊನೆಯರಡನ್ನು ಅದುಮಿ ಉಳಿದೆರಡನ್ನು ಮೇಲೆತ್ತಿದರೆ "ಗೆಲುವು" ನಿಮ್ಮದೇ! 3

2."ಜಿಂಕೆ ಮರಿನಾ ನೀ ಜಿಂಕೆ ಮರಿನಾ.... ", ಗೀತೆಯ ಚಿತ್ರ 7

4.ಕುಮಾರತ್ರಯರೊಬ್ಬರ ಪುತ್ರ ಲೋಕ ಜಯಿಸಿದಾದರೂ ಆತ ನೆನಪಷ್ಟೇ! 5

8.ಡಿ.ಶಂಕರ್‌ಸಿಂಗ್ ನಿರ್ದೇಶನದಿ ಪ್ರತಿಮಾದೇವಿ ಮನಸ್ಸು ಅಸ್ಥಿರ! 6

9.ಸೂರ್ಯವಂಶದ ದೊರೆ 'ರಾಜ್‌ಕುಮಾರ್' ನಿಷ್ಠೆ, ಪ್ರಾಮಾಣಿಕತೆಗೆ ಹೆಸರುವಾಸಿ! 6

14.ಮುಂಜಾನೆಯ ಮಂಜು ಚಿತ್ರದ ಹಾಡಿನಲ್ಲಿ ರತಿ'ಪತಿ'ಗೆ ಮುನಿಸೇ! 6

17.ಕನ್ನಡದ ಈ ಚಿತ್ರ "ಕಂಜಿ ವಿರುಧ್ ಕಂಜಿ" ಗುಜರಾತಿ ಕತೆ ಆಧರಿಸಿದೆ 6

19.ಮನವ ಕಾಡುವ ರೂಪಸಿಗಾಗಿ ಅನಂತ್‌ನಾಗ್ ಕಂಡ "ಪಥ" 5

20.'ಬಂಧನ' ಮುಗಿಯದಿರಲಿ ಎಂದು ವಿಷ್ಣು ಕಣ್ಣೀರಲಿ ಬರೆದ ಧೀರ್ಘಕತೆ ! 7

21.ಗಣೇಶ್-ಅರ್ಚನಾ ಗುಪ್ತ ಅಭಿನಯದ ಚಿತ್ರ 3

**ಮೇಲಿನಿಂದ ಕೆಳಕ್ಕೆ**

1.ಅದೃಷ್ಟವನ್ನು ಎದುರಿಸುವ ರಾಜನ ಕಥೆಯಲ್ಲಿ ರಾಜ್‌ಕುಮಾರ್-ಲೀಲಾವತಿ ಅಭಿನಯವಿದೆ 5

2." ಬಾರಾ ಸನಿಹಕೆ ಬಾರಾ.....", ಹಾಡಿನ ಗಾಯಕಿ 3

3. ರಾಜ್‌ಕುಮಾರ್-ಜಯಂತಿ ಅಭಿನಯಕ್ಕೆ ವೈ.ಆರ್.ಸ್ವಾಮಿ ನಿರ್ದೇಶನವಿದೆ 5

5. ಎಡಕಲ್ಲು ಗುಡ್ಡದ ಮೇಲೆ ಜಯಂತಿಗೆ ಕಾಡಿದ ವೇದನೆ 3

6.ಗುಟ್ಟಿನಿಂದ ಪಡೆಯುವ ಹಣ ಕ್ರಮ ಮೀರಿದೆ 2

7.ಕುಲಟೆ, ವೇಶ್ಯೆಗೆ ಹೀಗೊಂದು ಪದ ಬಬ್ರುವಾಹನನಿಗೂ ಗೊತ್ತು! 3

8.ಶಶಿಯ ಬೆಳಕನ್ನು ಪ್ರೀತಿಸುವ ಬೆಳದಿಂಗಳ ಹಕ್ಕಿ 5

10.ಶಿವಣ್ಣ, ವಿಜಯರಾಘವೇಂದ್ರ, ರಾಧಿಕಾ ಅಭಿನಯದ ಚಿತ್ರ 2

11.ಸಂಗ್ರಾಮದಲ್ಲೂ ನೀರವತೆ ಆವರಿಸಿದೆ 2

12.ನೈದಿಲೆಯಂತ ನಟಿ ಮುದ ನೀಡುತ್ತಿದ್ದಾಳೆ 3

13." _ _ _ _ _ ವು ಕನ್ನಡ ನಾಡು.....", 5

15.ಮಮತೆಯ 'ಉಡಿ' 3

16.ನಟ ರಾಕೇಶ್ "ಕುಖ್ಯಾತ" 5

18.ರಾಜನರಸಿಂಹ ಚಿತ್ರದ ನಾಯಕಿ 2

19. 'ನಾಗ'ನ ಬಿಸಿಲ ನಾಡು 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

## 'ಬ್ರಾಹ್ಮಿನ್ಸ್ ಕೆಫೆ' ಯಾರ ಭಾವನೆಗೂ ಧಕ್ಕೆ ತರಲ್ಲ!

**ಜೂ**ನ್ ಮೊದಲ ವಾರದಿಂದ ಸಿರಿಕನ್ನಡ ವಾಹಿನಿಯಲ್ಲಿ ಸಂಜೀವ್ ತಗಡೂರು ನಿರ್ದೇಶನದ 'ಬ್ರಾಹ್ಮಿನ್ಸ್ ಕೆಫೆ' ಧಾರಾವಾಹಿ ಪ್ರಸಾರವಾಗುತ್ತಿದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ, ಇಮೇಲ್ ಹಾಗೂ ಫೋನ್ ಕಾಲ್‌ಗಳ ಮೂಲಕ ಕೆಲವರು ನಮ್ಮ ಜನಾಂಗವನ್ನು ನಿಂದಿಸುವ ಕೆಲವು ಸನ್ನಿವೇಶಗಳು ಧಾರಾವಾಹಿಯಲ್ಲಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಲು ತಂಡ ಪತ್ರಿಕಾಗೋಷ್ಠಿ ಆಯೋಜಿಸಿತ್ತು. ಕಳೆದ 25 ವರ್ಷಗಳಿಂದ ಕಿರುತೆರೆ ನೋಡುಗರ ಮನಸನ್ನು ಅರಿತಿದ್ದೇನೆ. 'ಬ್ರಾಹ್ಮಿನ್ಸ್ ಕೆಫೆ' ಧಾರಾವಾಹಿಯಲ್ಲಿ ಬ್ರಾಹ್ಮಣರನ್ನು ಅವಮಾನಿಸುವ ಯಾವುದೇ ಸನ್ನಿವೇಶಗಳಿಲ್ಲ. ಕೆಲವರು ಪೂರ್ತಿ ಧಾರಾವಾಹಿ ನೋಡದೆ, ಸಾಮಾಜಿಕ ಜಾಲತಾಣಗಳಲ್ಲಿ ಬರುವ ತುಣುಕುಗಳನ್ನು ನೋಡಿ, ನಮ್ಮ ಜನಾಂಗಕ್ಕೆ ಅವಮಾನ ಮಾಡುತ್ತಿದ್ದೀರಾ ಎಂದು ಹೇಳುತ್ತಿದ್ದಾರೆ. ಕರೆ ಮಾಡಿ, ನೀವು ಈ ರೀತಿ ಮಾಡುತ್ತಿರುವುದು ತಪ್ಪು ಎನ್ನುತ್ತಿದ್ದಾರೆ. ಆದರೆ ಖಂಡಿತವಾಗಿ ಯಾರ ಮನಸ್ಸಿಗೂ ನೋವುಂಟು ಮಾಡುವ, ಯಾರದೇ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶ ನಮಗಿಲ್ಲ. ಪೂರ್ತಿ ಧಾರಾವಾಹಿ ನೋಡದೆ ಕೆಲವರು ಮಾಡುತ್ತಿರುವ ಆರೋಪವಷ್ಟೇ ಇದು. ಈವರೆಗಿನ ಸಂಚಿಕೆಯಲ್ಲೂ ಯಾವ ಜನಾಂಗವನ್ನೂ ನಿಂದಿಸುವ ಸನ್ನಿವೇಶಗಳು ಇರಲಿಲ್ಲ. ಮುಂದಿನ ಸಂಚಿಕೆಗಳಲ್ಲೂ ಇರುವುದಿಲ್ಲ ಎಂದು ನಿರ್ದೇಶಕ ಸಂಜೀವ್ ತಗಡೂರು ಸ್ಪಷ್ಟನೆ ನೀಡಿದ್ದಾರೆ.

# ಕಾಂಗ್ರೆಸ್ಸಿನ ಗ್ಯಾರಂಟಿಗಳು ಅವ್ಯವಸ್ಥೆಯಿಂದ ಕೂಡಿವೆ

## ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಆರೋಪ

ಕೆ.ಆರ್. ನಗರ, ಜೂ.22 – ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸುತ್ತಿರುವ ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಅನುಕೂಲವಾಗಬೇಕೆ ಹೊರತು ಗೊಂದಲವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ ಮಾಡಿದ್ದಾರೆ.

ಕೆ.ಆರ್.ನಗರ ಪಟ್ಟಣದಲ್ಲಿ ಮಾಜಿ ಸಚಿವ ದಿ.ಎಸ್.ನಂಜಪ್ಪ ಅವರ ಮನೆಗೆ ಭೇಟಿ ನೀಡಿ ಲಲಿತಮ್ಮ ನಂಜಪ್ಪ ಅವರ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳು ಅವ್ಯವಸ್ಥೆಯಿಂದ ಕೂಡಿವೆ ಎಂದು ದೂರಿದರು.



ಕೆ.ಆರ್.ನಗರ ಪಟ್ಟಣದ ಮಾಜಿ ಸಚಿವ ದಿ.ಎಸ್.ನಂಜಪ್ಪ ಅವರ ಮನೆಗೆ ಭೇಟಿ ನೀಡಿದ್ದ ಜಿ.ಡಿ.ಹರೀಶ್‌ಗೌಡರು ಲಲಿತಮ್ಮ ನಂಜಪ್ಪ ಅವರಿಂದ ಸನ್ಮಾನ ಸ್ವೀಕರಿಸಿದರು.

ಬಡವರು ಮತ್ತು ಮಹಿಳೆಯರ ಅನುಕೂಲಕ್ಕೆ ಈ ಯೋಜನೆಗಳನ್ನು ಜಾರಿಗೊಳಿಸುವ ಮೊದಲು ಅದಕ್ಕೆ ಬೇಕಾದ ಪೂರಕ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಗ್ರಾಮೀಣ ಪ್ರದೇಶದಲ್ಲಿ ಸರಿಯಾದ ಬಸ್ ಸೌಲಭ್ಯವಿಲ್ಲ. ಆದರೂ ಶಕ್ತಿ ಯೋಜನೆ ಜಾರಿಗೊಳಿಸಿ ಮಹಿಳೆಯರು ಪರದಾಡುವಂತೆ ಮಾಡಿದ್ದಾರೆ. ವಿದ್ಯುತ್ ಬಳಕೆ ಶುಲ್ಕವನ್ನು ಯರ್ರಾಬಿರ್ರಿ ಏರಿಕೆ ಮಾಡಿ ಜನಸಾಮಾನ್ಯರಿಗೆ ತೊಂದರೆ ನೀಡುತ್ತಿರುವುದು ಸರಿಯಲ್ಲ ಎಂದರು.

> ನಮ್ಮ ತಂದೆ ಮತ್ತು ನನ್ನನ್ನು ಏಕ ಕಾಲದಲ್ಲಿ ವಿಧಾನಸಭೆಗೆ ಆಯ್ಕೆ ಮಾಡಿದ ಚಾಮುಂಡೇಶ್ವರಿ ಹಾಗೂ ಹುಣಸೂರು ಕ್ಷೇತ್ರದ ಜನತೆಗೆ ಮತ್ತು ನಮ್ಮ ಪಕ್ಷದ ನಾಯಕರಿಗೆ ಧನ್ಯವಾದ ಸಮರ್ಪಿಸುತ್ತೇನೆ. ನಿರೀಕ್ಷೆಗೂ ಮೀರಿ ಅಭಿವೃದ್ಧಿ ಕೆಲಸ ಮಾಡಿ ಹುಣಸೂರು ಕ್ಷೇತ್ರದ ಮತದಾರರ ಋಣ ತೀರಿಸುವೆ.
> –ಜಿ.ಡಿ.ಹರೀಶ್‌ಗೌಡ, ಶಾಸಕ

ಮೈಮುಲ್ ಅಧ್ಯಕ್ಷ ಪ್ರಸನ್ನ ಮಾತನಾಡಿ, 'ಕೆಎಂಎಫ್ ನೂತನ ಅಧ್ಯಕ್ಷ ಭೀಮಾನಾಯಕ್ ಅವರಿಗೆ ಅಭಿನಂದನೆ ಸಲ್ಲಿಸುವೆ. ಕೆಎಂಎಫ್ ನೂತನ ಅಧ್ಯಕ್ಷರು ಹಾಗೂ ಸಹಕಾರ ಸಚಿವರು ಹಾಲಿನ ದರ ಏರಿಕೆ ಮಾಡುವ ಸುಳಿವು ನೀಡಿದ್ದು, ಹಾಲು ಉತ್ಪಾದಕರಿಗೆ ಇದರಿಂದ ಲಾಭವಾಗುವಂತೆ ಕ್ರಮ ಕೈಗೊಳ್ಳಬೇಕು. ಇದು ನಮ್ಮ ಉದ್ದೇಶ. ಮೈಮುಲ್‌ನಿಂದ ರೈತರು ಪೂರೈಸುವ ಹಾಲಿನ ದರ ಹೆಚ್ಚಿಸಿಕೊಂಡು ಬಂದಿದ್ದೇವೆ ಎಂದೂ ಕಡಿಮೆ ಮಾಡಿಲ್ಲ ಎಂದರು.

ನಂಜಪ್ಪ ಅವರ ಹಿರಿಯ ಪುತ್ರ ಕೆ.ಎನ್. ದಿನೇಶ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಸಾಲಿಗ್ರಾಮ ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಬೊಗನಹಳ್ಳಿ ಪ್ರಸನ್ನ, ಮೈಮುಲ್ ನಿರ್ದೇಶಕ ಎ.ಟಿ. ಸೋಮಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು ಇತರರಿದ್ದರು.

# ಇಂದು ಮಿರ್ಲೆ ಗ್ರಾಮದ ಹುಣಸಮ್ಮ ದೇವಾಲಯದಲ್ಲಿ ವಿಶೇಷ ಪೂಜೆ

ಭೇರ್ಯ, ಜೂ.22– ಮೊದಲ ಆಷಾಢ ಶುಕ್ರವಾರವಾದ ನಾಳೆ (ಜೂ.23) ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಗ್ರಾಮ ದೇವತೆ ಹುಣಸಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಲಿದೆ.



ಹುಣಸಮ್ಮ ದೇವಿಯ ಅರ್ಚಕ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆಯುವ ಆಷಾಢ ಮಾಸದ ಪೂಜೆಯಲ್ಲಿ ಬೆಳಗ್ಗೆ ಪಂಚಾಮೃತ ಅಭಿಷೇಕ, ನಂತರ ದೇವಿಗೆ ವಿವಿದ ಬಗೆಯ ಹೂವುಗಳಿಂದ ಆಲಂಕರಿಸಿದ ನಂತರ ಮಹಾಮಂಗಳಾರತಿ ನೆರವೇರಿಸಿ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಭಕ್ತರಿಗೆ ವಿಶೇಷ ಪ್ರಸಾದ ಸಿದ್ದಪಡಿಸಲಾಗುತ್ತಿದೆ. ಆಷಾಢ ಮಾಸ ಬಂತೆಂದರೆ ಸಾಕು ಮಿರ್ಲೆ ಗ್ರಾಮದ ಗ್ರಾಮ ದೇವತೆ ಹುಣಸಮ್ಮ ದೇವಾಲಯದಲ್ಲಿ ಹಬ್ಬದ ಸಡಗರ ಸಂಭ್ರಮ ಮನೆ ಮಾಡುತ್ತದೆ. ಕಾರಣ ಆಷಾಢಮಾಸದಲ್ಲಿ ಹೆಣ್ಣು ದೇವತೆಗಳನ್ನು, ಅದರಲ್ಲೂ ಶಕ್ತಿ ದೇವತೆಗಳನ್ನು ಪೂಜಿಸಿದರೆ ಒಳ್ಳೆಯದಾಗುತ್ತದೆ ಎಂಬುದು ಪ್ರತೀತಿ. ಹೀಗಾಗಿ ಆಷಾಢದಲ್ಲಿ ವಿವಿಧ ಗ್ರಾಮಗಳಿಂದ ಹಾಗೂ ಹೊರಗಿನಿಂದ ಭಕ್ತರು ಆಗಮಿಸಿ ಹುಣಸಮ್ಮ ದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಈ ಪೂಜೆಗಾಗಿ ಬರುವ ಭಕ್ತರಿಗೆ ಪ್ರಸಾದ ವಿತರಿಸಲಾಗುವುದು ಎಂದು ಧರ್ಮದರ್ಶಿ ಎಂ.ಎಲ್.ಲೋಕೇಶ್ ಮೈಸೂರು ಮಿತ್ರನಿಗೆ ತಿಳಿಸಿದ್ದಾರೆ.

# ಮೀನಿನ ಬಲೆಯಿಂದ ಜಿಂಕೆಗೆ ಮುಕ್ತಿ

### ಕೊಂಬಿನಲ್ಲಿದ್ದ ಬಲೆ ತೆರವುಗೊಳಿಸಿದ ಅರಣ್ಯ ಸಿಬ್ಬಂದಿ

ಹೆಚ್.ಡಿ.ಕೋಟೆ, ಜೂ.22– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ. ಕುಪ್ಪೆ ವನ್ಯಜೀವಿ ವಲಯದ ಕಬಿನಿ ಹಿನ್ನೀರಿನಲ್ಲಿ ಮೀನಿನ ಬಲೆಗೆ ಸಿಲುಕಿ ಪರದಾಡುತ್ತಿದ್ದ ಜಿಂಕೆಗೆ ಕೊನೆಗೂ ಮೀನಿನ ಬಲೆಯಿಂದ ಮುಕ್ತಿ ಸಿಕ್ಕಿದೆ. ಜಿಂಕೆ ಕೊಂಬಿಗೆ ಸಿಲುಕಿದ್ದ ಮೀನಿನ ಬಲೆಯನ್ನು, ತೆರವು ಮಾಡುವಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಯಶಸ್ವಿಯಾಗಿದ್ದು, ಇದರಿಂದ ಜಿಂಕೆ ನೆಮ್ಮದಿಯಿಂದ ಕಾಡಿನತ್ತ ತೆರಳಿದೆ.



ತಾಲೂಕಿನ ಡಿ.ಬಿ.ಕುಪ್ಪೆ ವಲಯದಲ್ಲಿ, ಕೆಲ ದಿನಗಳ ಹಿಂದೆ ಜಿಂಕೆಯೊಂದು ನೀರು ಕುಡಿಯಲು ಹೋದ ಸಂದರ್ಭದಲ್ಲಿ ಮೀನುಗಾರರು ಅಲ್ಲೆ ಬಿಟ್ಟಿದ್ದ ಮೀನಿನ ಬಲೆ ಅದರ ಕೊಂಬಿಗೆ ಸಿಲುಕಿಸಿಕೊಂಡು, ಆತಂಕದಿಂದ ಓಡಾಡುತ್ತಿತ್ತು. ಇದು ಸಫಾರಿ ವೇಳೆ ಪ್ರವಾಸಿಗರ ಕ್ಯಾಮೆರಾ ಕಣ್ಣಿಗೆ ಬಿದ್ದಿತ್ತು.

ಈ ಕುರಿತು 'ಮೈಸೂರು ಮಿತ್ರ' ಸಚಿತ್ರ ವರದಿ ಪ್ರಕಟಿಸಿತ್ತು. ಕೂಡಲೇ ಎಚ್ಚೆತ್ತ ಅರಣ್ಯ ಇಲಾಖೆಯ ಸಿಬ್ಬಂದಿ, ಜಿಂಕೆಗಾಗಿ ಶೋಧ ನಡೆಸಿತ್ತು. ಮೀನಿನ ಬಲೆ ಸಿಕ್ಕಿಸಿಕೊಂಡು ಓಡಾಡುತ್ತಿದ್ದ ಜಿಂಕೆಯನ್ನು ಪತ್ತೆ ಹಚ್ಚಿದ ಅರಣ್ಯ ಸಿಬ್ಬಂದಿ ಅದನ್ನು ಸೆರೆ ಹಿಡಿದು ಮೀನಿನ ಬಲೆಯನ್ನು ತೆರವುಗೊಳಿಸಿ ಸುರಕ್ಷಿತವಾಗಿ ಅರಣ್ಯಕ್ಕೆ ಬಿಟ್ಟಿದ್ದಾರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್. ರಂಗಸ್ವಾಮಿ, ಪಶುವೈದ್ಯಾಧಿಕಾರಿ ಡಾ.ಎಚ್.ರಮೇಶ್, ವಲಯ ಅರಣ್ಯಾಧಿಕಾರಿ ಕೆ.ಎಲ್.ಮಧು ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಅವ್ಯವಸ್ಥೆಯ ಆಗರವಾಗಿರುವ ಸರಗೂರು ಪಟ್ಟಣ

## ಲೈಟಿಲ್ಲ, ನೀರಿಲ್ಲ, ಚರಂಡಿಯಂತೂ ಇಲ್ಲವೇ ಇಲ್ಲ, ಹೊಂದಾಣಿಕೆಯೂ ಇಲ್ಲ

ಸರಗೂರು, ಜೂ.22– ಸರಗೂರು ಪಟ್ಟಣ ಪಂಚಾಯಿತಿ ಅವ್ಯವಸ್ಥೆಯಿಂದ ಕೂಡಿದ್ದು, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸದಸ್ಯರ ಗಮನಕ್ಕೂ ತಾರದೆ ಏಕಪಕ್ಷೀಯ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ಪಟ್ಟಣ ಪಂಚಾಯಿತಿ ಸದಸ್ಯ ಎಸ್.ಎಲ್. ರಾಜಣ್ಣ ಆಪಾದಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣ ಪಂಚಾಯಿತಿಯಲ್ಲಿ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಯಾವುದೇ ಚರ್ಚೆಗಳು ನಡೆಯುತ್ತಿಲ್ಲ. ಪಟ್ಟಣ ಪಂಚಾಯಿತಿಯ ಚುನಾವಣೆ ನಡೆದು ಎರಡು ವರ್ಷ ಕಳೆದಿದ್ದರೂ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಬೀದಿ ದೀಪಗಳು ಹದಗೆಟ್ಟಿದೆ. ಶುದ್ಧ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ. ರಸ್ತೆ, ಒಳಚರಂಡಿ ಸೇರಿದಂತೆ ಸಾಕಷ್ಟು ಮೂಲಸೌಕರ್ಯಗಳ ಕೊರತೆಯಿದ್ದು, ಈ ಸಮಸ್ಯೆಗಳನ್ನು ಪರಿಹರಿಸಲು ಪಟ್ಟಣ ಪಂಚಾಯಿತಿಯಲ್ಲಿ ಹೊಂದಾಣಿಕೆಯ ಕೊರತೆ ಇದೆ ಎಂದು ಆರೋಪಿಸಿದರು.

ಪಟ್ಟಣ ಪಂಚಾಯಿತಿಯ ಅಧಿಕಾರಿಗಳೂ ಕೂಡ ಸರಿಯಾದ ಸಮಯಕ್ಕೆ ಕಚೇರಿಗೆ ಬರುತ್ತಿಲ್ಲ. ಪಂಚಾಯಿತಿಯ ಕೆಲ ಸಿಬ್ಬಂದಿಗೆ ವರ್ಷದಿಂದ ಸಂಬಳ ನೀಡಿಲ್ಲ. ಪಟ್ಟಣದ ಪೌರಕಾರ್ಮಿಕರಿಗೆ ಸಾಧನ ಸಲಕರಣೆಗಳಿಲ್ಲದೆ ಕೆಲಸ ಮಾಡಲು ತೊಂದರೆಯಾಗಿದೆ. ನೀರೆತ್ತುವ ಮೋಟಾರ್ ಕೆಟ್ಟು 6 ತಿಂಗಳಾದರೂ ಅದನ್ನು ರಿಪೇರಿ ಮಾಡಿಸಲಾಗಿಲ್ಲ ಎಂಬಿತ್ಯಾದಿ ಸಮಸ್ಯೆಗಳ ಕುರಿತು ದೂರಿದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ.ಜೂ.22– ತಾಲೂಕು ನಾಯಕ ಸಂಘದ ಆಶ್ರಯದಲ್ಲಿ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತಾಲೂಕಿನ ನಾಯಕ ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತಾಲೂಕು ನಾಯಕ ಸಂಘ, ತಾಲೂಕು ನಾಯಕ ನೌಕರರ ಸಂಘ ಹಾಗು ತಾಲೂಕು ನಾಯಕ ನೌಕರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ.

ಪ್ರತಿಭಾ ಪುರಸ್ಕಾರ ಪಡೆಯಲು ಅರ್ಹರಾಗಿರುವ ಶೇ.85 ರಷ್ಟು ಅಂಕ ಪಡೆದ ನಾಯಕ ಜನಾಂಗದ ವಿದ್ಯಾರ್ಥಿಗಳು ತಮ್ಮ ಸ್ವ ವಿಳಾಸ ಹಾಗೂ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರದ ನಕಲು ಪ್ರತಿ ಧೃಢೀಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಮಹರ್ಷಿ ವಾಲ್ಮೀಕಿ ಸ್ಕೂಲ್, ತಿ.ನರಸೀಪುರ ಟೌನ್ ಈ ವಿಳಾಸಕ್ಕೆ ಜು.10ರ ಒಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ 8050018240 ಮೊಬೈಲ್ ಸಂಖ್ಯೆ ಸಂಪರ್ಕಿಸಲು ಕೋರಲಾಗಿದೆ.

# ಹೆಚ್.ಡಿ. ಕೋಟೆಯಲ್ಲಿ ಆದಿವಾಸಿಗಳ ಪ್ರತಿಭಟನೆ



ಹೆಚ್.ಡಿ.ಕೋಟೆ ಜೂ22– ಮೂಲ ಸೌಕರ್ಯಗಳು ಮತ್ತು ಅರಣ್ಯ ಹಕ್ಕು ಕಾಯ್ದೆ–2006 ಮತ್ತು 2007 ತಿದ್ದುಪಡಿ ಹಾಗೂ ಹೈ–ಕೋರ್ಟ್ ತೀರ್ಪಿನಂತೆ ಪುನರ್ವಸತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ತಾಲೂಕು ಒಡೆಯನ ಸಂಘಗಳ ಒಕ್ಕೂಟ ಮತ್ತು ಬುಡಕಟ್ಟು ಕೃಷಿಕರ ಸಂಘದ ವತಿಯಿಂದ ತಾಲೂಕು ಆಡಳಿತ ಸೌಧದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಆದಿವಾಸಿಗಳ ಸಮುದಾಯದ 120 ಹಾಡಿಗಳಲ್ಲಿ, ಜೇನುಕುರುಬ, ಬೆಟ್ಟಕುರುಬ (ಕಾಡು ಕುರುಬ), ಸೋಲಿಗ, ಯೆರವ, ಪಂಜರಿ ಯೆರವ ಮತ್ತು ಪಣಿ ಯೆರವ ಕುಟುಂಬಗಳು ವಾಸಿಸುತ್ತಿದ್ದು, ಮೂಲ ಸೌಕರ್ಯಗಳಾದ ವಾಸಿಸಲು ಮನೆ, ಕುಡಿಯುವ ನೀರು, ಸಮುದಾಯ ಭವನ, ಅಂಗನವಾಡಿ ಕೇಂದ್ರ, ರಸ್ತೆ ಚರಂಡಿ, ಮನೆ ಮತ್ತು ಬೀದಿಗಳಿಗೆ ವಿದ್ಯುತ್ ದೀಪ ಅಳವಡಿಕೆ, ನಿವೇಶನ ಹಕ್ಕು ಪತ್ರ, ಶೌಚಾಲಯ, ಆಹಾರದ ಪಡಿತರ ಚೀಟಿ, ನರೇಗಾ ಕೆಲಸದ ಗುರುತಿನ ಚೀಟಿ, ಆಧಾರ್ ಕಾರ್ಡ್, ಆರೋಗ್ಯದ ಕಾರ್ಡ್, ಪೌಷ್ಠಿಕ ಆಹಾರದ ಕಾರ್ಡ್, ವೃದ್ಯಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ಗರ್ಭಿಣಿಯರು ಹಾಗೂ ಭಾಣಂತಿಯರಿಗೆ ಆರೋಗ್ಯದ ಭತ್ಯೆ, ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗ ಮಾಡಲು ಸಹಾಯಧನ ಇನ್ನು ಹಲವು ಸೌಕರ್ಯಗಳನ್ನು ಅನುಷ್ಠಾನಗೊಳಿಸಿ ಕೊಡಬೇಕು ಎಂದು ಘೋಷಣೆ ಕೂಗುವುದರ ಮೂಲಕ ಪ್ರತಿಭಟನೆ ನಡೆಸಿದರು.

ಈ ವೇಳೆ ರಾಜ್ಯ ಮೂಲ ಆದಿವಾಸಿ ವೇದಿಕೆ ಸಂಯೋಜಕ ವಿಜಯ್ ಕುಮಾರ್ ಮಾತನಾಡಿ, ಬುಡಕಟ್ಟು ಅರಣ್ಯ ಹಕ್ಕು ಕಾಯ್ದೆ 2006ರ ಅಡಿಯಲ್ಲಿ ಡಿ.ಬಿ.ಕುಪ್ಪೆ ಮತ್ತು ಎನ್.ಬೇಗೂರು ಗ್ರಾಮ ವ್ಯಾಪ್ತಿಯಲ್ಲಿ 13 ಹಾಡಿಗಳಿಂದ ಹಾಡಿ–ಅರಣ್ಯ ಹಕ್ಕು ಸಮಿತಿಗಳ ಮೂಲಕ ಅರಣ್ಯ ಹಕ್ಕಿನ ಹಕ್ಕು ಪತ್ರಕ್ಕಾಗಿ ಅರ್ಜಿ ನಮೂನೆ ಎಬಿಸಿಗಳನ್ನು ಸಲ್ಲಿಸಿದ್ದು, ಈ ಮೇಲಿನ ಹಾಡಿಗಳ ಜಮ್ಮಾ ಪಾಳೆಯ ಪಾರಂಪರಿಕ ಸಾಕ್ಷ್ಯಾಧಾರದ ಕುರುಹುಗಳ ಕುರಿತು ಕಾಡಿನೊಳಗೆ ಹೋಗಿ ಸರಿಯಾಗಿ ಜಿಪಿಎಸ್ ಸರ್ವೆ ಕಾರ್ಯಗಳನ್ನು ಮಾಡದೇ ಅನ್ಯಾಯ ಮಾಡಿದ್ದಾರೆ ಎಂದರು.

ಕಾಡಿನೊಳಗೆ 3 ಎಕರೆಯಿಂದ 5 ಎಕರೆಯವರೆಗೆ ಜನರು ಅನುಭೋಗದಲ್ಲಿದ್ದು, ವ್ಯವಸಾಯ ಮಾಡುತ್ತಿದ್ದಾರೆ. ಈ ಭೂಮಿಯನ್ನು ಸರಿಯಾಗಿ ಸರ್ವೆ ಮಾಡಿಸಿ ಮೊದಲು ನೀಡಿರುವ ಹಕ್ಕು ಪತ್ರಗಳನ್ನು ರದ್ದು ಪಡಿಸಿ ಹೊಸ ಹಕ್ಕುಪತ್ರಗಳನ್ನು ವಿತರಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನಾಕಾರರು ಗ್ರೇಡ್–2 ತಹಸಿಲ್ದಾರ್ ಸಣ್ಣರಾಮಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿದರು ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಅವರು ಈ ವಿಚಾರ ಕುರಿತು, ಸಂಬಂಧಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಆದಿವಾಸಿ ಮಹಿಳಾ ಸಂಘದ ತಾಲೂಕು ಅಧ್ಯಕ್ಷೆ ಪ್ರೇಮಮ್ಮ, ಒಡೆಯನ ಸಂಘಗಳ ಒಕ್ಕೂಟದ ತಾಲೂಕು ಅಧ್ಯಕ್ಷ ಚಿಕ್ಕಬಸವ, ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ರಾಜು, ಮುಖಂಡರಾದ ಶಿವರಾಜು, ಹಿವನ್ ರಾಜ್, ಕುಂಟ ಕರಿಯ, ಸುಧಾ, ಆದಿವಾಸಿ ಮಹಿಳೆಯರು ಭಾಗವಹಿಸಿದ್ದರು.

# ಹ್ಯಾಂಡ್ ಪೋಸ್ಟ್‌ನಲ್ಲಿ ಉದ್ದಿಮೆ ಪರವಾನಗಿ ಮೇಳ



ಹೆಚ್.ಡಿ. ಕೋಟೆ ಜೂ. 22– ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಉದ್ದಿಮೆ ಪರವಾನಗಿ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಸುರೇಶ್ ತಿಳಿಸಿದರು.

ಪಟ್ಟಣದ ಯರಳ್ಳಿ ಮತ್ತು ಯರಹಳ್ಳಿ ಕಾವಲ್ ಕೋಟೆ ಪುರಸಭಾ ವ್ಯಾಪ್ತಿಗೆ ಬರುವ ಹ್ಯಾಂಡ್ ಪೋಸ್ಟ್‌ನಲ್ಲಿರುವ ಮಧು ಕಾಂಪ್ಲೆಕ್ಸ್‌ನಲ್ಲಿ ಗುರುವಾರ ಉದ್ಯಮಿದಾರರಿಗೆ ಅನುಕೂಲವಾಗುವಂತೆ ಉದ್ಯಮಿ ಪರವಾನಗಿ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಈ ಭಾಗದ ಉದ್ಯಮಿದಾರರು ಸಾಕಷ್ಟು ಮಂದಿ ಬಂದು ಅರ್ಜಿ ಸಲ್ಲಿಸಿ, ಪರವಾನಗಿ ಪಡೆಯಲು ಮುಂದಾದರು ಎಂದರು.

ಈ ವಿಚಾರ ಕುರಿತು ಕಳೆದ ಒಂದು ವಾರದಿಂದಲೇ ಹ್ಯಾಂಡ್‌ಪೋಸ್ಟ್ ಯರಹಳ್ಳಿ ವ್ಯಾಪ್ತಿಗೆ ಸಂಬಂಧಿಸಿದಂತೆ ಪುರಸಭಾ ಕಚೇರಿಯಿಂದ ಪ್ರಚಾರ ಮಾಡಲಾಗಿತ್ತು. ಇದಕ್ಕೆ ಹ್ಯಾಂಡ್‌ಪೋಸ್ಟ್‌ನ ವರ್ತಕರ ಮಂಡಳಿಯವರು ನಮ್ಮ ಜೊತೆ ಕೈಜೋಡಿಸಿ ಉದ್ಯಮಿ ಪರವಾನಗಿ ಮೇಳಕ್ಕೆ ಸಹಕಾರ ನೀಡಿದ್ದು, ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ ಎಂದರು.

ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯರಾದ ಪ್ರೇಮ್ ಸಾಗರ್, ಹರೀಶ್ ಗೌಡ, ಕವಿತಾ ಸುರೇಶ್, ಪುರಸಭಾ ಸಿಬ್ಬಂದಿಗಳಾದ ರಕ್ಷಿತಾ ಸಂತೋಷ್ ಹರೀಶ್, ಪ್ರತಿಕ್, ರಾಜಶೇಖರ್, ನಂದಿನಿ, ಅನು, ಚೌಡ ನಾಯಕ, ವರ್ತಕ ಸಂಘದ ಅಧ್ಯಕ್ಷರು ಭಾಗವಹಿಸಿದ್ದರು.

# ಮಾದಿಗ ಸಮುದಾಯಕ್ಕೆ ನಿಗಮ–ಮಂಡಳಿಗಳಲ್ಲಿ ಆದ್ಯತೆ ನೀಡಿ

## ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಅಗ್ರಹ



ತಿ.ನರಸೀಪುರ, ಜೂ.22– ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಲಿತ ಸಮುದಾಯ, ಎಡಗೈ ಸಮಾಜ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ, ಹೆಚ್ಚಿನ ಶಾಸಕರನ್ನು ಆಯ್ಕೆ ಮಾಡಿ ಸ್ವತ ಬಲದ ಮೇಲೆ ಸರ್ಕಾರ ಬರಲು ಕಾರಣವಾಗಿದ್ದು, ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿರುವ ಮಾದಿಗ ಸಮುದಾಯದ ಮುಖಂಡರಿಗೆ ನಿಗಮ ಮಂಡಳಿಗಳಲ್ಲಿ ಸೂಕ್ತ ಸ್ಥಾನಮಾನವನ್ನು ನೀಡಬೇಕು ಎಂದು ತಾಲೂಕು ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಒತ್ತಾಯಿಸಿದರು.

ಸಂಘಟನೆಯ ಆರಂಭದ ಪೂರ್ವಭಾವಿಯಾಗಿ ಪದಾಧಿಕಾರಿಗಳೊಂದಿಗೆ ಪಟ್ಟಣದಲ್ಲಿ ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ ಅವರನ್ನು ಸನ್ಮಾನಿಸಿದ ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸಾರಥ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರ ಬರಲು ಸಮಸ್ತ ದಲಿತ ಸಮುದಾಯ ಕೈ ಹಿಡಿದಿರುವುದರಿಂದ ಮೈಸೂರು ಭಾಗದ ಮಾದಿಗ ಸಮುದಾಯದ ಮುಖಂಡರಿಗೆ ನಿಗಮ ಮಂಡಳಿಗಳಲ್ಲಿ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

> ಸಮುದಾಯದ ಕ್ರಿಯಾಶೀಲ ಮಹಿಳಾ ನಾಯಕರೂ ಆಗಿರುವ ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ ಅವರು ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಹಗಲಿರುಳು ದುಡಿದಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಗೆಲ್ಲಲು ಅಳಿಲು ಸೇವೆ ಸಲ್ಲಿಸಿದ್ದಾರೆ. ಸಮಾಜದ ಮಹಿಳೆಯೊಬ್ಬರು ನಮ್ಮಗಳ ಧ್ವನಿಯಾಗಲು ಅವರಿಗೆ ಜವಾಬ್ದಾರಿಯುತ ಸ್ಥಾನವನ್ನು ಕಾಂಗ್ರೆಸ್ ವರಿಷ್ಠರು ಕಲ್ಪಿಸಬೇಕು.
> –ಮಲಿಯೂರು ಡಿ.ಶಂಕರ್

ಸನ್ಮಾನ ಸ್ವೀಕರಿಸಿದ ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ ಮಾತನಾಡಿ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಹಿಂದುಳಿದ ದಲಿತ ಎಡಗೈ ಸಮುದಾಯ ದಲಿತಪರ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸೌಲಭ್ಯಗಳನ್ನು ಪಡೆಯಲು ಒಗ್ಗಟ್ಟಾಗಿರಬೇಕು. ಸಮುದಾಯದ ಧ್ವನಿಯಂತಿರುವ ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯ ಒದಗಿಸುವ ಬಗ್ಗೆ ಸಂಪೂರ್ಣವಾದ ನಂಬಿಕೆಯಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಜಿ.ಎನ್. ಪುಟ್ಟಸ್ವಾಮಿ, ಖಜಾಂಚಿ ಬನ್ನೂರು ಪುರಸಭಾ ಸದಸ್ಯ ಶಿವಣ್ಣ, ಸೋಮನಾಥಪುರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸಿದ್ದಪ್ಪ, ಮುಖಂಡರಾದ ಸುರೇಶ್, ಮಹದೇವಣ್ಣ, ಶ್ರೀಧರ್, ಬ್ಯಾಂಕ್ ಲಿಂಗರಾಜಣ್ಣ, ದೊಡ್ಡರಾಜು ಹಾಗೂ ಇನ್ನಿತರರು ಹಾಜರಿದ್ದರು.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
- ಸ್ಕ್ರೀನ್ 2 ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
- ಸ್ಕ್ರೀನ್ 3 ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
- ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
- ಸ್ಕ್ರೀನ್ 2 ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
- ಸ್ಕ್ರೀನ್ 3 ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
- ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

## ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ತಲೈ ನಾಗರಾಮ್ –2 (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಆದಿಪುರುಷ (ಕ) ಆದಿಪುರುಷ (ಹಿ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಒನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಗಡಾರ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಅಗ್ರಸೇನಾ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಧೂಮಮ್ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಪಾಯಮ್ ಓಲಿ ನೀ ಎನಕ್ಕು (ತ) | 4 ಪ್ರದರ್ಶನಗಳು |
| **ಸಂಗಂ** | |
| ಆದಿಪುರುಷ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಅಗ್ರಸೇನಾ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ವಾರಿಸು (ತ) | 4 ಪ್ರದರ್ಶನಗಳು |
| **ಪ್ರಭಾ** | |
| ಜೈಲಲಿತ (ಕ) | 4 ಪ್ರದರ್ಶನಗಳು |

## ಮೈಸೂರು ಬೇಸಿಗೆ ಕಾಲದ ರೇಸುಗಳು

5ನೇ ದಿನ, ಶುಕ್ರವಾರ 23-6-2023

### ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ತಲಕಾವೇರಿ ಪ್ಲೇಟ್ ಡಿ2–1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಪೆಲಿಸಿಟಾ 2. ಕಂಟ್ರೀಸ್ ಚೀಫ್ 3. ಇನ್‌ಫಿನಿಟಿ ಗ್ರೇಸ್

II. ತಲಕಾವೇರಿ ಪ್ಲೇಟ್ ಡಿ1–1100 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕೂರ್ಗ್ ಜನರಲ್ 2. ಲೀಡ್ ಸಿಂಗರ್ 3. ಸ್ವಿಸ್ ಟೈಗರ್ಸ್

III. ಕೊಡ್ಲಿಪೇಟೆ ಪ್ಲೇಟ್–1200 ಮೀ. 3 ವರ್ಷ (ಟರ್ಮ್ಸ್). ಮ.3.00ಕ್ಕೆ
1 ಜನೀರೊ 2. ಅಂಕುಶ್ 3 ಶೀಬಾ

IV. ರಿಪಬ್ಲಿಕನ್ ಪ್ಲೇಟ್ – 2000 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಗ್ರೇಟ್ ಹೋಪ್ 2. ಸನ್‌ಲೈಟ್ ಸ್ಟ್ರಾಮ್ 3. ತಾರೆಕ್

V. ಡಾ. ಎನ್.ಎಂ. ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ –1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಮೌಂಟೇನ್ ಲಯನ್ 2. ಪವರ್ ಆಫ್ ಕಾಂತರ 3. ಗ್ಯಾಮಾ

VI. ಹಿರಿಯೂರ್ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸಂಟೋರಿನಿ 2. ಔರ್‌ಲೆ 3. ವಿವಲಾ ವೀದಾ

VII. ಕಿನ್ಸ್ ಕಿ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಅಸ್ತ್ರಾ 2. ಅಕ್ವಿಲಾ ಡಿ ಓರಾ 3. ವಿಂಡ್ ವಿಶಲರ್

| | |
|---|---|
| ದಿನದ ಅತ್ಯುತ್ತಮ | : ಕೂರ್ಗ್ ಜನರಲ್ |
| ಡಬ್ಬಲ್ | : ಪೆಲಿಸಿಟಾ, ಜನೀರೊ |
| ಜಾಕ್‌ಪಾಟ್ | : 3, 4, 5, 6 ಮತ್ತು 7 |
| I ಟ್ರಿಬಲ್ | : 2, 3 ಮತ್ತು 4 |
| II ಟ್ರಿಬಲ್ | : 5, 6 ಮತ್ತು 7 |
| ಎಕ್ಸ್‌ಆಕ್ಟ್ | : 1 ರಿಂದ 7 |

ಟಿಪ್‌ಸ್ಟರ್ ಪಿಜಿಸಿ

## ಸರಗೂರು ಸರ್ಕಾರಿ ಶಾಲೆಯಲ್ಲಿ ಯೋಗ



ಸರಗೂರು ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ದೈಹಿಕ ಶಿಕ್ಷಕಿ ಶಾಂತವ್ವ ಅಪ್ಪಣ್ಣವರು ಯೋಗ ಕಾರ್ಯಕ್ರಮ ನಡೆಸಿದರು, ಮುಖ್ಯಶಿಕ್ಷಕರಾದ ನಾಗರಾಮಶೆಟ್ಟಿ, ಸಹಶಿಕ್ಷಕರಾದ ಮಧು, ಕುಮಾರ್, ಅತಿಥಿ ಶಿಕ್ಷಕರಾದ ರೇಖಾ, ಎಸ್‌ಡಿಎಂಸಿ ಅಧ್ಯಕ್ಷ ಮಾದೇಶ್, ಹಾಗೂ ಶಾಲಾ ಮಕ್ಕಳು ಭಾಗಿಯಾಗಿದ್ದರು.

6ನೇ ವರ್ಷದ ಸವಿನೆನಪು



ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ. ನಿಮ್ಮ ಆದರ್ಶವೇ ನಮಗೆ ದಾರಿದೀಪ, ನಿಮ್ಮ ಮಾರ್ಗ ದರ್ಶನವೇ ನಮಗೆ ಚೇತನ ನಾವುಗಳು ಸದಾ ನಿಮ್ಮ ನೆನಪಿಸಿಕೊಳ್ಳುತ್ತೇವೆ, ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ಸಿ.ಪ್ರಕಾಶ್
ಮುಖ್ಯ ಶಿಕ್ಷಕರು, ತಮ್ಮಡಹಳ್ಳಿ
ಮರಣ: 23–06–2017

ಪತ್ನಿ: ಮಂಜುಳ ಪ್ರಕಾಶ್ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು, ಸಾಲಿಗ್ರಾಮ, ಕೆ.ಆರ್.ನಗರ ತಾ॥

ಸವಿನೆನಪು



ನೀವು ನಮ್ಮನ್ನಗಲಿ 15 ವರ್ಷ ಕಳೆದರೂ ನಮ್ಮ ಮನಸ್ಸಿನಲ್ಲಿ ಹಸಿರಾಗಿದ್ದೀರ

ದುಃಖತಪ್ತರು:
ಲೀಲಾವತಿ.ಎಸ್,
ಕೌಸಲ್ಯ.M.P,
ಮಹೇಶ್.ಎಂ.ಆರ್,
ದಿವ್ಯ.ಎಂ.ಆರ್,
ಪುರುಷೋತ್ತಮ್.ಎಂ.ಆರ್,
ಕುಟುಂಬವರ್ಗದವರು

ಆರ್.ರವೀಂದ್ರಬಾಬು
(ನೀರಾವರಿ ಇಲಾಖೆ ಕೆ.ಆರ್.ಎಸ್)



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



**IN THE COURT OF HON'BLE VI ADDL SENIOR CIVIL JUDGE AND C.J.M. AT MYSURU.**
**ORIGINAL SUIT NO:368 OF 2021**

**Plaintiffs:** Bolamma@Ramamma @Ningamma, Since deceased by her Lrs Beeramma and others.

V/S

**Defendant's:** Beeregowda@Motthegowda@Mottha & others.

5. Smt. Kempamma, W/o.late Chikkaiah.. Aged about 65 years R/at Ramamandira Road. T.K.Lavout Mysore.

Since dead by Lrs of Defendant no.6 D6(a) Malamma, W/o Papanna, Aged about 55 years
D6(b) Lakshmi, W/o. Koniya, Aged about 47 Years.
D6( c) Mangli, W/o. Govinda, Aged about 46 years
D6(d) Shivamma, W/o. Shivu, Aged about 44 years,
D6(e) Shivanna, W/o. Late Chikkamallaiah Aged about 44 years
All are residing at No.47 Ramamandira Road, Thonachikoppal, Mysuru.

**Since dead by Lrs of Siddaiah no.7.**
D7(a) Malamma, W/o. late Mondi Siddaiah, Aged about 57 years.
D7 (b) Raju, S/o. late Mondi Siddaiah, Aged about 44 years,
D7( c) Rekha, D/o Siddaiah, Aged about 30 years.
All are residing at Kadakola Village, Jayapuara Hobli, Mysuru Taluk and District.

11. Smt. Thayamma, D/o. Kariyayya, Aged about 44 years R/at Besides Siddarameswara Temple, Kadakola Village, Hobli, Mysore taluk.
17. Sri. Thimmamma, W/o. Chikkanayaka, Aged about 60 years R/at Kadakola Village, Jayapura Hobli, Mysore Taluk).
18. Smt.Puttathimmamma, W/o. late Chikkamuddanayaka. Aged about 72 years, R/at Kadakaola Village, Jayapura Hobli, Mysore.

**PAPER PUBLICATION**

That the Plaintiffs have filed the above suit against the Defendants for the relief of partition and separate possession in respect of the suit schedule property. You have been made as the Defendants in the above case. The Summons sent by this Honble Court returned un served. Now, the above case stands posted to 07-08-2023. Hence, you are hereby called upon to appear before the Court in person or through your Counsel on 07-08-2023 at 11.00 AM. Failing which the above case will proceed in accordance with Law.

**SCHEDULE**

**Item no.1**-Agriculture land bearing Sy. 60/1, Situated at Doddakanya Village, Known as Yakana kaddi mala, Jayapura Hobli, Mysore Taluk, Measuring 1 acre 04 guntas Bounded on East by private Property, West by private property, South by Private property and North by private property.

**Item no.2**-Agriculture land bearing Sy. 60/5, Situated at Doddakanya Village, Jayapura Hobli, Yakana kaddi mala, Mysore Taluk, Measuring 1 acre 30 guntas. Bounded on East by private -Property, West by private property, South by Private property and North by private property.

**Item no.3**-Agriculture land bearing Sy. 65/5, Situated at Doddakanya Village, Jayapura Hobli, Mysore Taluk, Measuring 1 acre 4 guntas. Bounded on East by water flowing channel, West by private property, South by Private property and North by private property.

**Item no.4**-Agriculture land bearing Sy. 38/1, Situated at Doddakanya Village, Jayapura Hobli, Mysore Taluk, Measuring 3 acre 27 guntas. Bounded on East by Private property, West by private property, South by Private property and North by private property.

**Item no.5**-Agriculture land bearing Sy. 40/2, Situated at Mysore Nanjangud Road, Madrakalli Village, Varuna Hobli, Mysore Taluk, Measuring 4 acres. Bounded on East by Private property, West by road, South by Private property and North by private property.

**Item no.6**-land bearing Sy. 26/1A, Situated at Mysore Nanjangud Road, Madrakalli Village, Varuna Hobli, Mysore Taluk, Measuring 4 acres 1 gunta, Bounded on East by Private property, West by Private property, South by Private property and North by private property.

**Given under my hand seal on this 20-6-2023 day at Mysore.**

By order of the Court, Sd/- Chief Ministerial Officer, Court of Senior Civil Judge and CJM, Mysuru

Sd/- **Sri. B.R. Chandramouli, B.Com., L.L.B.,** Advocate,
No.68, 1st Floor, Vasanth Mahal Road, Century Park Layout,
Nazarbad Mohalla, Mysuru.
Place: Mysuru, Date: 20.6.2023






ಹಸಿರು ನಮ್ಮ ಉಸಿರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು